UNIVERSAL
LIBRARY
OU_198109
UNIVERSAL
LIBRARY

ಶಾರದಾ ಸಾಹಿತ್ಯಮಾಲೆ ಕಿರಣ ೪

# ಜೀವನ ಕಲೆ

[ಸಣ್ಣ ಕತೆಗಳ ಸಂಕಲನ]

ಬಸವರಾಜ ಕಟ್ಟೀಮನಿ

ಜಿ. ಬಿ. ರಾಜ್

ಕರ್ನಾಟಕ ಸಾಹಿತ್ಯಮಂದಿರ
ಧಾರವಾಡ.

## ಬಸವರಾಜ ಕಟ್ಟೀಮನಿಯವರ
## ಕೃತಿಗಳು

ಕಾರವಾನ್ (ಕಥಾಸಂಗ್ರಹ)

ಗುಲಾಬಿ ಹೂ ,,

ಸ್ವಾತಂತ್ರ್ಯದೆಡೆಗೆ (ರಾಜಕೀಯ ಕಾದಂಬರಿ)

ಆಗಸ್ಟ್ ಒಂಬತ್ತು (ಅಚ್ಚಿನಲ್ಲಿ)

ಕವಿವರ್ಯ

ಕೆ. ವಿ. ಪುಟ್ಟಪ್ಪನವರಿಗೆ

# ಬಸವರಾಜ ಕಟ್ಟೀಮನಿ

೧) ಜೀವನ-ಕಲೆ

೨) ಎರಡು ಗುಲಾಬಿ

೩) ಒಂಬತ್ತು ಕಾಸು !

೪) ಉಪ ಸಂಪಾದಕನ ಕುರ್ಚಿ

೫) ಗಿರಿಜಾ ಕಂಡ ಸಿನಿಮಾ

# ಜೀವನ-ಕಲೆ!

ಆ ನಗರವೆಲ್ಲ ರಾಯರನ್ನು ' ಕಲಾಪ್ರೇಮಿ ' ಎಂದು ಕರೆಯುತ್ತಿತ್ತು.

' ಕಲೆಗಳ ಪುನರುಜ್ಜೀವನಕ್ಕಾಗಿ ಮೀಸಲಾದ ಮಾಸಪತ್ರಿಕೆ' ಯೊಂದು ಇನ್ನೂ ಕೊಂಚ ಮುಂದೆ ಹೋಗಿ ರಾಯರ ಜೀವನ ಚಿತ್ರವನ್ನೂ ಪ್ರಕಟಿಸಿ ಬಿಟ್ಟಿತ್ತು. ' ಕಲಾರಸಿಕ ಶಿಖಾಮಣಿ ' ಎಂಬ ಅಮೋಘವಾದ ಪದವಿಯನ್ನೂ ರಾಯರಿಗರ್ಪಿಸಿತ್ತು.

ಆ ಉಚ್ಚ ಪದವಿಗೆ ಶೋಭಿಸುವ ಹಾಗೆಯೆ ರಾಯರ ಜೀವನವೂ ಇರಬೇಕಲ್ಲವೆ! ಅಂತೆಯೆ ದೇಶ ವಿದೇಶಗಳ ಪ್ರಖ್ಯಾತ ಕಲಾವಿದರನೇಕರ ಬಹು ಮೂಲ್ಯ ಕೃತಿಗಳನ್ನು ರಾಯರು ಸಂಗ್ರಹಿಸಿದ್ದರು. ಅವರ ದಿವಾನ ಖಾನೆಯೆಂದರೆ ಒಂದು ಪುಟ್ಟ ಚಿತ್ರ ಪ್ರದರ್ಶನಾಲಯವೆ! ನೀರಿನಂತೆ ಹಣ ಸುರಿದು ಕಲೆಯನ್ನು ಕೊಂಡು ರಾಯರು ಅದನ್ನಲ್ಲಿ ಸೆರೆ ಹಾಕಿದ್ದರು.

ಬಂಗಾಲದ ಪ್ರಸಿದ್ಧ ಚಿತ್ರಕಾರನೊಬ್ಬ ಅಂದು ಅವರ ಪಟ್ಟಣಕ್ಕೆ ಬಂದಿದ್ದ. ಪುಟ್ಟ ಮನೆಯೊಂದರಲ್ಲಿ ತನ್ನ ಚಿತ್ರ ಪ್ರದರ್ಶನಕ್ಕೆ ಏರ್ಪಾಟು ಮಾಡಿದ್ದ. ಅರ್ಥಾತ್ " ಕಲಾಪ್ರೇಮಿ " ಬಿರುದಾಂಕಿತ ಶ್ರೀಮಾನ್ ರಾಯರೇ ಆ ಪ್ರದರ್ಶನದ ಉದ್ಘಾಟನ ಸಮಾರಂಭ ನೆರವೇರಿಸಬೇಕಷ್ಟೆ !

ಗೊತ್ತುಪಡಿಸಿದ್ದ ಸಮಯಕ್ಕೆ ಸರಿಯಾಗಿ ರಾಯರು ಪ್ರದರ್ಶನಾಲ ಯಕ್ಕೆ ದಯಮಾಡಿಸಿದರು. ನೆರೆದಿದ್ದ ನಾಗರಿಕರನ್ನು ಕುರಿತು ಪುಟ್ಟದೊಂದು ಭಾಷಣ ಕೊಟ್ಟರು. " ನಮ್ಮ ಮುದ್ದಿನ ಕಲಾದೇವಿ ಇಂದು ಮೃತಾವ ಸ್ಥೆಯಲ್ಲಿದಾಳೆ. ಆಕೆಯ ಪ್ರೀತಿಯ ಕಂದಮ್ಮಗಳಿಗೆ ತುತ್ತು ಕೂಳಿಲ್ಲ. ಸಮಾಜ ಅವರಿಗೆ ಯಾವ ಗೌರವವನ್ನೂ ಕೊಡುತ್ತಿಲ್ಲ. ಮಾನ ಮರ್ಯಾ ದೆಯನ್ನೂ ಸಲ್ಲಿಸುತ್ತಿಲ್ಲ. ಖಂಡಿತ ಮಾಯವಾಗಬೇಕು ಈ ಶೋಚನೀಯ ಸ್ಥಿತಿ. ಕಲಾವಿದರಿಗೆ ತಕ್ಕ ಮಾನ, ಮರ್ಯಾದೆ, ಸಂಪತ್ತು ಎಲ್ಲವೂ ದೊರೆಯಬೇಕು. ನರಳುತ್ತಿರುವ ಕಲಾದೇವಿ ಮತ್ತೆ ಮೇಲಕ್ಕೇಳಬೇಕು'' ಇತ್ಯಾದಿ ಇತ್ಯಾದಿ....

ಭಾಷಣ ಮುಗಿದ ಬಳಿಕ ಚಿತ್ರಗಳ ನಿರೀಕ್ಷಣೆಗಾರಂಭವಾಯಿತು. ಒಂದೊಂದು ಚಿತ್ರಕ್ಕೂ ಒಂದೊಂದು ಬಗೆಯ ಪ್ರಶಂಸೆ. 'ಎಕ್ಸಲಂಟ್.' ಬ್ಯೂಟಿಫುಲ್,' 'ಚಾರ್ಮಿಂಗ್' ಇತ್ಯಾದಿ ಉದ್ಗಾರ. ಜಂಬದಿಂದ ತಲೆ ಯೆತ್ತಿ ಕುಣಿಯುವ ಕೋಳಿಯಂತೆ, ಚಿತ್ರಕಾರ ಹೆಮ್ಮೆಯಿಂದ ರಾಯ ರನ್ನು ಹಿಂಬಾಲಿಸುತ್ತ ಚಿತ್ರಗಳ 'ಆಂತರಿಕ ರಹಸ್ಯ'ಗಳನ್ನು ಬಿಡಿಸಿ ಬಿಡಿಸಿ ವಿವರಿಸುತ್ತಿದ್ದ.

ಒಂದು ಚಿತ್ರದ ಹತ್ತಿರ ಬಂದು ರಾಯರು ಕ್ಷಣಕಾಲ ತಡೆದು ನಿಂತರು. ಅವರ ಕೈಗಡಿಯಾರದಲ್ಲಿನ ನಿಮಿಷದ ಮುಳ್ಳು ಹಾಗೇ ಮುಂದೋಡುತ್ತಿತ್ತು. ರಾಯರು ಮಾತ್ರ ನಿಂತಲ್ಲಿಯೇ ನಿಂತಿದ್ದರು. ಕದಲಲಿಲ್ಲ. ಆ ಚಿತ್ರದ ಮೇಲೆ ಕೇಂದ್ರೀಕೃತವಾಗಿತ್ತು ಅವರ ದೃಷ್ಟಿ.

ಗಿಡವೊಂದಕ್ಕೆ ಆತು ನಿಂತುಕೊಂಡು ಭಿಕ್ಷೆ ಬೇಡುತ್ತಿದ್ದ ಭಿಕಾರಿಯೊಬ್ಬನ ಚಿತ್ರ ಅದು. ಜಗತ್ತಿನಲ್ಲೆಲ್ಲೂ ಆಸರ ದೊರೆಯದೆ ನಿಸ್ಸಹಾಯ ನಾಗಿ, ನಿರುಪಾಯನಾಗಿ ಅಲ್ಲಿಗೆ ಬಂದು, ಆ ಮೂಕ ಗಿಡಕ್ಕೆ ಬೆನ್ನುಕೊಟ್ಟು ನಿಂತಹಾಗಿತ್ತು,ಅವನ ಮುಖಭಾವ. ಕೈಲೊಂದು ಕೋಲಿದೆ. ಆದರೂ ಅದರ ಅರಿವು ಅವನಿಗಿದ್ದಂತಿಲ್ಲ. ಎಡಗೈಯಲ್ಲಿ ಒಂದು ಭಿಕ್ಷಾಪಾತ್ರೆ. ಅದನ್ನು ಕೊಂಚ ಮುಂದೆ ಚಾಚಿದ್ದಾನೆ. ಆದರೆ ಭಿಕ್ಷೆ ಬೀಳಬೇಕೆಂಬ ನಿರೀಕ್ಷೆಯೇನೂ ಅವನಿಗಿದ್ದಂತಿಲ್ಲ. ಮೈಯೆಲ್ಲಾ ಮೂಳೆ ಮೂಳೆ. ಕಣ್ಣುಗಳ ಸುತ್ತಮುತ್ತಲೆಲ್ಲ ಕಪ್ಪು ಕಪ್ಪು. ಆ ಕಣ್ಣಬೊಂಬೆಗಳೊ ! ಅಲ್ಲಿ ಕಳೆಯಿಲ್ಲ. ಬೆಳಕಿಲ್ಲ. ತೇಜಸ್ಸಿನದೊಂದು ಕಣವೂ ಇಲ್ಲ. ದೃಷ್ಟಿ ಎಲ್ಲಿದೆಯೊ, ಏನನ್ನು ಅರಸುತ್ತಿದೆಯೊ !

'Wonderful' ಎಂದು ಉದ್ಗಾರ ತೆಗೆದು ರಾಯರು ಕಲೆಯಿಂದ ಉನ್ಮತ್ತರಾದವರಂತೆ ಚಿತ್ರಕಾರನ ಕೈಯನ್ನು ರಭಸದಿಂದ ಕುಲುಕಿಸಿ ಹೇಳಿದರು.

'ನಿಮ್ಮ ಈ ಕೃತಿಯಲ್ಲಿ ನಿಜಕ್ಕೂ ಕಲಾವೇಶಿಯನ್ನ ಕಂಡೆ ನಾನು. ಧನ್ಯ ! ನೀವೇ ಧನ್ಯ ! ಏನು ನಿಮ್ಮ ಕಲಾವೈಭವವಪ್ಪ ! ಭಿಕಾರಿಯ ನ್ನಲ್ಲಿ ಜೀವಕಳೆ ಕೊಟ್ಟು ತಂದು ನಿಲ್ಲಿಸಿದ್ದೀರಿ ಈ ಕಾಗದದ ಮೇಲೆ !

ನಿಮ್ಮಂಥಾ ಶ್ರೇಷ್ಠ ಕಲಾವಿದರು ಈಗಲೂ ಭಾರತದಲ್ಲಿರೋದು ನಮ್ಮ ನಾಡಿಗೇ ಒಂದು ಹೆಮ್ಮೆಯ ವಿಚಾರ.... !'

ಬಿಂಕದ ನಗೆಯೊಂದಿಗೆ ಹೇಳಿದ ಚಿತ್ರಕಾರ.

'ಮೊನ್ನೆ ನಡೆದ ಅಖಿಲ ಭಾರತೀಯ ಚಿತ್ರಕಲಾ ಪ್ರದರ್ಶನದಲ್ಲಿ ಮೊದಲ ಬಹುಮಾನ ಬಂದಿದೆ ಸ್ವಾಮಿ ಈ ಚಿತ್ರಕ್ಕೆ !'

'ಓಹೋ ! ಬಾರದೇನು ಮಾಡೀತು ! ಇಂಥಾ ಚಿತ್ರರತ್ನಕ್ಕಲ್ಲದೆ ಇನ್ನಾವುದಕ್ಕೆ ಬರಬೇಕು ಬಹುಮಾನ ! ನನ್ನ ಹೃದಯವನ್ನೇ ಕದ್ದುಕೊಂಡಿದೆ ನಿಮ್ಮ ಚಿತ್ರ. ಇದರ ಬೆಲೆ ಏನಿದ್ದರೂ ಪರವಾಯಿಲ್ಲ. ದಯವಿಟ್ಟು ನನಗೇ ಕೊಟ್ಟುಬಿಡಬೇಕು' ಎಂದು ರಾಯರು ಬಿನ್ನವಿಸಿಕೊಂಡರು.

ಸರಿ. ಐದುನೂರು ರೂಪಾಯಿಗಳಿಗೆ ಆ ಚಿತ್ರವನ್ನು ತಮ್ಮದನ್ನಾಗಿ ಮಾಡಿಕೊಂಡುದೂ ಆಯಿತು. ತುಂಬಾ ಜಾಗರೂಕತೆಯಿಂದ ಅದನ್ನು ತಮ್ಮ ಕಾರಿನಲ್ಲಿರಿಸಿಕೊಂಡು ರಾಯರು ಉಲ್ಲಸಿತವೃತ್ತಿಯಿಂದ ಮನೆಗೆ ಹೊರಟರು. ದಾರಿಗುಂಟ ಅವರ ತಲೆಯಲ್ಲೆಲ್ಲ ' ಕಲೆ ! ಕಲೆ ! ಕಲೆ !'

ಕಾರು ನಿಲ್ಲಿಸಿ ರಾಯರು ತಮ್ಮ ಮನೆಯ ಮುಂಬಾಗಿಲಿನಲ್ಲಿ ಅಡಿಯಿರಿಸುತ್ತಿದ್ದ ಹಾಗೆ ಭಿಕಾರಿಯೊಬ್ಬ ಅವರ ಮುಂದೆ ಬಂದ. ಕೈಲಿದ್ದ ಭಿಕ್ಷಾ ಪಾತ್ರೆಯನ್ನು ಮುಂದೆ ಚಾಚಿದ. ಜಗತ್ತಿನ ಎಲ್ಲ ದಲಿತರ ದೈನ್ಯವೂ ತುಂಬಿ ಬಂದಂತಿದ್ದ ದನಿಯಲ್ಲಿ ಕಿರುಚಿಕೊಂಡ.

'ಅಪ್ಪಾ ! ಒಂದು ಕಾಸು ನಿಮ್ಮ ಧರ್ಮ !'

ಕೋಪ, ತಿರಸ್ಕಾರ ತುಂಬಿದ ದೃಷ್ಟಿಯನ್ನು ಅವನ ಕಡೆ ಹೊರಳಿಸಿದರು ರಾಯರು. ಅಸ್ಥಿಪಂಜರದಂತಹ ಆ ಶರೀರ ! ಆ ಹರಕು ಹೊಲಸು ಬಟ್ಟೆ ! ಕೈಯಲ್ಲಿ ಕೋಲಿದ್ದರೂ ಅವನ ದೇಹವೆಲ್ಲ ಒಂದೇಸಮನೆ ಕಂಪಿಸುತ್ತಿತ್ತು. ಎದೆಯಲ್ಲಿನ ಕಳವಳವೆಲ್ಲ ದೃಷ್ಟಿಯಲ್ಲಿ ಕೋಡಿಯಾಗಿ ಹರಿದು ಬರುತ್ತಿತ್ತು.

'ದೂರ ಸರಿ ಚಂಡಾಲಾ ! ಎಷ್ಟು ಹೊಲಸು ವಾಸ ! ಶಿ: ! ಹೊತ್ತಿಲ್ಲ ! ಗೊತ್ತಿಲ್ಲ ! ಕಾಸು ಕೇಳೋಕೆ ಬರ್ತಾರೆ ಮುಂಡೇಮಕ್ಕಳು !

ಇವರಪ್ಪ ಗಳಿಸಿಟ್ಟಿದಾನೆ....' ಎಂದು ಗದರಿಸಿಬಿಟ್ಟು ರಾಯರು ಮನೆ ಸೇರಿದರು.

ಆ ಐನೂರು ರೂಪಾಯಿಯ ಕಲಾಕೃತಿಯನ್ನು ದಿವಾನಖಾನೆಯ ಗೋಡೆಯ ಮೇಲೆ ನೇತುಹಾಕುತ್ತಿದ್ದ ಹಾಗೆ ರಾಯರೂ ಅವರ ಶ್ರೀಮತಿಯವರೂ ಏಕಕಂಠದಿಂದ ಉದ್ಗಾರ ತೆಗೆಯುತ್ತಿದ್ದರು.

'ಆಹಾ! ಏನು ಕೌಶಲ್ಯ! ಎಂಥಾ ಕಲೆ! ಐನೂರು ರೂಪಾಯಿ ಅಂದರೆ ಇನ್ನೂ ಕಡಮೇನೇ ಇದರ ಬೆಲೆ!'

ಬಾಗಿಲಿನ ಆಚೆ ಗಡಗಡ ನಡುಗುತ್ತ ನಿಂತಿದ್ದ ಭಿಕಾರಿ ಆರ್ತಸ್ವರದಿಂದ ಕೂಗುತ್ತಿದ್ದ.

'ಎರಡು ದಿನದಿಂದ ಹೊಟ್ಟೆಗಿಲ್ಲ ತಂದೇ! ಒಂದು ಹಿಡಿ ಅನ್ನಾನಾದರೂ ಹಾಕಿ ನಿಮ್ಮ ಧರ್ಮಾ!' ಎಂದು.

**ಬೆಳಗಾವಿ ಸೆರೆಮನೆ. ೬-೧೨-೪೨**

# ಎರಡು ಗುಲಾಬಿ !

ಅವಳ ಮನೆಯೆದುರಿನ ಪುಟ್ಟ ಕೈದೋಟದಲ್ಲಿ ತಲೆಯೆತ್ತಿ ನಿಂತಿದ್ದಿತು ಒಂದು ಗುಲಾಬಿ ಗಿಡ.

ಆಗತಾನೆ ಅರಳಿದ ಗುಲಾಬಿ ಹೂಗಳೆರಡು ಆ ಗಿಡದ ತುದಿಯಲ್ಲಿ ಅಕ್ಕಪಕ್ಕದಲ್ಲಿ ನಿಂತಿದ್ದವು–ಪ್ರೇಮದ ಪಿಸುಮಾತನಾಡುವ ಅವಳಿ ಜವಳಿ ಅಕ್ಕತಂಗಿಯರ ಹಾಗೆ !

ಬೆಳ್ಳಗೆ ಬೆಳಗಾಗಿದ್ದಿತು. ಬಾಲರವಿಯ ಎಳೆಕಿರಣಗಳು ಆ ಗುಲಾಬಿಗಳೆರಡನ್ನೂ ಮೃದುವಾಗಿ ಚುಂಬಿಸುತ್ತಿದ್ದವು. ಆ ಕಿರಣಗಳ ಕೆಂಪು ಗುಲಾಬಿಗಳ ಕೆನ್ನೆಗಳ ಸೌಂದರ್ಯವನ್ನು ನೂರ್ಮಡಿಯಾಗಿ ಹೆಚ್ಚಿಸುತ್ತಿತ್ತು.

ಮಿಂದು, ಮಡಿಸೀರೆಯನ್ನುಟ್ಟುಕೊಂಡು ಅವಳು ಮೆಟ್ಟಲುಗಳನ್ನಿಳಿದು ಬರತೊಡಗಿದಳು. ಅವಳ ಕಣ್ಣಾಲಿಗಳಲ್ಲಿ ರವಿಕಿರಣಗಳು ಪ್ರವೇಶಿಸಿದಾಗ ಚಕಚಕನೆ ಮಿಂಚು ಹೊಳೆದಂತಾಯಿತು. ಅವಳ ನೀಳವಾದ ಕೂದಲುಗಳು ಭುಜಗಳ ಮೇಲಿಳಿದು ಉಯ್ಯಾಲೆಯಾಡುತ್ತಿರುವಾಗ ಸಾವಿರಾರು ಸರ್ಪಗಳು ಏಕಕಾಲಕ್ಕೆ ಜೀಕವಾಡುವ ಹಾಗೆ ತೋರುತ್ತಿತ್ತು.

ಆ ಸುಂದರಿಯ ಕರಸ್ಪರ್ಶಕ್ಕಾಗಿ ಆ ಹೂಗಳೆರಡೂ ಹಾತೊರೆಯತೊಡಗಿದವು.

ಆಕೆ ಮೆಲ್ಲನೆ ಹೂಗಿಡದ ಹತ್ತಿರ ಬಂದಳು. ಮುಟ್ಟಿಯೂ ಮುಟ್ಟದಿದ್ದ ಹಾಗೆ ಆವೆರಡೂ ಹೂಗಳನ್ನು ಮುಟ್ಟಿ ಕೈಗೆತ್ತಿಕೊಂಡಳು. ಬಂದ ಹಾಗೆ ಮನೆ ಸೇರಿದಳು.

ಆ ಚೆಲುವೆಯ ಮುಡಿಯ ಮಡಿಲನ್ನೇರುವುದಕ್ಕಾಗಿ, ಅವಳ ಆ ಕೆಂಪಗಿನ ಕೆನ್ನೆಗಳನ್ನು ಮುತ್ತಿಟ್ಟುಕೊಳ್ಳುವುದಕ್ಕಾಗಿ ಆವೆರಡೂ ಉತ್ಸುಕತೆಯಿಂದ ಕಾಯತೊಡಗಿದವು.

ನೇರವಾಗಿ ಆಕೆ ದೇವರ ಮನೆಗೆ ಹೋದಳು. ಶಿಲಾಮೂರ್ತಿಗೆ ನಮಸ್ಕಾರ ಹಾಕಿ ಒಂದು ಹೂವನ್ನು ಅದರ ಮೇಲಿರಿಸಿದಳು. ಇನ್ನೊಂದನ್ನು ಕೈಲಿ ಕುಣಿಸುತ್ತ ಹೊರಟಳು.

ಮೂರ್ತಿಯ ತಲೆಯನ್ನೇರಿದ ಹೂ ನಿರಾಸೆಯಿಂದ ನಿಟ್ಟುಸಿರೊಂದನ್ನು ಹೊರಕ್ಕೆ ಹಾಕಿತು.

ಆದರೆ ಅದು ಎರಡನೆಯದಕ್ಕೆ ಕೇಳಿಸಲಿಲ್ಲ.

ಅವಳು ತನ್ನ ಕೊಟಡಿಗೆ ಬಂದಳು. ಗುಲಾಬಿಯನ್ನು ತೊಡೆಯ ಮೇಲಿರಿಸಿಕೊಂಡು ಕೂದಲು ಬಾಚಿಕೊಳ್ಳಲಾರಂಭಿಸಿದಳು. ಮಧ್ಯೆ ಮಧ್ಯೆ ಅವಳ ಕೈ ಅಕಸ್ಮಾತ್ತಾಗಿ ತನಗೆ ತಾಕಿದಾಗ ಗುಲಾಬಿಯ ಶರೀರವೆಲ್ಲ ನವಿರೇಳುತ್ತಿತ್ತು.

ಕೇಶಾಲಂಕಾರವನ್ನು ಮುಗಿಸಿ ಆಕೆ ತೊಡೆಯ ಮೇಲಿದ್ದ ಹೂವನ್ನೆತ್ತಿಕೊಂಡು ಮುಡಿಯಲ್ಲಿಟ್ಟುಕೊಂಡಳು.

ಎಂಥ ಮಾದಕ ಸುಗಂಧವಿತ್ತು ಅವಳ ಮುಡಿಯಲ್ಲಿ! ಈ ವೊದಲೆಂದೂ ಗುಲಾಬಿ ಅಂಥ ಗಂಧದ ಸವಿಯನ್ನನುಭವಿಸಿರಲಿಲ್ಲ. ಆ ಉನ್ಮಾದಕ ಗಂಧದಿಂದ ಅದಕ್ಕೆ ಎಚ್ಚರವೇ ತಪ್ಪಿದಂತಾಯಿತು. ಮಧುಪಾನ ಮಾಡಿದವರ ಹಾಗೆ ಅದು ಮತ್ತವಾಗಿ ಅವಳ ಮುಡಿಯ ಮೇಲೆ ಮಲಗಿಕೊಂಡಿತು.

ಸಾಯಂಕಾಲದವರೆಗೂ ಹಾಗೆಯೆ ಮೈಮರೆತು ಮಲಗಿಕೊಂಡಿತ್ತು ಆ ಹೂ!

ರಾತ್ರಿಯಾಯಿತು!

ಆ ಸುಂದರಿ, ಅವಳ ಪ್ರಿಯಕರ ಇಬ್ಬರೂ ಶಯನ ಗೃಹದಲ್ಲಿ ಪ್ರವೇಶಿಸಿದರು.

ಪಕ್ಕನೆ ಎಚ್ಚರವಾಯಿತು ಗುಲಾಬಿ ಹೂವಿಗೆ. ಅರೆದೆರೆದ ಕಂಗಳಿಂದ ಅವರಿಬ್ಬರನ್ನು ಅದು ಆನಂದ, ಆಶ್ಚರ್ಯಗಳಿಂದ ನಿಟ್ಟಿಸ ತೊಡಗಿತು.

ಅವನು ಅವಳನ್ನು ಮಂಚದ ಮೇಲೊರಗಿಸಿ ಅವಳ ಕೋಮಲ ತೋಳುಗಳನ್ನು ಮೆಲ್ಲಗೆ ಹಿಡಿದು ಅವಳನ್ನಪ್ಪಿಕೊಂಡ. ಅವನ ವಶಕ್ಕೆ ಶರೀರವನ್ನರ್ಪಿಸಿ ಆಕೆ ಹಾಯಾಗಿ ಹಾಸುಗೆಯ ಮೇಲೊರಗಿಕೊಂಡಳು. ಸೆರಗು ಜಾರಿ ದೂರ ಬಿತ್ತು. ಬೀಳುವಾಗ ಆ ಗುಲಾಬಿಯನ್ನು ಸೆಳೆದುಕೊಂಡು ಅವರಿಬ್ಬರ ಮಧ್ಯೆ ಎಸೆಯಿತು.

ಸೆರಗಿನ ಉದ್ಧಟತನದ ಬಗ್ಗೆ ಹೂವಿಗೆ ಕೊಂಚ ಕೋಪ ಬಂದಿತಾದರೂ ಆ ಪ್ರಣಯಿಗಳ ಮಧ್ಯೆ ಸ್ಥಾನ ದೊರೆತುದಕ್ಕಾಗಿ ಸಂತಸವೂ ಉಂಟಾಯಿತು.

ಅವನು ಆ ಹೂವನ್ನು ಮೆಲ್ಲನೆ ಎತ್ತಿಕೊಂಡು ಒಂದು ಬಾರಿ ಅದರ ಸುಗಂಧದ ಸವಿಯನ್ನು ಹೀರಿದ.

ಗುಲಾಬಿ ರೋಮಾಂಚಿತವಾಗಿ ನೋಡತೊಡಗಿತು.

ಅವರಿಬ್ಬರ ಕೆನ್ನೆಗಳೂ ಹತ್ತಿರ ಹತ್ತಿರ ಬಂದವು. ಆ ಕೆನ್ನೆಗಳ ಮಧ್ಯೆ ಗುಲಾಬಿ! ಮರುಕ್ಷಣದಲ್ಲಿಯೇ ಅವರ ತುಟಿಗಳ ಮಧ್ಯೆ ಅದು ಸಿಕ್ಕಿಕೊಂಡಿತು. ಆ ಹೂವನ್ನು ಚುಂಬಿಸುವ ನೆಪದಲ್ಲಿ ನಲ್ಲನಲ್ಲೆಯರಿಬ್ಬರೂ ಬಿಗಿಯಾಗಿ ಮುತ್ತಿಟ್ಟುಕೊಂಡರು. ಆ ತುಟಿಗಳ ಮಧುರ ಸ್ಪರ್ಶದಿಂದ ಗುಲಾಬಿ ಮತ್ತೆ ಮೈಮರೆಯಿತು.

ರಾತ್ರಿಯೆಲ್ಲ ಅವರಿಬ್ಬರ ಪ್ರಣಯಕೇಳಿಯನ್ನು ನಿರೀಕ್ಷಿಸುತ್ತ ಅವರ ನಡುವೆಯೇ ಒರಗಿಕೊಂಡಿತ್ತು.

ಮತ್ತೆ ಬೆಳಗಾಯಿತು.

ದೇವರ ಮೇಲಿದ್ದ ಹೂ ಆಗಲೆ ಬಂದು ಹಿತ್ತಿಲಲ್ಲಿ ಬಿದ್ದುಕೊಂಡಿತ್ತು.

ರಾತ್ರಿಯನ್ನೆಲ್ಲ ಆ ಶಿಲಾಮೂರ್ತಿಯ ಮೇಲೆ ಕಳೆದು, ಚಳಿಯಲ್ಲಿ ನಡುಗಿ ನಡುಗಿ ಅದಕ್ಕೆ ಕೊನೆಯ ಗಳಿಗೆ ಬಂದಿತ್ತು.

ಆ ಸುಂದರಿಯ ಕೈಯಲ್ಲಿ ಕುಣಿಯುತ್ತ ಹೋದ ತನ್ನ ಸೋದರಿಯ ಸ್ಮರಣೆಯಾಗುತ್ತಿದ್ದಂತೆ ಅದಕ್ಕೆ ದುಃಖವುಕ್ಕಿ ಬರುತ್ತಿತ್ತು. ಆ ತರುಣಿಯ

ಮುಡಿಯನ್ನೇರಿ ಕುಳಿತು ಎಷ್ಟು ಸುಖಪಡುತ್ತಿದೆಯೊ ಅದು- ತನಗೆ ಮಾತ್ರ ಇಷ್ಟು ಬೇಗನೆ ಮೃತ್ಯು ಬಂದೊದಗಿತಲ್ಲ—ಎಂದು ಕಣ್ಣೀರು ಹಾಕುತ್ತಿತ್ತು.

ಹಿತ್ತಿಲಲ್ಲಿನ ಹುಡಿಯಲ್ಲಿ ಅದು ಬಂದು ಬಿದ್ದುದಕ್ಕೆ ಇನ್ನೂ ಹದಿನೈದು ನಿಮಿಷ ಕಳೆದಿರಲಿಲ್ಲ.

ಅಷ್ಟರಲ್ಲಿ ಮಹಡಿಯ ಕಿಟಕಿಯಿಂದ ಏನೊ ಹಾರಿಬಂದು ತನ್ನ ಪಕ್ಕದಲ್ಲಿಯೆ ಬಿದ್ದಂತಾಯಿತು.

ದೃಷ್ಟಿ ಹೊರಳಿಸಿ ನೋಡಿತು.

ಅದೇ! ತನ್ನ ತಂಗಿ ಗುಲಾಬಿಯೆ !

ಆಶ್ಚರ್ಯದಿಂದ ತಂಗಿಯನ್ನು ನಿಟ್ಟಿಸಿನೋಡಿತು.

—ಓ! ಅದೂ ತನ್ನ ಹಾಗೇ ಬಾಡಿಹೋಗಿದೆ! ಅದಕ್ಕೂ ಕೊನೆಯ ಗಳಿಗೆ ಸಮೀಪಿಸಿದೆ !

'ತಂಗೀ, ಇದುವರೆಗೆ ಎಲ್ಲಿದ್ದೆ ? ಸುಖವಾಗಿದ್ದೆಯಾ ?' ಎಂದು ಕೇಳಿತು.

ಮಾತನಾಡಲಿಲ್ಲ ಎರಡನೆಯ ಹೂ

ಮೆಲ್ಲನೆ ಒಂದು ನಿಟ್ಟುಸಿರು ಹಾಕಿತು !

**ಬೆಳಗಾವಿ ಸೆರೆಮನೆ** **೬—೧೨—೪೨**

# ಒಂಬತ್ತು ಕಾಸು !

ಅಂದು 'ಕೃಷ್ಣಾ ಚಿತ್ರಮಂದಿರ'ದಲ್ಲಿ 'ಭರತೀನಾತಾ' ಪ್ರದರ್ಶನ ವಿತ್ತು. ಮೊದಲನೆಯ ಆಟಕ್ಕೇ ಹೋಗಿ ನೋಡಿಕೊಂಡು ಬರಬೇಕೆಂದು ಮೊದಲೇ ಗೊತ್ತುಮಾಡಿಕೊಂಡು ಊಟ ತೀರಿಸಿಕೊಂಡಿದ್ದೆವು.

ಒಳಗಡೆ ಶಾರಿಗೊಂದು ಗೋಳಾಟವೆ. ಯಾವ ಬಣ್ಣದ ಸೀರೆ ಉಡುವುದು--ಎಂಥ ರವಕೆ ತೊಡುವುದು-ಯಾವ ಟೇಪು ಹಾಕುವುದು— ಹೇಗೆ ಹೂ ಮುಡಿಯುವುದು—ಜಡೆ ಜೋತು ಬಿಡುವುದೇ—ತುರುಬು ಹಾಕಿ ಮೊಗ್ಗಿನ ಮಾಲೆ ಹಾಕುವುದೇ—ಇನ್ನೂ ಯಾವುದೂ ನಿರ್ಧಾರವಾಗಿರಲಿಲ್ಲ. ಅಬ್ಬ ! ಅವಳ ಪೀಕಲಾಟವೇ ! ನನಗೋ ಹುಚ್ಚು ಹುಚ್ಚು ನಗೆ. ಅವಳೆದುರಿನಲ್ಲಿ ನಗುವುದೂ ಕಷ್ಟವೆ. ಸರಿ. ಹೇಗೋ ತಡೆದು ಕೊಂಡು ಹೊರಕ್ಕೆ ಬಂದೆ.

ಕೊಟಡಿಯಿಂದ ಹೊರಡುತ್ತಲೂ ಅಡಿಗೆಯಾಳು ನಂಜ ನನ್ನೆದುರಿಗೆ ಬಂದ.

'ಬುದ್ಧೀ....'

'ಏನೋ ?'

'ಬುದ್ಧೀ....' ಅವನ ಸ್ವರವಲ್ಲಿ ಸಂಕೋಚ ತುಂಬಿ ಬಂದ ಹಾಗೆ ತೋರುತ್ತಿತ್ತು.

'ಏನು ಹೇಳೋ....'

'ಬುದ್ಧೀ....'

ಕೊಂಚ ಸಿಡುಕಿನಿಂದಲೆ ಹೇಳಿದೆ.

'ಬೇಗ ಹೇಳಿಬಿಡಬಾರದೇ ಏನದು ? ಸಿನಿಮಾಕ್ಕೆ ಹೋಗಬೇಕಾಗಿದೆ.'

ನಾಲಗೆ ತಡೆ ತಡೆಯುತ್ತ ನಂಜ ಕೇಳಿದ.

'ಒಂಬತ್ತುಕಾಸು ಬುದ್ಧೀ....'

'ಸರಿ. ಅಷ್ಟೇನೆ? ಅಯ್ಯೋ ಬೆಪ್ಪೆ!' ಎಂದು ಹಣದ ಚೀಲ ತೆಗೆದು ನೋಡಿದೆ.

ಸರಿಯಾಗಿ ಒಂದು ರೂಪಾಯಿ ಮಾತ್ರವೆ ಉಳಿದಿರಬೇಕೇ ಅದರಲ್ಲಿ?

ನಮ್ಮಿಬ್ಬರಿಗೆ ಎರಡು ಟಿಕೆಟ್ಟಿಗೆ ಒಂದು ರೂಪಾಯಿ! ಸರಿಹೋಯಿತು. ಮೇಲೊಂದು ಚಿಕ್ಕಾಸೂ ಇಲ್ಲ.

ನನಗೆ ತುಂಬಾ ವಿಷಾದವಾಯಿತು. ಅಷ್ಟು ಆಸೆಯಿಂದ ಕೇಳಿದ ನಂಜನಿಗೆ 'ಇಲ್ಲ' ಎಂದು ಹೇಳುವುದಾದರೂ ಹೇಗೆ? ಆವರೇನುಪಾಯ? ಮನೆಯಲ್ಲಂತೂ ಒಂದು ಬಿಡಿಗಾಸೂ ಸಿಕ್ಕಲಾರದು. ಜಾರಿಯ ಹತ್ತಿರವೂ ಏನೂ ಇಲ್ಲ. ನಾಳೆ ಬ್ಯಾಂಕಿನಿಂದ ತೆಗೆಯಿಸಬೇಕು. ಅದುವರೆಗೂ....

'ನಂಜಾ....' ನನ್ನ ನಾಲಗೆ ಒಳಗೊಳಗೇ ಸಳಿಯುತ್ತಿತ್ತು.

ಕಾತರನಾಗಿ ಆತ ನನ್ನ ಕಡೆ ನೋಡಿದ.

'ಇಂದು ಹೆಚ್ಚು ದುಡ್ಡಿಲ್ಲ ನಂಜಾ. ನಾಳೆ ಬ್ಯಾಂಕಿನಿಂದ ತೆಗೆಯಿಸಿದ ಬಳಿಕ ಕೊಡ್ತೇನೆ ಅಂ?' ಎಂದೆ.

ಮಾತನಾಡಲಿಲ್ಲ ನಂಜ. ತಲೆ ತಗ್ಗಿಸಿಕೊಂಡು ಹೊರಟು ಹೋದ.

ಚಿತ್ರಪಟ ತುಂಬಾ ಚೆನ್ನಾದುದೆಂದು ಹೆಸರಾದುದಾಗಿದ್ದರೂ ಅಂದು ನನ್ನ ಮನಸ್ಸು ಅದರಲ್ಲಿ ರಂಜಿಸಲಿಲ್ಲ. ಎದುರಿಗಿನ ರಜತ ಪರದೆಯ ಮೇಲೆ ದೃಶ್ಯಮಾಲೆ ಮೂಡಿ ಮಾಯವಾಗುತ್ತಿದ್ದರೆ—ನನ್ನೆದೆಯ ಪರದೆಯ ಮೇಲೆ ನಂಜನ ಆ ಕನಿಕರ ವಿಷಾದಪೂರ್ಣ ಮುಖ ಮತ್ತೆ ಮತ್ತೆ ಮೂಡಿ ಮಾಯವಾಗುತ್ತಿತ್ತು.

—ಎಷ್ಟು ಆಸೆ—ಆಕಾಂಕ್ಷೆಗಳಿಂದ ನನನ್ನಂತ ಒಂಬತ್ತು ಕಾಸುಗಳಿಗಾಗಿ ಯಾಚಿಸಿದ್ದನಲ್ಲ? 'ಇಲ್ಲ' ಎಂದು ಬಿಟ್ಟೆ ನಾನು. ಅವನಿಗೆಷ್ಟು

ನಿರಾಸೆಯಾಗಿದ್ದೀತೊ ? ಸಿನಿಮಾ ನೋಡುವುದನ್ನು ನಿಲ್ಲಿಸಿದ್ದರೆ ಹಾನಿಯಾಗುವುದೂ ಅಷ್ಟರಲ್ಲೇ ಇತ್ತು. ಶಾರದೆ ಕೋಪಿಸಿಕೊಳ್ಳುತ್ತಿದ್ದಳು. ಸರಿಯೆ. ಅವಳು ಕೋಪಮಾಡಿಕೊಳ್ಳುವುದು ನನಗೆ ಇಷ್ಟವಿರಲಿಲ್ಲ. ಪಾಪ! ಅವನಿಗೆ ಒಂಬತ್ತುಕಾಸನ್ನು ಕೂಡ ಕೊಡಲಾಗಲಿಲ್ಲವಲ್ಲ! ಅಯ್ಯೊ ಮಾನವನ ಸ್ವಾರ್ಥ ಲಾಲಸೆಯೆ !

—ನಾನಿಲ್ಲಿ ನೆಮ್ಮದಿಯಿಂದ ಕುಳಿತು ಸಿನಿಮಾ ನೋಡುತ್ತಿದ್ದೇನೆ ಶಾರದೆಯ ಜತೆಗೆ. ಅಲ್ಲಿ ನಂಜ ನಿರಾಸೆ—ಸಂತಾಪ—ಉದ್ವೇಗಗಳಿಂದ ಬಿಸುಸುಯ್ಯುತ್ತ ಬಿದ್ದುಕೊಂಡಿರಬಹುದು. ನೆನಸಿಕೊಂಡರೇ ಮೈ ನಡುಗುತ್ತದೆ. ಎಂಥ ಕಠೋರ ಹೃದಯದವ ನಾನು ? ಎಂಥಾ ಸ್ವಾರ್ಥಿ ?

ಮಧ್ಯೆ ಮಧ್ಯೆ ಶಾರದೆಯಿಂದ ಪ್ರಶ್ನೆಗಳ ಸುರಿಮಳೆ ನಡೆದೇ ಇತ್ತು. ಅತ್ತ ನನಗೆ ಗಮನವಿದ್ದರೆ ತಾನೆ ? 'ಹೂ', 'ಇಲ್ಲ', 'ಸರಿ !'—ಇಷ್ಟರಲ್ಲೆ ಅವಳನ್ನು ಸಮಾಧಾನಮಾಡಲು ಪ್ರಯತ್ನಿಸುತ್ತಿದ್ದೆ.

ಚಿತ್ರ ಮುಗಿದ ತರುವಾಯ ಜಡ ಹೃದಯದಿಂದಲೇ ಮನೆಗೆ ಬಂದೆ. ನಂಜನೇ ಎದ್ದು ಬಂದು ಬಾಗಿಲು ತೆರೆದ.

ದೀಪದ ಮಂದ ಪ್ರಕಾಶದಲ್ಲಿ ಗ್ರಹಣ ಹಿಡಿದ ಚಂದ್ರಗ್ರಹದ ಹಾಗೆ ಕಾಣಿಸುತಿತ್ತು ಆತನ ಮುಖ .

ನಿದ್ರೆಯೇ ಬರಲಿಲ್ಲ ರಾತ್ರಿಯೆಲ್ಲ. ಹಾಸುಗೆಯ ಮೇಲೊರಗಿದ ಹಾಗೆ ಶಾರಿ ಸೈಗಲ್—ಉಮಾಶಶಿಯರ ಅಭಿನಯ ಗಾಯನಗಳ ಟೀಕಾವಿಮರ್ಶೆಯಲ್ಲಿ ತಲ್ಲೀನಳಾಗಿದ್ದಳು. ನಾನು ಕತ್ತು ಅಲುಗಾಡಿಸುವ ಕೆಲಸ ಮಾಡುತ್ತಿದ್ದೆ.

ರಾತ್ರಿ ಒಂದು ಗಂಟೆಯಾಗಿರಬಹುದು.

ನಿದ್ರೆಯಿಲ್ಲದೆ ಹೊರಳಾಡುತ್ತಿದ್ದವನು ಬೇಸರದಿಂದ ಎದ್ದುಬಿಟ್ಟೆ.

ಪಕ್ಕದಲ್ಲಿ ಶಾರಿ ಶಾಂತವಾಗಿ ಸುಖವಾಗಿ ನಿದ್ರೆ ಹೋಗಿದ್ದಳು.

ಅವಳ ಆ ಭಾಗ್ಯವನ್ನು ಕಂಡು ಕ್ಷಣಕಾಲ ಅಸೂಯೆಯುಂಟಾಯಿತು ನನಗೆ.

ಹೊರಗಡೆ ಬೆಳುದಿಂಗಳು ಬಿದ್ದಿರಬಹುದೆಂದುಕೊಂಡು ಎದ್ದು ಬಂದೆ.

ಕಟ್ಟೆಯ ಮೇಲೆ ಗೋಣಿಚೀಲವೊಂದನ್ನು ಹಾಸಿಕೊಂಡು ನಂಜ ಅತ್ತ ಇತ್ತ ಹೊರಳಾಡುತ್ತ ಬಿದ್ದುಕೊಂಡಿದ್ದ.

ಅವನ ಬಳಿ ಹೋಗಿ ಮೆಲ್ಲನೆ ಕೂಗಿದೆ.

'ನಂಜಾ....

ಬೆಚ್ಚಿಬಿದ್ದು ಆತ ಎದ್ದು ಕುಳಿತ.

'ನಂಜಾ, ನಿದ್ರೆ ಬರುತ್ತಿಲ್ಲವೇನೋ?'

'ಬುದ್ದೀ....'

'ಇಲ್ಲಿ ಚಳಿ ಹತ್ತುತಾ ಇದ್ದರೆ ಒಳಕ್ಕೆ ಹೋಗಿ ಮಲಕ್ಕೊ ತಿಳೀತೇ! ಬೇಕಾದರೆ ಒಂದು ಕಂಬಳಿ ತಕೋ. ಬೇಕೇನು?'

'ಬೇಡ ಬುದ್ದೀ, ಇಲ್ಲೇ ಸುಖವಾಗೈತೆ' ಎಂದ ನಂಜ. ಅವನ ಧ್ವನಿಯಲ್ಲಿ ನಡುಕ ತುಂಬಿದ್ದ ಹಾಗೆ ಭಾಸವಾಯಿತು ನನಗೆ.

'ನಂಜಾ, ಜ್ವರ ಗಿರ ಬಂದಿದೆಯೇನೊ?'

'ಇಲ್ಲಾ ಬುದ್ದೀ, ಏನೂ ಇಲ್ಲ....'

'ಸರಿ ಹಾಗಾದರೆ. ಈಗ ಸರಿಯಾಗಿ ಹೊದೆದುಕೊಂಡು ಮಲಗಿಕೊ.' ಎಂದು ಹೇಳಿ ಒಳಕ್ಕೆ ಬಂದೆ.

ನಮ್ಮ ಮಾತು ಕೇಳಿಸಿತ್ತೊ ಏನೊ—ಶಾರಿ ಎದ್ದು ಕುಳಿತಿದ್ದಳು. ನಾನು ಒಳಸೇರುತ್ತಲೂ ಕುತೂಹಲಪೂರ್ಣದೃಷ್ಟಿಯನ್ನು ನನ್ನೆಡೆಗೆ ಹೊರಳಿಸಿದಳು. ನನ್ನ ಕಳವಳವಿನ್ನೂ ಅಧಿಕವಾಯಿತು. ಮಂಚದ ಮೇಲೊರಗಿ ಅವಳ ಎದೆಕಟ್ಟಿನಲ್ಲಿ ಮುಖ ಹುದುಗಿಸಿ ಒಂದು ಬಾರಿ ಬಿಕ್ಕಳಿಸಿದೆ.

ಶಾರಿ ಬೆಚ್ಚಿಬಿದ್ದಳು.

'ಯಾಕ್ರೀ ಹೀಗ್ಮಾಡ್ತೀರಾ? ಏನಾಯ್ತು?' ಎಂದಳು.

ಮಾತು ಹೊರಡಲಿಲ್ಲ ನನ್ನ ಮುಖದಿಂದ. ನನ್ನ ಕತ್ತು ಬಿಗಿದು ಬಂದಿತ್ತು.

'ಹೇಳಿ ಅಂದ್ರೆ, ಏನಾಯ್ತು ನಿಮಗೆ?' ಅವಳ ಎದೆ ಢವಢವನೆ ಹೊಡೆದುಕೊಳ್ಳುವುದು ಸ್ಪಷ್ಟವಾಗಿ ಕೇಳಿಸುತ್ತಿತ್ತು.

ನನ್ನ ಮುಖದಿಂದ ಥಕ್ಕನೆ ಮಾತು ಹೊರಟಿತು.

'ಒಂಬತ್ತು ಕಾಸು'

[ ೨ ]

ನಿಮಿಷಗಳು, ಗಂಟೆಗಳು, ದಿನಗಳು ಉರುಳಿಹೋದುವು.

ದಿನದಿನವೂ ನಂಜನ ಮುಖದ ಮೇಲಿನ ಔದಾಸೀನ್ಯ ಕಣಕಣವಾಗಿ ಹೆಚ್ಚುತ್ತ ಬಂತು. ಅಡಿಗೆಯನ್ನೇನೊ ಆತ ಎಂದಿನಂತೆ ಸರಿಯಾಗಿಯೆ ಮಾಡುತ್ತಿದ್ದ. ಮನೆಯ ಕೆಲಸಗಳಲ್ಲಿ ಯಾವ ತಪ್ಪೂ ಉಂಟಾಗುತ್ತಿರಲಿಲ್ಲ. ಆದರೇನು? ಮೊದಲಿನ ಆ ಆನಂದದ ವೃತ್ತಿ ಎಂದೋ ಮಾಯವಾಗಿತ್ತು. ಆಗಾಗ ಹಠಾತ್ತಾಗಿ ಸ್ವೈರಸ್ವಭಾವ ತಲೆದೋರಿದಂತಾಗುತ್ತಿತ್ತು.

ಹರಯದ ಹೊಸತಿಲಿನಲ್ಲಿ ಆಗತಾನೆ ಅಡಿಯಿರಿಸುತ್ತಿದ್ದ ತರುಣ ಆ ನಂಜ. ಮುದುಕರಂತೆ ಅವನ ಮುಖ ಮುದುಡಿಕೊಳ್ಳುವುದೆಂದರೇನು? ನನಗೆ ಕಳವಳವಾಗದಿರುತ್ತಿರಲಿಲ್ಲ. ಅಡಿಗೆಯವನಾದರೂ ನಂಜ ತನ್ನ ನಯ, ವಿನಯ, ಸದಾಚಾರಗಳಿಂದ ನಮ್ಮೆಲ್ಲರ ಪ್ರೀತಿಗೆ ಪಾತ್ರನಾಗಿದ್ದ. ಅವನ ವ್ಯಥೆಗೆ ಕಾರಣವೇನೆಂಬುದನ್ನರಿಯದೆ ನನ್ನ ಕಳವಳ ಹೆಚ್ಚುತ್ತಿತ್ತು.

ಒಂದು ದಿನ ಸಿನಿಮಾಕ್ಕೆ ಹೊರಟಿದ್ದಾಗ ಹಠಾತ್ತಾಗಿ ಆ ದಿನದ ಒಂಬತ್ತು ಕಾಸಿನ ವಿಚಾರ ಜ್ಞಾಪಕಕ್ಕೆ ಬಂತು. ಅದಕ್ಕೂ ಅವನ ಔದಾಸೀನ್ಯಕ್ಕೂ ಏನಾದರೂ ಸಂಬಂಧವಿದೆಯೇನೊ ಎಂದು ಯೋಚಿಸಿ ನಂಜನನ್ನು ಕೂಗಿದೆ.

ಅಡಿಗೆಯ ಮನೆಯಲ್ಲಿದ್ದ ನಂಜ ಧಾವಿಸುತ್ತ ಬಂದ.

'ಬುದ್ಧೀ....'

'ನಂಜಾ, ಒಂದು ಮಾತು ನೆನಪಿದೆಯೇನೋ ನಿನಗೆ ?'

'ಯಾವುದು ಬುದ್ಧೀ... :'

'ಆ ಒಂಬತ್ತು ಕಾಸಿನದು ?'

ನಂಜ ಬೆಚ್ಚಿಬಿದ್ದು ಕೇಳಿದ.

'ಓ ! ಅದೇನು ದೊಡ್ಡಮಾತು ಬಿಡಿ ಬುದ್ಧೀ....'

'ಅದೆಲ್ಲಾ ಇರಲಿ. ಆದರೆ ನಿನಗಾಗ ಒಂಬತ್ತು ಕಾಸು ಏಕೆ ಬೇಕಿತ್ತು ಹೇಳುತ್ತೀಯಾ ?'

ನಂಜ ಕ್ಷಣಕಾಲ ಮೌನವಾಗಿದ್ದ. ಅವನ ಮುಖದ ಮೇಲೆ ಬಗೆ ಬಗೆಯ ಭಾವಗಳು ಮೂಡಿ ಮಾಯವಾದುವು.

'ಹೇಳು. ನಿನಗಂಗ ಒಂಬತ್ತುಕಾಸು ಏತಕ್ಕೆ ಬೇಕಾಗಿತ್ತು ?'

'ಬುದ್ಧೀ....'

'ಹೇಳು. ಹೇಳು.'

'ಅವನ್ನ ನಿಮ್ಮ ಹತ್ತಿರ ಹ್ಯಾಗೆ ಹೇಳೋದು ಬುದ್ಧೀ....'

'ಪರವಾ ಇಲ್ಲ. ಹೇಳಯ್ಯ.'

'ಬೇರೇನೂ ಭಾವಿಸಿಕೋಬೇಡಿ ಬುದ್ಧೀ ! ಹುಡುಗತನ ನನ್ನದು ಅಂತ ತಪ್ಪು ಹೊಟ್ಟೇಲಿ ಹಾಕಿಕೊಳ್ಳಿ. ನಮ್ಮ ಬಳಗದವರೊಬ್ಬರ ಹುಡುಗಿಯಿದ್ದಳು ಬುದ್ಧೀ. ಒಳ್ಳೆ ಚೆಲುವಿ ಚೆನ್ನಿ ಇದ್ದಳು.—ಆಕೇನ ಕಂಡು ನನ್ನ ಕಣ್ಣೂ ಮನಸೂ ಕೂಡಿಯೆ ಹುಚ್ಚಾಗಿ ಬಿಟ್ಟವು. ಅವಳ ಜೆನ್ನು ಹಿಡಿದು ತಿರುಗಿದೆ. ಕೊನೆಗೆ ಒಂದು ದಿನ ಆಕೆ ಹಟಾವಾಡಿ ಕೇಳಿದಳು. 'ನನಗೊಂದು ಸಣ್ಣ ಕನ್ನಡೀ ತಂದುಕೊಡೋ ನಂಜಾ' ಅಂತ. ಆದರೆ ಆಗ ನನ್ನ ಹತ್ತಿರ ಒಂದು ಕಾಸೂ ಇರಲಿಲ್ಲ. ನಿಮ್ಮನ್ನ ಕೇಳಿದೆ....'

'ಕನ್ನಡಿ ಬೇಕಿದ್ದರೆ ಅಷ್ಟೆಲ್ಲ ಯಾಕೆ ಗೋಳಾಡಬೇಕಿತ್ತು ? ಶಾರದೆಗೆ ಕೇಳಿದ್ದರೆ ಒಂದು ಕನ್ನಡಿ ಕೊಡುತ್ತಿರಲಿಲ್ಲವೇ ಆಕೆ ?'

"ಕೇಳೋದು ಹ್ಯಾಗೆ ಬುದ್ದೀ, ಬಲು ನಾಚಿಕೆ....ಅದೂ ಅಲ್ಲದೆ ಅಮ್ಮಾವ್ರವರ ಕನ್ನಡಿ ದೊಡ್ಡವು. ಅಂಥಾದ್ದು ಆಕೆಗೇನು ಮಾಡೋದು ?— ಒಂಬತ್ತು ಕಾಸಿಗೆ ಬರುವ ಸಣ್ಣ ಕನ್ನಡಿ ಬೇಕು ಅಂತ ಆಕೆ ಕೇಳಿದ್ದಳು.''

"ಸರಿ. ಆದರೆ ಈಚೆಗೆ ನೀನು ಯಾಕೆ ಮುಖ ಸಪ್ಪಗೆಮಾಡಿಕೊಂಡಿರುತ್ತೀಯಾ ಒಣಗಿದ ಬದನೇಕಾಯಿಯ ಹಾಗೆ ?—ಆ ಹುಡುಗೀನ್ನ ಮದುವೆಯಾಗಬೇಕು ಅಂತೀಯೇನು ?''

"ಇನ್ನೆಲ್ಲಿಯ ಮದುವೆ ಬುದ್ಧೀ ! ನಾನು ಕನ್ನಡೀ ಕೊಡಲಿಲ್ಲಾಂತ ರೇಗಿಕೊಂಡು ಆಕೆ ಬೇರೊಬ್ಬನ ಹತ್ತಿರ ಗೆಳೆತನ ಬೆಳೆಸಿದಳು...."

ದಿಗಿಲುಗೊಂಡು ಆತನ ಮಾತು ಕೇಳುತ್ತಿದ್ದೆ. ನಾವು ಕತೆ—ಕಾದಂಬರಿಗಳಲ್ಲೋದುವ ಪ್ರೇಮ ಎಂಥದು ?–ಈ ಪ್ರೇಮ ಎಂಥದು ?– ಎಂದು ಆಶ್ಚರ್ಯಪಟ್ಟುಕೊಳ್ಳುತ್ತಿದ್ದೆ.

ನಂಜ ಹೇಳುತ್ತಿದ್ದ.

''ಅನಂತರ ಆಕೆಯನ್ನ ಎಷ್ಟೋ ಸಾರಿ ಮಾತಾಡಿಸಿದೆ. ಉತ್ತರ ಕೊಡಲಿಲ್ಲ. ಮುಖ ತಿರುವಿಕೊಡು ಸೆಡವಿನಿಂದ ಹೊರಟುಹೋದಳು ಬುದ್ದಿ ! ಮೊನ್ನೆ ಮೊನ್ನೆ ಅವಳ ಮದುವೇನೂ ಆಗಿಹೋಯ್ತು !....''

ಮಾತು ಮುಗಿಸಿದ ನಂಜ. ಮಾತಿನ ಕೊನೆಯೊಂದಿಗೆ ಆತನ ಮುಖದಿಂದ ಹೊರಟ ನಿಟ್ಟುಸಿರು ಕೊಟಡಿಯಲ್ಲೆಲ್ಲ ಬಿಸುಪನ್ನು ಹರಡಿತು.

ಗದಗ ಮೇ ೧೯೩೯

# ಉಪಸಂಪಾದಕನ ಕುರ್ಚಿ !

'ಹಲೋ'

'...........'

'ಹಲ್ಲೋ ಹಲ್ಲೋ!'

'...........'

'ಹಲ್ಲೋ! ಓಯ್! ಹಲ್ಲೋ!'

'...........'

'ಏಳೋ ಮೇಲಕ್ಕೆ! ಕೂತುಕೊಂಡು ಬಿಟ್ಟಿದಾನೆ ಮನ್ಮಥನ ಹಾಗೆ! ಕೂಗಿ ಕೂಗಿ ಕತ್ತು ಒಡೆದು ಹೋಗ್ತಾ ಇದೆ. ಇನ್ನೂ ಈತನಿಗೆ ಎಚ್ಚರ ಇಲ್ಲ. ಕಿವುಡೋ ಏನೋ ದೇವ್ರೇ ಬಲ್ಲ! ಏ! ಏಳೋ ಅಲ್ಲಿಂದ! ತೊಲಗಾಚೆ! ತೊಲಗೂ ಅಂದೆ!'

'...........'

"ಏನು ? ನಾನು ಯಾರು ?—ನಾನು ? ಹೇ! ಒಳ್ಳೇ ಪ್ರಶ್ನೇನೇ ಕೇಳ್ತೀಯಲ್ಲ! ಅಂತೆ—ನಾನು ಯಾರು ?--ಹ! ಹ! ಹ! ಹ!-- ನಾನು ಯಾರು ಅನ್ನೋದು ಗೊತ್ತಿಲ್ಲ ನಿನಗೆ? ಎದ್ದೇಳೋ ನನ್ನ ಕುರ್ಚಿ ಯನ್ನ ಬಿಟ್ಟು! ನಾನು ಯಾರು ಅನ್ನೋಕೆ ನೀನು ಯಾರೋ ಮಹ ರಾಜ ?–ಯಾರೋ ನೀನು–ಇಲ್ಲೇನು ಕೆಲಸ ನಿಂದು–ನನ್ನ ಜಾಗದಲ್ಲಿ ? ಎಷ್ಟು ಧೈರ್ಯವೋ ನಿಂಗೆ ನನ್ನ ಕುರ್ಚಿ ಮೇಲೆ ಕೂತುಕೊಳ್ಳೋಕೆ– ನನ್ನ ಮೇಜಿನ ಮೇಲೆ ಕಾಲು ಹಾಕಿಕೊಂಡು ?

"ಅರೇ! ಇದು ನನ್ನ ಕುರ್ಚಿ ಅನ್ನುತ್ತಲೂ ಯಾಕೆ ಬಾಯಿ ಬಾಯಿ ಬಿಡ್ತಾ ಇದೀಯಾ ? ಇಪ್ಪತ್ತು ವರ್ಷಗಳಿಂದ ನನ್ನದಾಗಿದೆ ಈ ಕುರ್ಚಿ–ಈ ಮೇಜು. ಇಂಗ್ಲೆಂಡಿನ ರಾಜ ಸಿಂಹಾಸನತ್ಯಾಗ ಮಾಡಿ ಯಾನು–ನಾನು ಈ ಕುರ್ಚಿಯ ತ್ಯಾಗಮಾಡುವುದು ಸಾಧ್ಯವಿಲ್ಲ.

ತಿಳೀತೇನು ಈಗಲಾದರೂ ? ಯಾರು ಹೇಳಿದರೋ ನಿನಗೆ ಇಲ್ಲಿ ಬಂದು ಕೂತುಕೊಳ್ಳೋಕೆ ?

'ಪ್ರೊಪ್ರೈಟರ್ ಹೇಳಿದರು ?-ಪ್ರೊಪ್ರೈಟರ್ ? ಯಾವನೋ ಅವ ಆ ಪ್ರೊಪ್ರೈಟರ್ ?-ಅವನಪ್ಪ ಬಂದರೂ ನನ್ನ ಜಾಗ ಬಿಡೋನಲ್ಲ ನಾನು- ಎದ್ದೇಳು ಮೊದಲು. ನಾನು ಸಂಪಾದಕೀಯ ಬರೀಬೇಕು-ಸಾಹಿತ್ಯ ಸಮ್ಮೇಳನದ ಬಗ್ಗೆ !

'ಏನೆಂದೆ ?-ಅರ್ಥಾನೇ ಆಗಲಿಲ್ಲವೆ ನಿನಗೆ ? ನನ್ನ ಹೆಸರು ಸಹ ತಿಳೀದೇ ?-ಅಯ್ಯೊ ಬೆಪ್ಪೆ ! 'ದುಂದುಭಿ' ಪತ್ರಿಕೆಯನ್ನು ಹುಟ್ಟಿಸಿ, ಬೆಳಸಿ, ಕರ್ನಾಟಕದ ಶ್ರೇಷ್ಠ ಪತ್ರಿಕೆಯನ್ನಾಗಿ ಮಾಡಿ, ನುರಿತ ಪತ್ರಿಕೋದ್ಯೋಗಿ, ಉತ್ತಮದರ್ಜೆಯ ಉಪಸಂಪಾದಕ ಅಂತ ಖ್ಯಾತಿ ಪಡೆದ ಈ ಮಾಧೂರಾಯನ ಹೆಸರೂ ತಿಳೀದೇ ನಿನಗೆ ?-ಆದರೂ ಈ ಕುರ್ಚಿ ಮೇಲೆ ಕೂಡುವ ಧೈರ್ಯವೇ ?

'ನಾ ಹೇಳೋ ಮಾತಿನಲ್ಲಿ ಇನ್ನೂ ನಂಬಿಕೆಯಾಗಲಿಲ್ಲವೆ ನಿನಗೆ ? 'ಮಾಧೂರಾಯ ಸತ್ತ ? ಸತ್ತು ಒಂದು ತಿಂಗಳಾಯಿತು ?'-ನಾನೇ ಅಪ್ಪ-ಆ ಮಾಧೂರಾಯನೇ-ಕೈ-ಕಾಲು-ತಲೆ ಸಮೇತ ಬಂದು ಹೇಳ್ತಾ ಇದೇನಲ್ಲ-ಆದರೂ 'ಸತ್ತ' ಅಂತೀಯಲ್ಲಾ ನೀನು ? ಏನೆಂದೆ ?-ನಾನು ಹುಚ್ಚರಾಸ್ಪತ್ರೆಯಿಂದ ಓಡಿಬಂದಿರಬೇಕು ಅಂತೀಯಾ ? ಹುಷಾರಿ ಕಣಮ್ಮಾ ಮಗೂ ! ನಾಲಗೆ ಬಿಗಿಹಿಡಿದು ಮಾತಾಡು. ನಾನು ರೇಗಿದರೆ ಒಳ್ಳೆಯವನಲ್ಲ. ಏನು ಮಾಡೇನು-ಏನು ಮಾಡಲಿಕ್ಕಿಲ್ಲ-ಎಂದು ಹೇಳಲಾರೆ. ಹೂಂ ! ಏಳು ! ಹೊರಡು !

'ಹೊರಡೋಲ್ಲವೆ ?-ನಿನ್ನನ್ನಿಲ್ಲಿ ಪ್ರೊಪ್ರೈಟರ್ ನೇಮಿಸಿದ್ದಾರೆಯೆ ?-ನನ್ನ ಜಾಗಕ್ಕೆ ಹೊಸದಾಗಿ ಬಂದ ಸಬ್ ಎಡಿಟರೇ ನೀನು ? ನನ್ನ ಜಾಗಕ್ಕೆ ?-ಈ ಕುರ್ಚಿ ಮೇಲೆ ಕೂತುಕೋಬೇಕಾದರೆ ನೂರು ಸಾವಿರ ಲಾಗಹಾಕಬೇಕು ನೀನು-ಪಾತಾಳದಿಂದ ಭೂಲೋಕಕ್ಕೆ ! ಕಂಪಾಜಿಟರನ್ನ ಕರೆಸಿ ನನ್ನನ್ನ ಹೊರಕ್ಕೆ ಹಾಕಿಸ್ತೀಯಾ ?--ಅಯ್ಯೋ ಹುಚ್ಚ ಅಂದ್ರೆ ಭಾರೀ ಹುಚ್ಚ ! ಅವರೂ ನಾನೂ ಕಾಮ್ರೇಡ್ಸ್ ಕಣೋ ! ಅವರೆಲ್ಲಾ ನನ್ನ ಚೆನ್ನಾಗಿ ಬಲ್ಲರು. ನೀನಾದರೋ ಈಚೆಗೆ ಬಂದವನು;

ನಿನಗಿಂತಲೂ ನನ್ನ ಪರಿಚಯ ಸಾಕಷ್ಟಿದೆ ಕಂಪಾಜಿಟರ್‌ಗಳಿಗೆ. ಮನಸು ಮಾಡಿದರೆ ಈ ಕ್ಷಣವಲ್ಲೇ ನಿನನ್ನು ಕತ್ತು ಹಿಡಿದು ಹೊರದಬ್ಬಿಸ ಬಲ್ಲೆ... ....

'ಮಾಥೂರಾಯ ಸತ್ತು ಹೋದ ?' ನೀನನ್ನುವದಾದರೂ ಏನು ?- ಪತ್ರಿಕೆಯಲ್ಲಿ ನಿಧನವಾರ್ತೆಯೂ ಬಂತು ? ದುಂದುಭಿಯೂ ಅವನ ಸೂತಕ ಆಚರಿಸಿತು ? ಅವನ ಜೀವನ ಚಿತ್ರವೂ ಪ್ರಕಟವಾಯಿತು ? ಅರೇ ಮರುಳ ! ನೀನೇ ಎಲ್ಲೋ ಲಾಲ್‌ಬಾಗಿನಾಚೆಯ ಸ್ಥಳದಿಂದ ಬಂದಿರಬೇಕು !

"ಮಾಥೂರಾಯ ಸಾಯುವುದೂ ಉಂಟೇ ?-ಎಂಥ ಮಾತು ಆಡ್ತೀಯಾ ? ದುಂದುಭಿ ಪತ್ರಿಕೆ ಇನ್ನೂ ಬದುಕಿರುವಾಗ ಮಾಥೂರಾಯ ಸಾಯುವುದುಂಟೇ ?

"ಹೋ ! ಹೋ ! ಹೋ ! ಹೌದು. ಹೌದು. ಹೌದು. ಮಗೂ. ನೀ ಹೇಳುವ ಮಾತಿನಲ್ಲಿ ಕೊಂಚ ಕೊಂಚ ನಿಜವೂ ಇದೆ. ಹೌದು. ನಾನು ಸಾಯುವುದರಲ್ಲಿದ್ದೆ. ಇಲ್ಲ....ಅವರು ನನ್ನನ್ನು ಕೊಲೆಮಾಡಲೆತ್ನಿಸಿದರು. ನಿಜ. ಆದರೇನು ? ಇಂಥವರಿಗೆಲ್ಲ ಸೊಪ್ಪು ಹಾಕುತ್ತೇನೆಯೇ ನಾನು ? ಸಾಯುತ್ತಿದ್ದರೂ ಬದುಕಿಕೊಂಡೆ........

"ವಿಲಕ್ಷಣ ಅನಿಸುತ್ತೆಯೇ ನನ್ನ ಮಾತು ನಿನಗೆ ? ವಿಲಕ್ಷಣ ಏನು ಕಂಡೆಯೋ ಇದರಲ್ಲಿ ? ನಾ ಹೇಳೋದು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗಿದೆ. ನನ್ನನ್ನು ಅವರು ಕೊಲ್ಲಲು ಯತ್ನಿಸಿದರು. ಹೀಗೆ—ಹೀಗೆ— ಕತ್ತು ಹಿಸುಕಿದರು. ನಿಜಕ್ಕೂ ನನ್ನ ಪ್ರಾಣ ಹೋಯಿತೆಂದೇ ನಂಬಿಕೊಂಡರು. ಆದರೆ—ಸತ್ತಾನೇ ಈ ಭೂಪ ? ಇನ್ನೂ ಬದುಕಿಯೆ ಇದೇನೆ ನೋಡು.

'ಬದುಕಿದ್ದರೂ ಏನು ಪ್ರಯೋಜನ ಅಂತೀಯಾ ? ಕ್ಷಯರೋಗಿಯಂತಾಗಿರುವ ಈ ಅಸ್ಥಿಪಂಜರ ಕಂಡು ನಗ್ತೀಯಾ ?—ನಗು ! ನಗು ! ಬಾಯಿ ಹರಿಯೋಹಾಗೆ ನಗು ! ಕತ್ತು ಒಡೆಯೋ ಹಾಗೆ ನಗು ! ಕೇಳೋರ ಕಿವಿ ಒಡೆಯೋ ಹಾಗೆ ನಗು ! ಆದರೆ—ಲೋ, ಪಾಪಚ್ಚಿ !

ನಲವತ್ತೈದು ವರ್ಷ ವಯಸ್ಸಿಗೇನೇ ನಾನು ಹೀಗೇಕಾದೆ ಗೊತ್ತೇ ನಿನಗೆ ?—

'ನಿಜ ಹೇಳ್ತೀನೆ ಕಣೋ ! ನಾನಾಗಿಯೆ ಆಗಲಿಲ್ಲ ಹೀಗೆ. ತಮ್ಮ ಆರೋಗ್ಯವನ್ನ ತಾವೇ ಯಾರಾದರೂ ಹಾಳು ಮಾಡಿಕೊಳ್ತಾರೆಯೆ ? ಮನುಷ್ಯನಾದವನಿಗೆ ಅಷ್ಟೂ ಬುದ್ಧಿಯಿರೋಲ್ಲವೆ ? ಎಂಥ ಬುದ್ಧಿ ಇದ್ದ ರೇನು—ಕಪಟಿಗಳಾದ ಕೆಪಿಟಲಿಸ್ಟರ ಬಲೆಗೆ ಬಿದ್ದರೆ ಎಲ್ಲಾ ವ್ಯರ್ಥವಾಗುತ್ತದೆ. ಹಾಲಿನಿಂದ ತುಂಬಿಕೊಂಡು—ದಪ್ಪಗೆ ದುಂಡಗೆ ಇದ್ದ ಕಬ್ಬು ಗಾಣಕ್ಕೆ ಸಿಕ್ಕಿಬಿದ್ದು ಸಿಪ್ಪೆ ಸಿಪ್ಪೆಯಾಗುವುದಿಲ್ಲವೆ ? ಅದರ ಹಾಲನ್ನೆಲ್ಲಾ ಹೀರಿಕೊಂಡು ಬಿಸಿಲಿಗೆ ಬಿಸಾಕಿ ಬಿಡುತ್ತಾರೆ. ಅಷ್ಟಕ್ಕೇ ಅದರ ಪಾಡಿಗ ದನ್ನು ಬಿಟ್ಟರೆ ಎಷ್ಟೋ ಪುಣ್ಯ. ಅಲ್ಲಿಗೂ ನಿಲ್ಲುವುದಿಲ್ಲ ಚಿತ್ರಹಿಂಸೆ. ಬಿಸಿಲಲ್ಲಿ ಸುಟ್ಟು ಸುಟ್ಟು ಒಣಗಿ ಹೋದ ಬಳಿಕ ಅದನ್ನು ಉರುವಲಾಗಿ ಉಪಯೋಗಿಸುತ್ತಾರೆ ಒಲೆಗೆ ಹಾಕಿ !

'ತಿಳೀತೇನು ಈ ಉಪಮೆಯ ಅರ್ಥ ನಿನಗೆ ? ಈ ಕಬ್ಬಿಗೂ ನನಗೂ ಯಾವ ವ್ಯತ್ಯಾಸವೂ ಉಳೀಲಿಲ್ಲ. ಅದನ್ನು ಹಿಂಡುವ ಹಾಗೆ ಹಿಂಡಿದರು ನನ್ನನ್ನು ಈ ಬಂಡವಾಳಗಾರರು. ಹಿಂಡಿ ಹಿಂಡಿ ನನ್ನ ಮೈಲಿದ್ದ ರಕ್ತವನ್ನೆಲ್ಲಾ ತೆಗೆದು ಮಾರಿದರು. ಮಾರಿ ದುಡ್ಡು ಮಾಡಿಕೊಂಡರು. ನೋಡು. ಈಗ ಕಬ್ಬಿನ ಸಿಪ್ಪೆಯಂತಾಗಿದೇನೆ.... ನನ್ನ ಶಕ್ತಿಯೆಲ್ಲಾ ಕುಂದಿ ಹೋಗಿ ಕೆಲಸಕ್ಕೆ ಬಾರದಂತಾಗಲು ಕತ್ತು ಮುರಿದು ಬೀದಿಗೆಸೆದುಬಿಟ್ಟರು.

'ಅರ್ಥ ಆಗಲೇ ಇಲ್ಲ ಅಂತೀಯಾ ? ಎಂಥ ಬಿ.ಎ. ಯೋ ನೀನು ? ಯಾವ ಮುಟ್ಠಾಳ ನಿನಗೆ ಡಿಗ್ರಿಕೊಟ್ಟ ? ನಿಮ್ಮ ಕಾಲೇಜುಗಳಲ್ಲಿ ಒಂದು ಉಪಮಾಲಂಕಾರ ಕೂಡ ಕಲಿಸೋದಿಲ್ಲವೇನು ? ಇಂಥ ಅರಣ್ಯ ಪಂಡಿತರು ನೀವು ಏತಕ್ಕಾದರೂ ಬರ್ತೀರೋ ಕಾಣೆ ಈ ಪತ್ರಿಕಾ ಕಚೇರಿಯಲ್ಲಿ ಕೆಲಸ ಮಾಡಲು ! ಸಬ್ ಎಡಿಟರ್ ಕೆಲಸ ಅಂದ್ರೇನು ಕಳ್ಳೇಕಾಯಿ ತಿಂದಹಾಗೆ ಅಂತ ತಿಳಿದಿದ್ದೀಯಾ ? ನಿಮ್ಮ ಬಿ.ಎ.ಎಂ.ಎ. ಏನೂ ಪ್ರಯೋಜನವಿಲ್ಲ ಈ ರಾಜ್ಯದಲ್ಲಿ. ಮುಖ್ಯ ಸಂಪಾದಕೀಯ ಕೌಶಲ್ಯ ಬೇಕು. ಕತ್ತೆ ದುಡಿದ ಹಾಗೆ ದುಡಿಯಲು ಗೊತ್ತಿರಬೇಕು. ನಾನಂತೂ ಕತ್ತೆಯಂತಲ್ಲ—ಅದರ

ಪ್ಪನ ಹಾಗೆ ದುಡಿದೆ. ಅಂದಾಗ 'ದುಂದುಭಿ'ಯೂ ಒಂದು 'ದುಂದುಭಿ'ಯಾಯಿತು. ಇಲ್ಲಾಂದ್ರೆ ಯಾರು ಕೇಳುತ್ತಿದ್ದರು ಅದನ್ನ ?

ಯಾರು ? ಪ್ರೊಪ್ರೈಟರೇ ?—ಅವನಿಗೇನು ತಿಳಿಯುತ್ತೆ ತಲೆ ಎಡಿಟಿಂಗ್‌ನಲ್ಲಿ? ನಮ್ಮ ದುಡಿತದಿಂದ ಬಂದ ದುಡ್ಡನ್ನು ತನ್ನ ಜೇಬಿಗೆ ಬಿಟ್ಟು ಅದನ್ನು ಬಚ್ಚಿಡುವುದಷ್ಟು ತಿಳಿದಿದೆ ಅಷ್ಟೇ. ಆ ಪ್ರೊಪ್ರೈಟರ್ ಮಾಡಿದ್ದಲ್ಲ ಈ ಪತ್ರಿಕೆ. ನಾನು, ನಾನು ಮಾಡಿದ್ದು ! ನಾನು, ನನ್ನ ಜೊತೆಗಾರನಾಗಿದ್ದ ಕಿಟ್ಟಣ್ಣ ಮಾಡಿದ್ದು ! ಈ ಪ್ರೊಪ್ರೈಟರ್ ಹತ್ತಿರ ಇಂದೇನೊ ಲಕ್ಷಗಟ್ಟಲೆ ಹಣ ಇದೆ. ಪತ್ರಿಕೆಯೂ ಬೆಳೆದು ದೊಡ್ಡದಾಗಿದೆ. ಲೋಕಪ್ರಿಯತೆಯ ಜತೆಯಲ್ಲೇ ದೊಡ್ಡ ದೊಡ್ಡ ಕಂಪನಿಗಳ ಜಾಹಿರಾತುಗಳೂ ದೊರೆತಿವೆ. ಯುದ್ಧಕ್ಕಾರಂಭವಾದಂದಿನಿಂದಂತೂ ಸರ್ಕಾರಿ ಪ್ರಕಟನೆಗಳಿಂದ ಹೊನ್ನಿನ ಮಳೆಯೇ ಸುರಿಯಿತು. ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿದ ಪೇಪರಿನಿಂದಲೂ ಸಾವಿರಾರು ರೂಪಾಯಿ ಬಂತು. ಈಗ ಲಕ್ಷಗಟ್ಟಲೆ ಹಣ ಇಟ್ಟಿದಾನೆ ಬ್ಯಾಂಕಿನಲ್ಲಿ. ತಿರುಗಲು ಕಾರೂ ಇಟ್ಟುಕೊಂಡಿದಾನೆ. ದೊಡ್ಡ ಪ್ರೆಸ್ಸೂ ಮಾಡಿಕೊಂಡಿದ್ದಾನೆ. ವಿಲಾಸಕ್ಕೆ ಇಬ್ಬರು ಮೋಹಿನಿಯರನ್ನೂ ಇಟ್ಟುಕೊಂಡಿದಾನೆ.

"ಆಗ ?—ಇಪ್ಪತ್ತು ವರ್ಷಗಳಿಗೆ ಹಿಂದೆ—ಇದೇ ಈ ಪ್ರೊಪ್ರೈಟರ್ ಹತ್ತಿರ ಆಗ ಇದ್ದುದೆಷ್ಟು ಗೊತ್ತೇ ನಿನಗೆ ?—ಎರಡು ರೂಪಾಯಿ ! ಬರೀ ಎರಡೇ ಎರಡು ರೂಪಾಯಿ ! ದಿಗಿಲು ಬೀಳಬೇಡವೋ ಹಾಗೆ ! ನಂಬಿದರೆ ನಂಬು—ಬಿಟ್ಟರೆ ಬಿಡು. ಆಗ ಅವನ ಹತ್ತಿರ ಇದ್ದ ಆಸ್ತಿ-ಪಾಸ್ತಿ ಎಲ್ಲಾ ಬರೀ ಎರಡು ರೂಪಾಯಿ ! ಆದರೂ ಸಾಹಸಿ ಅನ್ನು. ಹೇಗೋ ಪತ್ರಿಕೆ ಪ್ರಾರಂಭಿಸಿದ. ಅವನಿಗಾಗಿ—ಅವನ ಸವಿಸವಿ ಮಾತುಗಳಿಗೆ ಮರುಳಾಗಿ—ಅವನ ಗೆಳೆತನದ ವಿಶ್ವಾಸಕ್ಕಾಗಿ ನಾವಿಬ್ಬರೂ ದುಡಿಯತೊಡಗಿದೆವು. ಪತ್ರಿಕೆ ನಮ್ಮದೇ ಎಂದು ತಿಳಿದು ಮೂರು ವರ್ಷಗಳ ಕಾಲ ಸಂಬಳವಿಲ್ಲದೆ ಕೆಲಸ ಮಾಡಿದೆವು. ಪತ್ರಿಕೆ ಕಟ್ಟುವುದೊಂದೇ ಆಗ ನಮ್ಮ ಧ್ಯೇಯವಾಗಿತ್ತು. ಬೇರಾವುದರ ಪರಿವೆಯೂ ಇರಲಿಲ್ಲ ನಮಗೆ. ಮನೆಯವರನ್ನೆಲ್ಲ ಊರಲ್ಲೇ ಬಿಟ್ಟು ಅವನಿಗಾಗಿ ಇಲ್ಲಿದ್ದೆವು. ಹೋಟೆಲಿನಿಂದ ಒಂದು ಊಟ ತಂದು ಕಿಟ್ಟಣ್ಣ—ನಾನು ಇಬ್ಬರೂ ಅರೆಹೊಟ್ಟೆ

ತಿಂದು ರಾತ್ರಿ ಹಗಲು ದುಡಿಯುತ್ತಿದ್ದೆವು. ನಿದ್ರೆ ?—ಎಲ್ಲಿಯ ನಿದ್ರೆ ? —ಪತ್ರಿಕೆಯ ಅಭಿವೃದ್ಧಿಯ ಉತ್ಸಾಹ ನಮ್ಮನ್ನು ಕೊಚ್ಚಿಕೊಂಡು ಹೋಗುತ್ತಿತ್ತು.

'ಈಗತಾನೆ ಕಾಲೇಜು ಬಿಟ್ಟು ವಾಸ್ತವ ಜಗತ್ತಿಗೆ ಕಾಲಿಟ್ಟ ಹಸುಳೆ ನೀನು. ನಿನಗೆ ಆಶ್ಚರ್ಯವಾಗುವಲ್ಲಿ ಏನೂ ಆಶ್ಚರ್ಯವಿಲ್ಲ. ಆಗ ನಿಜಕ್ಕೂ ನಮಗೆ ಪತ್ರಿಕೆಯ ಹುಚ್ಚೇ ಹಿಡಿದಿತ್ತು. ಸಂಪಾದಕೀಯ ಕೆಲಸ ಮಾಡುವುದೂ ಅಲ್ಲದೆ--ಫಾರಂ ಜೋಡಿಸುವುದು, ಬಂಡಲ್‌ಕಟ್ಟು ವುದು, ಅವನ್ನು ಹೆಗಲಮೇಲೆ ಹೊತ್ತುಕೊಂಡು ಸ್ಟೇಶನ್ನಿಗೆ ಹೋಗಿ ಪಾರ್ಸಲುಮಾಡಿ ಬರುವುದು—ಲೇಬಲ್ ಬರೆಯುವುದು, ಬಿಲ್ ಮಾಡು ವುದು, ಪತ್ರವ್ಯವಹಾರ ನೋಡಿಕೊಳ್ಳುವುದು, ಅವರಿವರಿಗೆ ದಮ್ಮಯ್ಯ ಗುಡ್ಡೆ ಹಾಕಿ ಚಂದಾ ಹಣ ಶೇಖರಿಸುವುದು, ಬಾಕಿ ನಿಂತಿರುವವರಿಂದ ವಸೂಲಿ ಮಾಡುವುದು, ಅಷ್ಟು ಮಾತ್ರವಲ್ಲ—ಆಳು ಇಟ್ಟುಕೊಳ್ಳಲು ಸಾಧ್ಯವಿರದ್ದರಿಂದ ಆ ಫೀ ಸಿ ನ ಕಸಗುಡಿಸುವುದನ್ನು ಸಹ ನಾವೇ ಮಾಡಿದೆವು.

'ನಮ್ಮ ಈ ಕತ್ತೆ ಚಾಕರಿಯ ಫಲವಾಗಿ ಪತ್ರಿಕೆ ಬೆಳೆಯಿತು. ಲೋಕ ಪ್ರಿಯತೆ ಪಡೆಯಿತು. ಪ್ರೊಪ್ರೈಟರ್ ಕೈಲಿ ಮೆಲ್ಲನೆ ಕಾಸು ಓಡಾಡತೊಡ ಗಿತು. ಎಷ್ಟು ದಿನ ಅಂತ ಹಾಗೇ ಇರಲಿಕ್ಕಾದೀತು ಸನ್ಯಾಸಿಗಳ ಹಾಗೆ ? ನಾವೂ ಮನುಷ್ಯರೇ ಅಲ್ಲವೆ ? ಕಿಟ್ಟಣ್ಣನಿಗೂ ಮದುವೆಯಾಗಿತ್ತು. ನನಗೂ ಆಗಿತ್ತು. ಇಬ್ಬರೂ ಇಲ್ಲೇ ಮನೆ ಮಾಡಬೇಕೆಂದು ಯೋಚಿಸಿ ಪ್ರೊಪ್ರೈಟರ್ ಹತ್ತಿರ ಮಾತು ತೆಗೆದೆವು.

'ಏನು ಹೇಳಿದ ಗೊತ್ತೇ ಆತ ? 'ಈಗಲೇ ಯಾಕೆ ಅವಸರ ಮಾಡ್ತೀರಿ ? ದೊಡ್ಡ ಊರು. ವಿಪರೀತ ವೆಚ್ಚ. ಪತ್ರಿಕೆ ಇನ್ನೂ ಬೆಳೆಯಲಿಲ್ಲ. ಸಂಪಾದನೆಯೂ ತೀರ ಅಲ್ಪ. ಸುಮ್ಮನೆ ತೊಂದರೆಪಟ್ಟು ಕೊಳ್ಳಬೇಡಿ' ಎಂದು ಉಪದೇಶ ಮಾಡಿದ.

'ಆಗ ಗೊತ್ತಾಯಿತು ಆವನ ನಿಜ ಸ್ವರೂಪ ನಮಗೆ. ಇದುವರೆಗೂ ನಮ್ಮ 'ಕಾಮ್ರೇಡ್' ಆಗಿದ್ದ ಈ ಮನುಷ್ಯ ಕೈಗೆ ಕಾಸು ಬರುತ್ತಲೂ ಪಕ್ಕಾ 'ಕೆಪಿಟಲಿಸ್ಟ್' ಆಗಿಬಿಟ್ಟಿದ್ದ. ಪತ್ರಿಕೆಗೆ ಹಾನಿಯೇನೂ ಇರಲಿಲ್ಲ.

ತಿಂಗಳಿಗೆ ಐದುನೂರು ರೂಪಾಯಿಯವರೆಗೂ ಲಾಭ ದೊರೆಯುತ್ತಿತ್ತು--ಎಲ್ಲಾ ಖರ್ಚು ಕಳೆದು. ಹೀಗಿದ್ದರೂ ನಾವು ಮನೆ ಮಾಡುವುದು ಅವನಿಗಿಷ್ಟವಿರಲಿಲ್ಲ. ನಮ್ಮಿಬ್ಬರಿಗೂ ಐವತ್ತು—ಐವತ್ತು ರೂಪಾಯಿ ಕೊಡುವುದಕ್ಕೂ ಒಪ್ಪಲಿಲ್ಲ ಆತ. 'ಮೂವತ್ತು ರೂಪಾಯಿ ಕೊಟ್ಟರೆ ಬಹಳವಾಯಿತು. ಅದಕ್ಕಿಂತ ಹೆಚ್ಚು ಎಲ್ಲಿಂದ ಕೊಡಲಿ?' ಅಂತ ಅತ್ತುಕೊಂಡುಬಿಟ್ಟ.

'ಕೋಪ—ತಿರಸ್ಕಾರಗಳಿಂದ ನಾವಿಬ್ಬರೂ ಉರಿಯತೊಡಗಿದೆವು. ಆದರೇನು ಮಾಡುವುದು? ಮಾತನಾಡಿ ಪ್ರಯೋಜನವಿರಲಿಲ್ಲ. ಅವನು ಹೀಗೆ ಬಣ್ಣ ಬದಲಾಯಿಸಬಹುದೆಂಬುದು ಪ್ರಾರಂಭದಲ್ಲೇ ನಮಗೆ ತಿಳಿದಿದ್ದರೆ? ಕಾನೂನುಬದ್ಧವಾಗಿ ಒಂದು ಕಂಟ್ರಾಕ್ಟ್ ಆದರೂ ಮಾಡಿಕೊಳ್ಳುತ್ತಿದ್ದೆವು. ಈಗ ಆ ಬಂಧನವೂ ಇಲ್ಲ. ಮೂವತ್ತು ಬಿಲ್ಲೆ ಬೇಕಿದ್ದರೆ ಅಲ್ಲಿರಬೇಕು. ಇಲ್ಲವಾದರೆ ಹೊರಟುಹೋಗಬೇಕು. ಬೇರೆ ದಾರಿಯೇ ಇರಲಿಲ್ಲ!

'ಆ ಅವಮಾನ ಸಹಿಸಲಾರದೆ ಕಿಟ್ಟಣ್ಣ ಹೊರಟುಹೋದ. ನಾನೋ? ದುರ್ಬಲ ಮನುಷ್ಯ. ಹುಚ್ಚು ಮನುಷ್ಯ. ಈ ಪ್ರೊಪ್ರೈಟರನ ಮೋಸಗಾರಿಕೆಯನ್ನ ಕಂಡರೂ ಪತ್ರಿಕೆಬಿಟ್ಟು ಹೋಗುವ ಮನಸ್ಸಾಗಲಿಲ್ಲ ನನಗೆ. ಅದುವರೆಗೆ ನಾನು ಕಟ್ಟಿ ಬೆಳಸಿದ 'ದುಂದುಭಿ', ನನ್ನ ದುಂದುಭಿಯೆಂದೇ ಭಾವನೆಯಾಗಿತ್ತು ನನಗೆ. ಸ್ವಂತ ಮಗುವಿನಂತೆ ಅದರಮೇಲೆ ಪ್ರೀತಿ ಹುಟ್ಟಿತ್ತು. ಅದನ್ನು ಬಿಟ್ಟು ಹೋದರೆ ಕರುಳೇ ಕತ್ತರಿಸಿ ಹೋದಂತಾದೀತು ಅನ್ನಿಸಿತು. ಬಿಟ್ಟು ಬಿಟ್ಟು ಬೇರೆ ಉದ್ಯೋಗ ಹುಡುಕುವ ಯೋಗ್ಯತೆಯೂ ಇರಲಿಲ್ಲ ನನಗೆ. ಪತ್ರಿಕಾವೃತ್ತಿ ಮೈಗಂಟಿಕೊಂಡಿತ್ತು. ಸರಿ. ಆ ಮೂವತ್ತು ರೂಪಾಯಿಗೇ ಒಪ್ಪಿಕೊಂಡು ದುಡಿಯತೊಡಗಿದೆ.

'ಮನೆಯವರನ್ನು ಇಲ್ಲಿಗೆ ಕರೆದುಕೊಂಡು ಬಂದದ್ದೂ ಆಯಿತು.—ಐದು ರೂಪಾಯಿ ಬಾಡಿಗೆಗೆ ಒಂದು ಪುಟ್ಟ ಮನೆಹಿಡಿದು ಹೇಗೋ ಸಂಸಾರ ಹೂಡಿದ್ದಾಯಿತು. ಆಗಲೇ ಎರಡು ಮಕ್ಕಳು ಬೇರೆ. ನಾನು—ನನ್ನಾಕೆ— ಈ ಎರಡು ಕುನ್ನಿಗಳು. ಹೆಂಡತಿಗೋ ಸದಾ ಕಾಯಿಲೆ. ನಮ್ಮೆಲ್ಲರ ಹೊಟ್ಟೆ—ಬಟ್ಟೆ, ಔಷಧ—ಉಪಚಾರ ಎಲ್ಲಾ ಈ ಮೂವತ್ತು ರೂಪಾಯಿ

ನಲ್ಲೇ! ಯಾತಕ್ಕಾದೀತು ಈ ಅಲ್ಪ ಸಂಬಳ? ಅಲ್ಲಿ ಇಲ್ಲಿ ಸಾಲವಾಡದೆ ರಥ ಸಾಗುವಂತಿರಲಿಲ್ಲ. ಮನೆಯ ಸಂಕಟವನ್ನೆಲ್ಲ ಈ ಪ್ರೊಪ್ರೈಟರ್ ಹತ್ತಿರ ಹೇಳಿಕೊಳ್ಳುವಂತಿಲ್ಲ. ಹೇಳಿದ್ದರೂ ಅವನಿಂದ ಸಹಾಯ ಸಿಕ್ಕೋದೂ ಅಷ್ಟರಲ್ಲೇ ಇತ್ತು.

'ಯುದ್ಧಕ್ಕಾರಂಭವಾಯಿತು! ಪತ್ರಿಕೆಗೇನೋ ಲಾಭ ಹೆಚ್ಚತೊಡಗಿತು. ಮಾಲೀಕನ ಬೊಕ್ಕಸವೂ ತುಂಬತೊಡಗಿತು. ನನಗೆ ಮಾತ್ರ ಸಂಕಟಪರಂಪರೆ ಹೆಚ್ಚಾಯಿತು. ಎಲ್ಲವೂ ತುಟ್ಟಿ ತುಟ್ಟಿ! ಸಂಪಾದನೆ ಮಾತ್ರ ಮೊದಲಿನಷ್ಟೆ. ಕೆಲಸಗಾರರೆಲ್ಲ ಸೇರಿಕೊಂಡು ಮೂರು ತಿಂಗಳ ಕಾಲ ಗೋಳು ಹುಯ್ದುಕೊಂಡ ಬಳಿಕ ಹತ್ತು ರೂಪಾಯಿ ಅಲೋಯನ್ಸ್ ಕೊಟ್ಟು ಪುಣ್ಯಕಟ್ಟಿಕೊಂಡ ಮಹಾರಾಯ! ಜೀವನದ ಮಟ್ಟ ಇನ್ನೂರು ಪಾಲು ಏರಿರುವಾಗ ಯಾತಕ್ಕೆ ಬಂದೀತು ಈ ಹತ್ತು ರೂಪಾಯಿ? ತುಂಬ ಕಷ್ಟದಲ್ಲಿ ದಿನಗಳೆಯತೊಡಗಿದೆವು. ನಮ್ಮ ತಾಪತ್ರಯ ಹೆಚ್ಚಿಸುವುದಕ್ಕೋ ಏನೋ ವರ್ಷಗಳು ಕಳೆದ ಹಾಗೆ ಮಕ್ಕಳ ಬಳಗವೂ ಹೆಚ್ಚುತ್ತಿತ್ತು. ಆಗಲೇ ಆರು ಮಕ್ಕಳ ಕೂಟ ಮನೆಯಲ್ಲಿ. ಸರಿಯಾಗಿ ಆಹಾರವಿಲ್ಲದೆ, ಒಂದು ಗುಟುಕು ಹಾಲಿಗೂ ಗತಿಯಿಲ್ಲದೆ ಎಲ್ಲಾ ಸೊರಗಿ ಕಡ್ಡಿಯಾಗಿದ್ದವು. ಅವಳಿಗಂತೂ ಹನ್ನೆರಡು ತಿಂಗಳೂ ಕಾಯಿಲೆ! ನನಗೂ ಮಧ್ಯೆ ಮಧ್ಯೆ ಕಾಯಿಲೆಗಾರಂಭವಾಯಿತು.

'ಕಾಯಿಲೆ ಬಂದರೇನು, ಕಾಲ ಬಂದರೇನು, ಮಾಲೀಕ ಕೇಳುತ್ತಾನೆಯೆ? ಅವನಿಂದ ಸಂಬಳ ಪಡೆಯಬೇಕಿದ್ದರೆ ಆಫೀಸ್ಗೆ ಬಂದು ದುಡಿಯಲೇಬೇಕು. ಅರ್ಧ ದಿನ ಬರದಿದ್ದರೆ ಅಷ್ಟು ಸಂಬಳಕ್ಕೆ ಕತ್ತರಿಯೆ!

'ಒಂದು ಸಾರಿಯ ವಿಚಾರ ಹೇಳ್ತೀನೆ ಕೇಳು. ಮನೆಯಲ್ಲಿ ಅವಳಿಗೆ ವಿಪರೀತ ಕಾಯಿಲೆ. ಎಂಟು ದಿನಗಳಿಂದ ಕೆಂಡದಂತ ಜ್ವರ. ಮಾತನಾಡುವ ತ್ರಾಣವೂ ಇರಲಿಲ್ಲ. ಮಕ್ಕಳೆಲ್ಲಾ ಇನ್ನೂ ಚಿಕ್ಕವು. ಏನೂ ಅರಿಯದ ಹಸುಳೆಗಳು. ತಾಯಿಯ ಬಳಿ ಅಳುತ್ತ ಕೂತುಕೊಳ್ಳುವುದನ್ನುಳಿದು ಅವು ಇನ್ನೇನು ತಾನೇ ಮಾಡಿಯಾವು? ಅವಳು ಒದ್ದಾಡುವುದನ್ನು ನೋಡಲಾರದೆ ಆ ದಿನವೂ—ಅದರ ಮರುದಿನವೂ ಮನೆಯಲ್ಲೇ

ಇದ್ದುಬಿಟ್ಟೆ. ಆಫೀಸಿಗೆ ಹೇಳಿ ಕಳಿಸುವುದಕ್ಕೂ ಆಗಲಿಲ್ಲ. ಮನೆಯಿಂದ ಮೂರು ಮೈಲಿ ದೂರದ ಆಫೀಸಿಗೆ ಹೋಗುವವರಾದರೂ ಯಾರು ?— ಸರಿ. ಮೂರನೇ ದಿನ ಮಕ್ಕಳಿಗಷ್ಟು ಗಂಜಿ ಕಾಯಿಸಿ ಹಾಕಿ ಆಫೀಸಿಗೆ ಹೋದೆ ಕಾಲೆಳೆದುಕೊಂಡು.

'ಕಣ್ಣು ಕೆಂಪಗೆ ಮಾಡಿಕೊಂಡು ಕೂತಿತ್ತು ಸವಾರಿ. ನನ್ನನ್ನು ಕಂಡೊಡನೆ ಏನು ಹೇಳಬೇಕು ಆತ ? 'ಹೀಗೆಲ್ಲಾ ಮನಸ್ಸಿಗೆ ಬಂದಾಗ ಬರೋದು—ಬರದಿದ್ದಾಗ ಬಿಡೋದು ಮಾಡೋಕೆ ಇದೇನು ಪೇಪರಾಫೀಸೋ—ಇಲ್ಲ—ಹೇರ್ ಕಟಿಂಗ್ ಸೆಲೂನೋ ?'

'ಆಫೀಸ್' ಅಂತೆ ಆಫೀಸು ! ಇವನಿಗೊಂದು 'ಆಫೀಸು' ಆಗಲು ನಾನು ಉಪವಾಸ—ವನವಾಸ ಮಾಡಿದ್ದರ ಸ್ಮರಣೆಯಿರಲಿಲ್ಲ ಅವನಿಗೆ. ಅದೆಲ್ಲೋ ಪೂರ್ವಜನ್ಮದ ಕತೆಯಂತಾಗಿತ್ತು ! ಈಗ ಈತ ದೊಡ್ಡ ಮನುಷ್ಯ. ಪ್ರಸಿದ್ಧ ಪತ್ರಿಕೆಯೊಂದರ ಸಂಪಾದಕ—ಸಂಚಾಲಕ ! ಊರಿನ ಗಣ್ಯ ನಾಗರಿಕ. ಲಕ್ಷದ ಕುದುರೆ ಏರಿದ ಸಾಹುಕಾರ. ನಾನಾದರೋ—ಈ ಸಾಹುಕಾರ ಕೊಡುವ ಕಾಸಿಗಾಗಿ ಚಾಕರಿ ಮಾಡುವ ಕೂಲಿಗಾರ. ಹೌದು. ಅಷ್ಟೆ. ಇನ್ನೇನು ?

"ಒಳ್ಳೆಯ ಮಾತೇ ಹೇಳಿದೆ. ನೀನೇ ಒಪ್ಪಿಕೊಂಡೆ ಅಣ್ಣ ! ನಿನ್ನದು 'ಆಫೀಸ್' ಅಲ್ಲವೇ ಅಲ್ಲ. ನಿಜಕ್ಕೂ ಅದು ಹೇರ್ ಕಟಿಂಗ್ ಸೆಲೂನೇ ! ನಮ್ಮನ್ನೆಲ್ಲಾ ಚೆನ್ನಾಗಿ ಬೋಳಿಸಿದೆ ನೀನು. ಹೌದು. ಉಲ್ಟಾ ಹಜಾಮತಿಯನ್ನೇ ಮಾಡಿದೆ !' ಎಂದು ಮನಸ್ಸಿನಲ್ಲೇ ಅಂದುಕೊಂಡೆ. ಅವನೆದುರಿಗೆ ಏನೂ ಆಡಲಿಲ್ಲ. ಆಡುವುದಾದರೂ ಹೇಗೆ ? 'ನಿನ್ನಂಥ ಸೋಮಾರಿಗಳು ನನಗೆ ಬೇಕಿಲ್ಲ. ನಡೆಯಾಚೆ !' ಅಂದುಬಿಟ್ಟರೆ ? ಈ ಕಷ್ಟಕಾಲದಲ್ಲಿ ಮುಂದೆ ಗತಿಯೇನು ?

'ಸರಿ. ಎಷ್ಟು ಕಷ್ಟವಾದರೂ, ಎಂಥ ಅವಮಾನವಾದರೂ ಎಲ್ಲವನ್ನೂ ಸಹಿಸಿಕೊಂಡು ಕಾಲ ನೂಕಿದೆ. ಮನೆಯಲ್ಲಿ ಎಂಥ ತೊಂದರೆಯೇ ಇರಲಿ—ನಾನಂತೂ ಆಫೀಸಿಗೆ ಬಂದೇ ತೀರಬೇಕು. ಬರದಿದ್ದರೆ ಆ ನಲವತ್ತು ರೂಪಾಯಿಗೂ ಸೊನ್ನೆ ಬೀಳುತ್ತಿತ್ತಲ್ಲ ! ಸರಿಯಾಗಿ ಅನ್ನವಿಲ್ಲ— ವಿರಾಮವೆಂಬುದು ಮೊದಲೇ ಇಲ್ಲ—ಮನಸ್ಸಿಗೆ ಕೊಂಚವೂ ನೆಮ್ಮದಿ

ಯಿಲ್ಲ—ಅದಕ್ಕೆ ಸರಿಯಾಗಿ ಬೌದ್ಧಿಕ ಪರಿಶ್ರಮದ ಕೆಲಸ ಬೇರೆ. ಇಂಥ ಸ್ಥಿತಿಯಲ್ಲಿ ನನ್ನ ಆರೋಗ್ಯ ಹೇಗೆ ಉಳಿದೀತು ನೀನೇ ಯೋಚಿಸು. ದಿನ ದಿನಕ್ಕೂ ಪ್ರಕೃತಿ ಹಾಳಾಗುತ್ತಾ ಬಂತು. ಔಷಧಿ ತೆಗೆದುಕೊಳ್ಳೋಣ ಅಂದರೆ ಕಾಸಿಲ್ಲ. ಸರಿ. ನಿರ್ಲಕ್ಷ್ಯವೇ ಅದಕ್ಕೆ ಮದ್ದಾಯಿತು. ದಿನ ಕ್ಕೊಂದು ರೀತಿಯಲ್ಲಿ ದೇಹ ತೆಳ್ಳಗಾಗುತ್ತಿತ್ತು. ಕೈಕಾಲು ಕಡ್ಡಿ ಕಡ್ಡಿ ಯಾಗುತ್ತಿದ್ದವು. ಎದೆ ಬತ್ತಿ ಹೋಗುತ್ತಿತ್ತು. ಕೆನ್ನೆ ಮೂಳೆ ಎದ್ದು ಕಾಣುತ್ತಿತ್ತು. ಕಣ್ಣುಗಳೆರಡೂ ಒಳ ಸೇರುತ್ತಿದ್ದುವು. ದೃಷ್ಟಿಯೂ ಮಂದ ವಾಗುತ್ತಿತ್ತು. ಯಾವುದೋ ರೋಗ ಇದೆಯಲ್ಲ 'ಟಿ. ಬಿ.' ಅಂತ! ನನಗೆ ಬಂದುದು ಅದೇ ಇರಬೇಕು.

'ಟಿ. ಬಿ. ಆದರೇನು—ಅದರ ತಾತ ಆದರೇನು? ಮಾಲೀಕನಿಗೆ ಅದರ ಗೊಡವೆಯೇನು? 'ಸತ್ತಿದ್ದೀಯಾ? ಬದುಕಿದ್ದೀಯಾ?' ಅಂತ ಒಂದು ಸಲವಾದರೂ ಆತ ವಿಚಾರಿಸಿದ್ದರೆ ಶ್ರೀರಾಮಚಂದ್ರನಾಣೆ! 'ಯಾಕೆ, ಮಾಧೂರಾವ್, ಮೈಲಿ ಚೆನ್ನಾಗಿಲ್ಲವೆ? ಏಕೆ ಇಷ್ಟು ಇಳಿದು ಹೋಗಿದ್ದೀರಿ? ಔಷಧಿ ತೆಗೆದುಕೊಳ್ಳಿ' ಅಂತ ಒಂದು ಸಲವಾದರೂ ಹೇಳಿಯಾನೇ ಆ ಭೂಪ? 'ಔಷಧಿಗೆ ದುಡ್ಡಿಲ್ಲ. ಇನ್ನು ಇಪ್ಪತ್ತು ರೂಪಾಯಿ ಸಂಬಳ ಹೆಚ್ಚಿಸಿ' ಅಂತ ನಾನೆಲ್ಲಾದರೂ ಕೇಳಿಬಿಟ್ಟೇನು ಅಂತ ಭಯವಿರಬೇಕು. ಅದೂ ಸ್ವಾಭಾವಿಕ ಅನ್ನು. ಪಾಪ! ಅವನ ತಪ್ಪೇನೂ ಇಲ್ಲ ಅದರಲ್ಲಿ. ಬಂಡವಾಳಗಾರರ ಜಾತೀನೇ ಹಾಗೇ!

'ಕೊನೆ ಕೊನೆಗಂತೂ ಜೀವನ ದುರ್ಭರವಾಯಿತು. ಇಂಥ ನರಕ ಯಾತನೆ ಅನುಭವಿಸುವುದಕ್ಕಿಂತ ಸತ್ತು ಹೋಗೋದೇ ಮೇಲು ಎನ್ನಿ ಸಿತು. ಆತ್ಮಹತ್ಯೆಯನ್ನಾದರೂ ಮಾಡಿಕೊಂಡುಬಿಡೋಣ ಅಂತ ಯೋಚಿಸಿದೆ. ಆದರೆ ಹೆಂಡಿರು ಮಕ್ಕಳ ಮುಖ ನೋಡುತ್ತಲೂ ಆ ವಿಚಾರ ಎಲ್ಲೋ ಮಾಯವಾಯಿತು. ನಾನು ಹೋದ ಬಳಿಕ ಅವರ ಗತಿ ಯೇನು? ಆಸ್ತಿ-ಪಾಸ್ತಿ ಯಾವುದೂ ಇಲ್ಲ. ಮೈಮೇಲೆ ಸಾವಿರ ರೂಪಾ ಯಿನ ಸಾಲ ಬೇರೆ. ಸದಾ ರೋಗಿಯಾದ ಪತ್ನಿ. ಶಕ್ತಿ ಹೀನರಾದ ಪುಟ್ಟ ಪುಟ್ಟ ಮಕ್ಕಳು. ಇನ್ನೂ ಇನ್ಶೂರ್ ಕೂಡಾ ಮಾಡಿಸಲಾಗಿರಲಿಲ್ಲ.

ಹೊಟ್ಟೆ ಹೊರೆಯೋದೇ ಕಷ್ಟವಾಗಿರುವಾಗ ಇನ್ನು ಅದಕ್ಕೆಲ್ಲಿಂದ ಹಣ ಕಟ್ಟೋದು ?

'ಕೊನೆಗೆ—ಒಂದುದಿನ—ಹೂಂ !—ಇಂದಿಗೆ ಒಂದು ತಿಂಗಳ ಹಿಂದೆ—ಭಾನುವಾರದ ದಿನ—ನನ್ನ ದಿನ ಬಂತು. ಅದಕ್ಕೆ ಹಿಂದೆ ಮೂರು ದಿನಗಳ ಕಾಲ ಆಫೀಸಿಗೆ ಹೋಗಿರಲಿಲ್ಲ. ತ್ರಾಣವಿದ್ದರಲ್ಲವೆ ಮೈಯಲ್ಲಿ ?—ಬಿಟ್ಟುಬಿಡದೆ ಹಗಲೂ ರಾತ್ರಿ ಜ್ವರಹೊಡೆಯುತ್ತಿತ್ತು. ಎದ್ದು ಕೂತಿರುವುದೂ ಸಾಧ್ಯವಿರಲಿಲ್ಲ. ಇನ್ನು ಆಫೀಸ್‌ವರೆಗೆ ನಡೆಯುತ್ತ ಹೋಗಿ ರಾಜಕೀಯ ಬರೆಯೋದು ಹೇಗೆ ಸಾಧ್ಯ ?

'ಶನಿವಾರ ಮಧ್ಯಾಹ್ನ ಕೊಂಚ ಜ್ವರ ಇಳಿದಿತ್ತು. ಶಕ್ತಿಯೆಲ್ಲಾ ಸುಟ್ಟುಹೋಗಿದ್ದರಿಂದ ಹೆಣದಂತೆ ಬಿದ್ದುಕೊಂಡಿದ್ದೆ. ಕುಡಿದೇನು ಅಂದರೆ ಒಂದು ತೊಟ್ಟು ಕಾಫಿಗೆ ಗತಿಯಿರಲಿಲ್ಲ. ಮನೆಯಲ್ಲಿ ಹಾಲು-ಸಕ್ಕರೆ-ಕಾಫಿಪುಡಿ ಇದ್ದರೆ ತಾನೆ ?—ಸೋಮವಾರ ಸಂಬಳದ ದಿನ. ಅದುವರೆಗೂ ಹೇಗೋ ಕಾಲ ಹಾಕಿ ಸಂಬಳ ತೆಗೆದುಕೊಂಡು ಬರಬೇಕೆಂದು ಯೋಚಿಸುತ್ತ ಬಿದ್ದುಕೊಂಡಿದ್ದೆ.

'ಸಾಯಂಕಾಲದ ಹೊತ್ತಿಗೆ ಆಫೀಸಿನ ಆಳು ಬಂದ—ಯಮದೂತ ಬಂದಹಾಗೆ ! ನನಗಾಗಿ ಒಂದು ಚೀಟಿ ತಂದಿದ್ದ. 'ಇನ್ನು ಬಹುಕಾಲ ಈ ರೀತಿ ನಡೆಯಲಾರದು. ಆಫೀಸಿನಲ್ಲಿ ನಿಮ್ಮಿಂದಾಗಿ ತುಂಬ ತೊಂದರೆ. ಈ ವಾರದ ನಿಮ್ಮ ಕೆಲಸವೆಲ್ಲಾ ಹಾಗೇ ಉಳಿದಿದೆ. ನಾಳೆ ಬಂದು ಅದನ್ನೆಲ್ಲ ಮುಗಿಸಿ ಹೋಗಿ. ಇಲ್ಲವಾದರೆ ಸೋಮವಾರ ಸಂಬಳ ಸಿಕ್ಕಲಾರದು' ಅಂತ ಬರೆದಿದ್ದ ಪ್ರೊಪ್ರೈಟರ್ !

'ಆ ರಾತ್ರಿಯೆಲ್ಲಾ ನಿದ್ರೆಗೆ ಚಕ್ಕರು. ಎದೆಯಲ್ಲಿ ದ್ವೇಷದ ಉರಿ ತಾಂಡವವಾಡುತಿತ್ತು. ಮನುಷ್ಯತ್ವಕ್ಕೂ ಹೊರತಾಗುವ ಈ ದುಡ್ಡಿನ ದಬ್ಬಿಗಳ ಬಗ್ಗೆ ಅತೀವ ತಿರಸ್ಕಾರವುಂಟಾಗುತಿತ್ತು. ತಕ್ಷಣ ಎದ್ದು ಹೋಗಿ ಅವನ ಕತ್ತು ಹಿಸುಕಿ ತೀರಿಸಿಬಿಟ್ಟು ಆ ದುಡ್ಡೆಲ್ಲವನ್ನು ಕೆಲಸಗಾರರಲ್ಲಿ ಹಂಚಿಬಿಡಬೇಕೆಂಬ ವಿಚಾರ ಕುದಿಯುತಿತ್ತು. ಎಲ್ಲಾ ಬರೀ ವಿಚಾರವೇ....!

'ಬೆಳಗಾಗುತ್ತಲೂ ಎದ್ದು ಹೊರಟೆ. ಮನೆಯ ಹೊಸಿಲು ದಾಟುವ ತ್ರಾಣವಿರಲಿಲ್ಲವಾದರೂ ಮೂರು ಮೈಲಿ ನಡೆಯಬೇಕಾಯಿತು. ಒಂದು ಲೋಟ ಕಾಫಿಗೂ ಗತಿಯಿರಲಿಲ್ಲ ಅಂಥ ನಿಶ್ಯಕ್ತಿಯಲ್ಲಿ—ಬರಿಹೊಟ್ಟೆ ಯಿಂದ ಅಷ್ಟು ದೂರದವರೆಗೆ ಹೇಗೆ ನಡೆದುಕೊಂಡು ಹೋದೆನೋ—ಅದೇ ಆಶ್ಚರ್ಯ ನನಗೆ !

'ಆಫೀಸಿಗೆ ಬಂದು ಕುರ್ಚಿಯ ಮೇಲೆ--ಹೌದು—ಇದೇ ಕುರ್ಚಿಯ ಮೇಲೆ ಕೂತುಕೊಂಡೆ. ಪಕ್ಕದ ಕೊಠಡಿಯಲ್ಲಿದ್ದ ಪ್ರೊಪ್ರೈಟರ್ ಬಂದ. 'ನಿಮ್ಮಿಂದಾಗಿ ಪತ್ರಿಕೆ ತಡವಾಯಿತು. ಬರೀರಿ ಆ ನಾಲ್ಕು ಪುಟಗಳ ಮ್ಯಾಟರ್ !' ಎಂದು ಹೇಳಿ ಹತ್ತಾರು ಪತ್ರಿಕೆ ಮೇಜಿನ ಮೇಲೆ ಬಿಸುಟ ಹೋದ. ಪಿಟ್ಟೆಂದು ಮಾತನಾಡದೆ ಕೂತುಕೊಂಡಿದ್ದೆ ಗುಲಾಮನ ಹಾಗೆ. ಕೈಲಿ ಶಕ್ತಿಯೇ ಇರದಿದ್ದರೂ ಎಂಥ ಆವೇಶ ಬಂದಿತ್ತು ನನ್ನೆದೆಯಲ್ಲಿ ! ಲೇಖನಿ ಎತ್ತಿಕೊಂಡು ಬರೆದೆ—ಬರೆದೆ—ಹಾಗೇ ಬರೆದೆ—ಬರೆದೇ ಬರೆದೆ ! ನಾನೇನು ಬರೆಯುತ್ತಿದೇನೆ ಎಂಬುದರ ಅರಿವೂ ಇರಲಿಲ್ಲ. ಪೆನ್ನಿನಲ್ಲಿನ ಇಂಕ್ ತೀರಿದಾಗ ಕೈ ಹಾಗೇ ನಿಂತು ಹೋಯಿತು. ಬರೆದಿದ್ದ ಕಾಗದ ಮೇಜಿನ ಮೇಲೆ ರಾಶಿರಾಶಿಯಾಗಿ ಬಿದ್ದಿತ್ತು. ತೆಗೆದು ನೋಡುತ್ತೇನೆ. ನಿಜಕ್ಕೂ ಆಶ್ಚರ್ಯವಾಯಿತು ನನಗೆ. ನಾಲ್ಕು ಗಂಟೆಗಳ ಅವಧಿಯಲ್ಲಿ ಎಂಟು ಪುಟಗಳಷ್ಟು ಮ್ಯಾಟರ್ ಬರೆದು ಹಾಕಿದ್ದೆ. ಒಂದು ವಾರದ ಕೆಲಸವನ್ನೆಲ್ಲಾ ಒಪ್ಪೊತ್ತಿನಲ್ಲೇ ಮಾಡಿ ಮುಗಿಸಿದ್ದೆ.

'ಮಧ್ಯಾಹ್ನ ಒಂದು ಗಂಟೆಯಾಗುತ್ತ ಬಂದಿತ್ತು. ಎದ್ದು ಹೊರಟು ಬಿಟ್ಟೆ. ಮತ್ತೆ ಮೂರು ಮೈಲಿ ನಡೆದು ಹೋಗಬೇಕು. ತುಂಬ ದಾಹವಾಗುತ್ತಿತ್ತು. ಎದುರಿಗಿದ್ದ ಕಾಫಿ ಹೋಟೆಲು 'ಬಾ' ಅಂತ ಆಹ್ವಾನಿಸುತ್ತಿತ್ತು. ಜೇಬಿನಲ್ಲಿ ಒಂದು ಕುರುಡು ಕಾಸೂ ಇರಲಿಲ್ಲ. ತಲೆ ಬಾಗಿಸಿಕೊಂಡು ಮುಂದೆ ಹೊರಟೆ. ಬೀದಿಯ ಮೇಲಿದ್ದ ನಲ್ಲಿಗೆ ಹೋಗಿ ಹೊಟ್ಟೆ ತುಂಬುವಷ್ಟು ನೀರು ಕುಡಿದೆ. ಏನೋ ಕೊಂಚ ಸಮಾಧಾನವಾದಂತಾಯಿತು.

'ಕಾಲೆಳೆದುಕೊಂಡು ಮುಂದಕ್ಕೆ ಹೊರಟೆ. ಟಾರು ರೋಡಿನ ಮೇಲೆ ನಡೆಯುತ್ತಿದ್ದಂತೆ ಅನಿಸುತ್ತಿರಲೇ ಇಲ್ಲ. ಎಲ್ಲೋ ಗಾಳಿಯಲ್ಲಿ ತೇಲಾಡಿದ

ಹಾಗೆ ಭಾಸವಾಗುತ್ತಿತ್ತು. ದೃಷ್ಟಿಯೆದುರಿಗೆ ಯಾವು ಯಾವುವೋ ದೃಶ್ಯ ಬಂದು ನಿಂತಂತಾಗುತ್ತಿತ್ತು. ಆದಷ್ಟು ಬೇಗ ಮನೆಗೆ ಹೋಗಬೇಕು, ನನ್ನ ಪ್ರೀತಿಯ ಹೆಂಡತಿಯನ್ನು ಬಾಚಿ ತಬ್ಬಿಕೊಂಡು ಅವಳ ಎದೆಯಲ್ಲಿ ತಲೆ ಹುದುಗಿಸಿ ಈ ಕೆಟ್ಟ ಜಗತ್ತಿನ ವೇದನೆಗಳನ್ನೆಲ್ಲ ಮರೆತುಬಿಡಬೇಕು— ಎಂದೆನಿಸುತ್ತಿತ್ತು.

'ವೇಗವಾಗಿ ಹೆಜ್ಜೆ ಹಾಕುತ್ತಾ ಹೊರಟೆ. ಎಷ್ಟುದೂರ ನಡೆದೆನೋ ಗೊತ್ತಾಗಲಿಲ್ಲ. ಮನೆ ಇನ್ನೂ ದೂರವಿತ್ತು. ಚೌಕವೊಂದರ ಹತ್ತಿರ ಬಂದೆ. ಮುಂದೆ ಕಾಲು ಏಳದಂತಾಯಿತು. ಶರೀರದಲ್ಲಿದ್ದ ಶಕ್ತಿಯ ಕೊನೆಯ ಅಂಶವೂ ಮಾಯವಾದಂತಾಯಿತು. ಎದುರಿನಲ್ಲಿ ಬಂದು ಯಾರೋ ನನ್ನನ್ನು ತಡೆದಂತಾಯಿತು. ಗಾಳಿಯಲ್ಲಿ ಯಾರದೋ ಮುಖ ಕಂಡಿತು ಅಸ್ಪಷ್ಟವಾಗಿ. ಯಾವುದೋ ಕರಾಳ ಕೈ ಬಂದಿತು. ನನ್ನ ಕತ್ತು ಹಿಸುಕಿದಂತಾಯಿತು. ಕಣ್ಣಿಗೆ ಕತ್ತಲು ಕವಿದಂತಾಯಿತು. ಬಿದ್ದು ಕೊಂಡು ಬಿಟ್ಟೆ.

'ಬೀದಿಯಲ್ಲಿ ಹೊರಟಿದ್ದ ಜನ ಧಾವಿಸಿ ಬಂದರು. ನನ್ನ ಮೈ ಹಿಡಿದು ನೋಡಿದರು. ಕೈ ಹಿಡಿದು ನೋಡಿದರು. 'ಸತ್ತ! ಸತ್ತ!' ಎಂದು ಕಿರುಚಿಕೊಂಡರು. ಯಾರೋ ಒಬ್ಬ ಡಾಕ್ಟರೂ ಬಂದರು. ನಾಡಿ ಹಿಡಿದು ನೋಡಿ, ಎದೆ ಪರೀಕ್ಷಿಸಿ ನೋಡಿ "ಅಯ್ಯೋ ಪಾಪ! ಸತ್ತ!" ಎಂದರು. ಪೋಲೀಸಿನವರೂ ಓಡಿಬಂದರು. ಮನೆಗೆ ಸಾಗಿಸಿದರು. ಗೊಳೋ ಎಂದು ಅಳುವುದಾಯಿತು. ಆಪ್ತರು ಬಂದರು. ಗೆಳೆಯರು ಬಂದರು. ನನ್ನನ್ನು ಚೆಂಕಿಗೇರಿಸುವ ಶಾಸ್ತ್ರವನ್ನೂ ಮಾಡಿದರು.

'ಇಲ್ಲ ಕಣೋ! ನಾ ಸತ್ತಿಲ್ಲ! ನಿಜಕ್ಕೂ ಸತ್ತಿಲ್ಲ! ಈ ಕುರ್ಚಿ ಇರುವವರೆಗೂ ನಾ ಸಾಯುವಂತಿಲ್ಲ. ಈ ದುಂದುಭಿ ಇರುವವರೆಗೂ ನಾ ಸಾಯುವಂತಿಲ್ಲ. ನೀನಾವನೋ ಕಿತಾಪತಿ ನನ್ನ ಕುರ್ಚಿ ಮೇಲೆ ಕೂತು ಕೊಳ್ಳೋನು!—ನಡೆ ಆಚೆ! ತೊಲಗು! ಈ ಪತ್ರಿಕೆ ನನ್ನದು. ಈ ಆಫೀಸು ನನ್ನದು! ಇದರಲ್ಲಿ ನನ್ನದೂ ಅರ್ಧಭಾಗ ಇದೆ! ಆ ಭಾಗದ

ಹಣ ನನ್ನ ಕೈಗೆ ಬರುವವರೆಗೂ ಪಿಶಾಚಿಯಂತೆ ಕೂತಿರುವವನು ನಾನು ಇಲ್ಲೇ ! ಈ ಕುರ್ಚಿಯ ಮೇಲೇ !

'ಯಾಕೋ ? ಕೇಳಿಸಲಿಲ್ವೇನು ? ಹೊರಡು ಅಂದೆ. ಏಳು ಕುರ್ಚಿ ಬಿಟ್ಟು ! ನಾನು ಸಂಪಾದಕೀಯ ಬರೀಬೇಕು ಸಾಹಿತ್ಯ ಸಮ್ಮೇಳನದ ಬಗ್ಗೆ !

'ಕೂಗಿ ಕೂಗಿ ಕತ್ತು ಒಡೆದುಹೋಗ್ತಾ ಇದೆ. ಇನ್ನೂ ಈತನಿಗೆ ಎಚ್ಚರ ಇಲ್ಲ. ಕಿವುಡೋ ಏನೋ ದೇವ್ರೇ ಬಲ್ಲ ! ಏ ! ! ಏಳೋ ಇಲ್ಲಿಂದ ! ತೊಲಗಾಚೆ ! ಕೂತುಕೊಂಡು ಬಿಟ್ಟಿದಾನೆ ಮನ್ಮಥನ ಹಾಗೆ !'

'...........'

'ಹಲ್ಲೋ'

'...........'

'ಹಲ್ಲೋ ! ಹಲ್ಲೋ ಹಲ್ಲೋ ! '

ಗದಗ ಅಕ್ಟೋಬರ್ ೧೯೪೫

# ಗಿರಿಜಾ ಕಂಡ ಸಿನಿಮಾ

ರಾಗವಾಗಿ ಗಿರಿಜಾ 'ರೀsss' ಎಂದರೆ ಸಾಕು–ಏನೊ ಬಂತು ಪೀಕಲಾಟ ಎಂದು ಗೊತ್ತು ಸಿದ್ಧರಾಮುನಿಗೆ. ಮನಸ್ಸಿಲ್ಲದಿದ್ದರೂ ಅವಳ ಕಡೆ ಕಣ್ಣು ಹೊರಳಿಸುತ್ತಾನೆ.

'ರೀ sss'

'ಏನೇ ?'

'ರೀ ssss'

'ಏನು ಹೇಳೇ !'

'ಏನು ಅಂತ ನನ್ನೇ ಕೇಳ್ತೀರಲ್ಲ ! ಬಹಳ ಘಾಟಿ ಕಣ್ರೀ ನೀವು !' ಎಂದು ಅವಳೊಂದು ಕಣ್ಣಬಾಣ ಬಿಡುತ್ತಾಳೆ.

ಆ ಬಾಣದಿಂದ ಏಟು ತಿಂದು ತಿಂದೂ ಅಭ್ಯಾಸವಾಗಿ ಹೋಗಿದೆ ಅವನಿಗೆ. ಅದರಿಂದ ಪರಿಣಾಮವಾಗುವಂಥ ಮನಃಸ್ಥಿತಿಯೂ ಅವನಿಗಿರುವುದಿಲ್ಲ. ಬೆಳಗಿನಿಂದ ಸಾಯಂಕಾಲದವರೆಗೂ ಡಿಪೋವಿನಲ್ಲಿ ಕತ್ತೆಯಂತೆ ದುಡಿದು ದುಡಿದು ದಣಿದಿರುತ್ತದೆ ದೇಹ. ಜೀವರಹಿತ ಯಾಂತ್ರಿಕ ಕೆಲಸದಿಂದ ಬೇಸರಗೊಂಡಿರುತ್ತದೆ ಮನಸ್ಸು. ಹಾಸುಗೆಯ ಸ್ಪರ್ಶವಾಗುವುದೇ ತಡ—ಕಣ್ಣು ತಾವಾಗಿಯೆ ಮುಚ್ಚಿಕೊಳ್ಳುತ್ತವೆ. ಕಠೋರ ಪ್ರಪಂಚದ ಹೋರಾಟದಲ್ಲಿ ದಣಿದ ಮನಸ್ಸು ರಹಸ್ಯಮಯ ನಿದ್ರಾ ಪ್ರಪಂಚದಲ್ಲಿ ಶಾಂತವಾಗಲಾಶಿಸುತ್ತದೆ. ಇಂಥ ಸಮಯದಲ್ಲಿ ಪ್ರಣಯಾಲಾಪಕ್ಕೆಲ್ಲಿಯ ಉತ್ಸಾಹ ಬಂದೀತು ? ಮದುವೆಯಾದ ಹೊಸದರಲ್ಲಿ ಮುದ್ದು ಮುದ್ದಾಗಿ ತೋರುತ್ತಿದ್ದ ಗಿರಿಜೆಯ ಮಾತು ಈಗ ಮೊದ್ದು ಮೊದ್ದಾಗಿ ಕಾಣುತ್ತಿವೆ. "ಈಕೆ ಮಾತನಾಡದೆ ಸುಮ್ಮನಿದ್ದರೆ ಬದುಕಿಕೊಂಡೀತು ನನ್ನ ಬಡಜೀವ ! ತೆಪ್ಪಗೆ ಬಿದ್ದುಕೊಂಡಿರಬಾರದೇ ಇವಳು !" ಎಂದು ಅನ್ನಿಸುತ್ತದೆ ಅವನಿಗೆ. ಆದರಾಕೆ ಬಿಡಬೇಕಲ್ಲ ! ತನ್ನ ಕಡೆ ಬೆನ್ನು ಮಾಡಿ ಗೋಡೆಯ ಕಡೆ ಮುಖ ಹೊರಳಿಸಿ ನಿದ್ರೆ ಹೋಗಲೆತ್ನಿಸುವ ಪತಿಯ ತಲೆಗೂದಲನ್ನು ಹಿಡಿದು ಎಳೆಯುತ್ತಾಳೆ. ಅವನ ಮೂಗಿನ ಬಳಿ

ತನ್ನ ಮೂಗನ್ನೊಯ್ದು ತುಂಟತನದಿಂದ ಉಜ್ಜುತ್ತ 'ರೀ sss' ಎನ್ನುತ್ತಾಳೆ—ಕೊಂಚ ಗಟ್ಟಿಯಾಗಿಯೆ.

ನಿದ್ರೆಯಿಂದ ಜಡವಾಗುತ್ತಿದ್ದ ಕಣ್ಣುಗಳನ್ನು ಅವಳ ಕಡೆ ತಿರುಗಿಸಿ ಆತ ಕೇಳುತ್ತಾನೆ.

'ಏನೇ ?'

'ಏನು ಅಂತ ನನ್ನೇ ಕೇಳ್ತೀರಲ್ಲ ? ಬಹಳ—ಬಹಳ ಘಾಟಿ ಕಣ್ರೀ ನೀವು !' ಎಂದು ಹೇಳಿ ಆಕೆ ಅವನ ಕೆನ್ನೆಯ ಮೇಲೊಂದು ಮೃದುವಾದ ಏಟು ಹಾಕುತ್ತಾಳೆ.

ಆಗ ಮಾತ್ರ ಆತ ನಿದ್ರೆಯ ಆಸೆ ಬಿಟ್ಟುಬಿಡಲೇಬೇಕಾಗುತ್ತದೆ. ಎಷ್ಟು ಬೇಸರವಾಗಿದ್ದರೇನು—ಎಂಥ ನಿದ್ರೆ ಬರುತ್ತಿದ್ದರೇನು—ತಾರುಣ್ಯದಿಂದ ತುಂಬಿ ಬಳುಕುವ ನಲ್ಲೆ ನಗುನಗುತ್ತ ಪಕ್ಕದಲ್ಲೊರಗಿದ್ದರೆ ಮುಖ ತಿರುಗಿಸಲು ಎಲ್ಲಿ ಸಾಧ್ಯ ?

ಅವನ ಮುಖವನ್ನೆತ್ತಿ ತನ್ನ ಮುಖದ ಮೇಲಿಟ್ಟುಕೊಳ್ಳುತ್ತ ಅವನ ದೃಷ್ಟಿಗೆ ದೃಷ್ಟಿ ಬೆರಸುತ್ತ ಆಕೆ ಕೇಳುತ್ತಾಳೆ.

'ಯಾವಾಗ ಹೋಗೋದು ಸಿನಿಮಾಕ್ಕೆ ?'

'ಸಿನಿಮಾ ?'

'ಹೂಂ. ಅಲ್ಲವೇನು ಮತ್ತೆ ? ಇಲ್ಲಿಗೆ ಬಂದಾಗಿನಿಂದ ಕೇಳುತ್ತಿದೇನೆ ನಾನು. ಹೋಗೋಣ ಹೋಗೋಣ ಅಂತಾಲೇ ಇದೀರಿ. ಕಳೆದ ಭಾನುವಾರ ಖಂಡಿತ ಹೋಗೋಣ ಅಂದಿದ್ದಿರಿ. ಆದರೂ ಚಕ್ಕರ್ ಹಾಕಿದಿರಿ. ಈ ಭಾನುವಾರಾನಾದ್ರೂ ತೋರಿಸಲೇಬೇಕು. ಯಾವಾಗಲೂ ಹೀಗೇ ನೀವು ! ಮಾತುಕೊಡೋದು ! ಮರತುಬಿಡೋದು !' ಎಂದು ಹೇಳಿ ಆಕೆ ಕೆನ್ನೆ ಉಬ್ಬಿಸಿಬಿಟ್ಟು ಕಣ್ಣು ಕುಣಿಸುತ್ತಾಳೆ.

ಆ ಉಬ್ಬಿದ ಕೆನ್ನೆಗಳನ್ನು ಒತ್ತಿ ಸರಿಪಡಿಸುತ್ತ ಆತ ಹೇಳುತ್ತಾನೆ.

'ಇಲ್ಲ ಕಣೇ ಮರೆತಿಲ್ಲ ! ಖಂಡಿತ ಹೋಗೋಣ !'

ಅವನ ಮುಖವನ್ನು ತಲೆದಿಂಬಿನ ಮೇಲೊರಗಿಸಿ ಬಿಟ್ಟು ಆಕೆ ಹುಸಿ ಮುನಿಸಿನಿಂದ—

'ಗೊತ್ತು ನೀವು ಕರಕೊಂಡು ಹೋಗೋದು! ಬಲೆ! ಬಲೆ!' ಎಂದು ಹೇಳಿ ಕೈ ತಿರುವುತ್ತಾಳೆ.

ಅವಳು ಕೈ ತಿರುಗಿಸುವುದೂ ಒಂದು ತಮಾಷೆಯೇ. ಆಗಿನ ಅವಳ ಆ ಸಹಜಾಭಿನಯವೊ! ಆ ಕೊಂಕು ನೋಟವೊ! ಆ ಡೊಂಕುಹುಬ್ಬೊ! ಆ ತುಟಿಯ ಕುಣಿತವೊ! ಎದೆಯ ಮಣಿತವೊ! ಕೊರಳಿನ ನಾಜೂಕು ಹೊರಳುವಿಕೆಯೊ! ಮದುವೆಯಾದ ಎರಡು ವರ್ಷಗಳಿಂದ ಆ ಸೊಗಸು ನೋಡಿ ನೋಡಿ ರೂಢಿಯಾಗಿದ್ದರೂ ಆ ಕ್ಷಣ—ಆ ಒಂದೇ ಒಂದು ಕ್ಷಣ ಸಿದ್ಧರಾಮನಿಗೆ ಸ್ವಾರಸ್ಯವೆನ್ನಿಸದಿರುವುದಿಲ್ಲ. ಅವಳು ಕೈ ತಿರುಗಿಸುವುದೇ ಒಂದು ಶೋಭೆ! ಅವಳು 'ಬರೆ! ಬರೆ!' ಎನ್ನುವುದೀ ಒಂದು ಶೋಭೆ. ಆ ರಸ ನಿಮಿಷದಲ್ಲಿ ಆತ ಅವಳಿಗೆ ಸಂಪೂರ್ಣವಾಗಿಸೋತು ಹೋಗುತ್ತಾನೆ. ಅವಳ ಬಗ್ಗೆ ಅವನ ಎದೆಯಲ್ಲಿರುವ ಪ್ರೀತಿಯೆಲ್ಲಾ ಉಕ್ಕಿಬರುತ್ತದೆ. ಮೋಹವೆಲ್ಲಾ ಚಿಮ್ಮಿ ಬರುತ್ತದೆ. ಪ್ರೀತಿ-ಮೋಹಗಳ ಆ ವಿಲಕ್ಷಣ ಸಂಗಮದಿಂದ ಉತ್ಪನ್ನವಾದ ವಿದ್ಯುಲ್ಲತೆಯಿಂದ ಉನ್ಮತ್ತವಾದ ಅವನ ತೋಳು ಅವಳ ಶರೀರವನ್ನು ರಭಸದಿಂದ ಸೆಳೆದುಕೊಳ್ಳುತ್ತವೆ. ಅವಳ ತುಟಿಗಳಿಗೆ ತುಟಿಯಿಟ್ಟು ಆತ ಹೇಳುತ್ತಾನೆ.

'ಭಾನುವಾರದವರೆಗೂ ಕಾಯೋದೇಕೇ ಹುಚ್ಚೀ? ಈಗಲೇ—ಈ ಗಳಿಗೆಯಲ್ಲೇ—ಈ ಕೊಟಡಿಯಲ್ಲೇ ನಡೆದಿದೆಯಲ್ಲ ಸಿನಿಮಾ! ನಮ್ಮ ಸಿನಿಮಾ!'

ಮಾತನಾಡುವುದಿಲ್ಲ ಆಕೆ. ಮಾತನಾಡಲು ತುಟಿ ತೆರೆದಿದ್ದರೆ ತಾನೆ!

ಆದರೆ ಒಂದೊಂದು ಬಾರಿ ಮಾತ್ರ ಅವಳ ಮಾತು ನಿಲ್ಲುವುದಿಲ್ಲ. ಅವನ ತುಟಿಗಳಿಗೆ ತನ್ನ ತುಟಿಗಳನ್ನೂ ಆಕೆ ಕೊಡುವುದಿಲ್ಲ. ಒಂದು ಭಾನುವಾರವೆ? ಎರಡೆ? ಎಷ್ಟೋ ಭಾನುವಾರಗಳು ಕಳೆದುಹೋದರೂ ಆತ ಸಿನಿಮಾಕ್ಕೆ ಕರೆದೊಯ್ಯದಿದ್ದಾಗ ಅವಳಿಗೆ ಕೋಪ ಬರುವುದೂ ಸ್ವಾಭಾವಿಕವೇ ಸರಿ. ಇನ್ನೂ ಹದಿನೇಳರ ಜವ್ವನೆ. ಹೊಸ ಹರಯದ ಹೊಸ ಉತ್ಸಾಹದ ಜೀವ. ಆರು ದಿನಗಳ ಕಾಲ ಹಗಲುಹೊತ್ತು ಗಂಡನ ಮುಖವನ್ನೆ ನೋಡುವಂತಿಲ್ಲ. ಇಬ್ಬರೂ ಕೊಂಚ ಹೊತ್ತೂ ಕೂಡಿ ತಿರುಗಾಡಿ ಸೊಗಸಾಗಿ ಕಾಲಕಳೆಯುವಂತಿಲ್ಲ. ಭಾನುವಾರ ರಜದ ದಿನ.

ಅಂದಾದರೂ ತನ್ನ ಕಡೆ ಗಮನವೀಯಬಾರದೇ ಅವರು ? ಬೆಳಗಿನ ರೈಲಿನಲ್ಲಿ ಬೆಂಗಳೂರಿಗೆ ಹೋಗಿಬಿಟ್ಟು ಒಂದು ಮ್ಯಾಟ್ನಿ ಆಟ ನೋಡಿಕೊಂಡು ಎಂಟು ಗಂಟೆಯ ರೈಲಿಗೆ ಮರಳಿ ಬರಬಹುದು. ಅಕ್ಕಪಕ್ಕದ ಮನೆಗಳವರೆಲ್ಲಾ ಹೋಗಿ ಬರುವುದಿಲ್ಲವೆ ? ಇವರಿಗೇನು ಬಂದಿರೋದು ಧಾಡಿ ? ಈ ವಯಸ್ಸಿನಲ್ಲೂ ಸನ್ಯಾಸಿಯಂಥ ಜೀವನವೇಕೋ ಇವರಿಗೆ ? ತಮ್ಮ ಮನೆಯವಳ ಸುಖದುಃಖ ನೋಡಿಕೊಳ್ಳಲಾರದವರು ಪರರ ಸುಖದುಃಖ ಏನು ತಿಳಿದುಕೊಳ್ಳುತ್ತಾರೊ ! ಇವರ ಸೋಶಲಿಸಮ್ಮೊ ! ಕಮ್ಯುನಿಸಮ್ಮೊ ! ಎಂಥ ದಮ್ಮೋ ಅದು—ಯಾವಾಗಲೂ ಅದರದೇ ಧ್ಯಾನ ! ಕೈ ಹಿಡಿದವಳನ್ನ ಬಳಲಿಸೋ ಈ ಇಸಮ್ಮು !—ಎಂದುಕೊಂಡು ಉದ್ವೇಗದಿಂದ ಬಳಲುತ್ತಾಳೆ. ಅಂಥ ಉದ್ವೇಗವಿದ್ದಾಗ ತುಟಿಗೆ ತುಟಿ ಬೆರೆತೀತೇ ?

ಅವಳನ್ನು ತನ್ನ ಬಾಹುಪಾಶದಲ್ಲಿ ಬಿಗಿದು ಸಿದ್ಧರಾಮು 'ಬಾ ! ಬಾ ನನ್ನ ಹುಡುಗೀ, ಬಾ ! ಒಂದೇ ಒಂದು ಕೊಡು ! ಹೆಚ್ಚು ಬೇಡ ! ಒಂದೇ ಒಂದು !' ಎಂದು ಒತ್ತಾಯದಿಂದ ಅವಳನ್ನು ಮುತ್ತಿಡಲು ಪ್ರಯತ್ನಿಸುತ್ತಾನೆ.

ಹೌದು. ಆಗ ಅವಳಿಗೆ ಕೋಪ ಬರುತ್ತದೆ. 'ಮುತ್ತು ಮಾತ್ರ ಬೇಕು ಇವರಿಗೆ ! ನನಗೆ ಸಿನಿಮಾ ತೋರಿಸೋದು ಬೇಡ. ಎಂಥಾ ಸ್ವಾರ್ಥಿ ಜಾತಿ ಇದು ಈ ಗಂಡಸರದು ! ಇವರಿಗ್ಯಾಕೆ ಮುತ್ತುಕೊಡಬೇಕು ನಾನು ?' ಎಂದುಕೊಂಡು ಕೈಯಿಂದ ತನ್ನ ತುಟಿಗಳನ್ನು ಮುಚ್ಚಿಕೊಳ್ಳುತ್ತಾಳೆ. ಆತ ತಡೆಯಲಾರ. ಅವಳ ಕೈಯನ್ನು ಎತ್ತಿ ಆಚೆಗೆ ಸರಿಸಿ ತುಟಿಗೆ ತುಟಿ ಸೇರಿಸುತ್ತಾನೆ. ಮರುಕ್ಷಣವೆ ತನ್ನ ತುಟಿಗಳನ್ನು ತೆಗೆದುಬಿಟ್ಟು 'ಅಯ್ಯೋ ಗಂಡುಬೀರೀ ! ಕಚ್ಚಿಬಿಟ್ಟೆಯಲ್ಲೇ ಬಜಾರೀ !' ಎನ್ನುತ್ತಾನೆ.

'ಇನ್ನೇನು ಮಾಡೋದು ಕರಡೀ ಹಾಗೆ ನೀವು ಮೈಮೇಲೆ ಬಿದ್ದರೆ ?'

'ನಾನು ಕರಡಿಯಾದರೆ ನೀನೇನು ಕೋತೀಮರಿಯೇನು ಹೀಗೆ ಕಚ್ಚಿಬಿಡೋಕೆ ?

'ಹೌದುಕಣ್ರೀ! ನಾನು ಕೋತಿ! ನಿಮ್ಮ ಮುಖ ಮಾತ್ರ ಬಹಳ ಚಂದಾಗಿದೆ—ನರಿಯಹಾಗೆ!'

'ಇಲ್ಲ ಕಣೇ! ಅಷ್ಟು ಚೆನ್ನಾಗಿಲ್ಲ ನನ್ನ ಮುಖ! ನಿನ್ನ ಮೂಗು ಮಾತ್ರ ಬಹಳ ಚೆಂದಾಗಿದೆ ಬೆಕ್ಕಿನ ಹಾಗೆ!' ಎಂದುಬಿಟ್ಟು ಆತ ಅವಳ ನಸುಚಪ್ಪಟೆ ಮೂಗನ್ನು ಕುರಿತು ಹಾಸ್ಯಮಾಡುತ್ತಾನೆ.

'ನನ್ನ ಮೂಗಿಗೇನೂ ನೀವು ನಗಬೇಕಾಗಿಲ್ಲ. ನಿಮ್ಮದೇನು ಮಹಾ ಸೌತೇಕಾಯಿಯಂಥಾದ್ದು!' ಎಂದು ಹೇಳಿ ಆಕೆ ಮುಯ್ಯಕ್ಕೆ ಮುಯ್ಯ ತೀರಿಸಿಬಿಡುತ್ತಾಳೆ.

'ಇಂಥಾ ಮೂಗಿನವನ ನೀ ಯಾಕೇ ಮಾಡಿಕೊಂಡೆ?'

'ಇಂಥಾ ಮೂಗಿನವಳನ್ನ ನೀವು ಯಾಕ್ರೀ ಕಟ್ಟಿಕೊಂಡಿರಿ?'

'ನನ್ನೇ ಆಗಬೇಕು ಅಂತ ಅತ್ತುಕೊಂಡು ಕಣ್ಣೀರಿಟ್ಟೆಯಲ್ಲ ನೀನು! ಮನಸ್ಸು ಕರಗಿ ಆಗಿಬಿಟ್ಟೆ!'

'ಹೌದು ಪಾಪ! ನಮ್ಮಪ್ಪ ನಿಮಗೆ ನನ್ನ ಕೊಡೋಲ್ಲಾಂತ ಅಂದಾಗ ಊಟ ನೀರು ಬಿಟ್ಟು ಮೂರು ನಾಲ್ಕು ದಿನ ಬೆಂಗಳೂರೆಲ್ಲ ಹುಚ್ಚರಂತೆ ಅಲೆದೋರು ಯಾರೊ!'

'ಹೂಂ! ನಾನೊಬ್ಬ ಹುಚ್ಚ! ನಿನ್ನಂಥ ಹುಚ್ಚಿಯನ್ನ ಕಟ್ಟಿಕೊಂಡಿರೋನು!'

'ನೀವು ಹುಚ್ಚರಾದ್ರೆ ಹುಚ್ಚರಾಸ್ಪತ್ರೆಗೆ ಹೋಗಿಬನ್ನಿ. ನನಗೇನೂ ಹುಚ್ಚು ಹಿಡಿದಿಲ್ಲ!'

'ಹಿಡಿದಿದೆಯಲ್ಲ ಒಂದು ಭಾರೀ ಹುಚ್ಚು—ಸಿನಿಮಾಹುಚ್ಚು!'

'ಬಲೆ! ಬಲೆ! ಬಹಾಳ ತೋರಿಸೋವ್ರು ನೀವು! ನೋಡೀ ನೋಡೀ ನೋಡೀ ಹುಚ್ಚು ಹಿಡಿದಿದೆ ನನಗೆ! ಅಲ್ವೆ?'

'ತೋರಿಸೋಕೆ ಪುರಸತ್ತು ಎಲ್ಲಿರುತ್ತೇ ಗಿರಿಜಾ?'

'ಅವರಿವರ ಮನೆ ತಿರುಗೋಕೆ ಪುರಸತ್ತಿರುತ್ತೆ. ಸಿನಿಮಾಗೆ ಮಾತ್ರ ಇರೋಲ್ಲ!'

'ಅವರಿವರ ಮನೆ ಅಂದ್ರೇನೇ ? ಪಾಪ. ಏನೂ ತಿಳಿಯದ ಬಡ ಕೂಲಿಕಾರರು ಅವರು. ಅವರ ಸುಖದುಃಖ ತಿಳಿದುಕೊಂಡು ಸಂಘಟನೆ ಮಾಡಬೇಡವೇ ?'

'ಏನು ಸುಖವೊ ! ಏನು ದುಃಖವೊ ! ಮೊದಲು ಯುದ್ಧ ಯುದ್ಧ ಅಂತಿದ್ದಿರಿ ಈಗ ಯುದ್ಧ ಮುಗಿದು ವರ್ಷವಾಗ್ತಾ ಬಂತು. ಇನ್ನೂ ಮೊದಲಿನ ಹಾಡೇ ಹಾಡ್ತೀರಲ್ಲ !'

'ಯುದ್ಧ ಮುಗೀತು ಅಂತ ಯಾರು ಹೇಳಿದರು ಗಿರಿಜಾ ?'

'ನೀವೇ ಹೇಳಿದಿರಿಲ್ಲ ಒಮ್ಮೆ ! ಅವತ್ತು ಎರಡು ದಿನ ರಜಾ ಬಂದಿರಲಿಲ್ಲೇನು ವಿಜಯೋತ್ಸವಕ್ಕೇಂತ ?'

'ವಿಜಯೋತ್ಸವ ಅಲ್ಲ ಅದು ಗಿರಿಜಾ ! ಮತ್ತೊಂದು ಯುದ್ಧದ ಪ್ರಾರಂಭೋತ್ಸವ. ಮುಗಿದ ಯುದ್ಧಕ್ಕಿಂತ ಭಾರಿ ಯುದ್ಧ ಇದು. ಬಡವರ ಯುದ್ಧ ! ಕೂಲಿಕಾರರ ಯುದ್ಧ ! ರೈತರ ಯುದ್ಧ ! ಈ ಯುದ್ಧ ನಡೆದಿರೋದು ಹೊಟ್ಟೆಗಾಗಿ ! ಅನ್ನಕ್ಕಾಗಿ ! ಬಂದು ಮುಷ್ಟಿ ಮುಷ್ಟೆಗಾಗಿ ! ಒಂದು ತಟ್ಟೆ ಎಸರಿಗಾಗಿ ! ಸಾವಿರಾರು ಜನ ಬಡಪಾಯಿಗಳು ಇಲ್ಲಿ—ಈ ಕಾಡು ಗೋಡೆಯಲ್ಲಿ ಹೊಟ್ಟೆಯ ಹೋರಾಟ ನಡೆಸಿದಾರಲ್ಲ ಗಿರಿಜಾ ! ಅವರ ಗೋಳಿನ ಕೂಗು ನನ್ನನ್ನು ಹುಚ್ಚನನ್ನಾಗಿ ಮಾಡಿದೆ ! ಅಂತೇ ಭಾನುವಾರ ಬರುತ್ತಲೂ ಅವರ ಮನೆಗಳಿಗೆ ಹೋಗುತ್ತೇನೆ. ಅವರ ಹೋರಾಟದ ಕತೆ ಕೇಳುತ್ತೇನೆ. ನನ್ನ ಕೈಲಾದ ಸೇವೆ ಮಾಡುತ್ತೇನೆ........'

'ಸಾಕು ಸಾಕು ನಿಮ್ಮ ಪುರಾಣ ! ನಾನು ಸಿನಿಮಾ ಅನ್ನುತ್ತಲೂ ಸುರುವಾಗುತ್ತೆ ನಿಮ್ಮ ಲೆಕ್ಚರು !'

'ಲೆಕ್ಚರಲ್ಲ ಗಿರಿಜಾ ಇದು ! ಹೃದಯದಿಂದ ನೇರವಾಗಿ ಹೊರಡುವ ಉದ್ಗಾರ ಇದು ! ನನ್ನ ಹೃದಯ-ನನ್ನ ಮಾತು ನಿನಗೆ ಹೇಗೆ ಅರ್ಥವಾದೀತು ? ನೀನು ಇನ್ನೂ ಕೊಂಚ ಓದಿದ್ದರೆ ? ಓದಿದ್ದರೆ....?'

'ನೀವು ಓದಿ ಅಮಲ್ದಾರಿ ಮಾಡ್ತಾ ಇರೋದನ್ನ ನೋಡಲಿಲ್ಲವೇ ನಾನು ? ಎಸೆಸೆಲ್ಸಿ ಆದರೂ ಈ ಕೂಲಿ ಕೆಲಸಕ್ಕೆ ಬಂದು ಸೇರಿದಿರಲ್ಲ!'

'ಅಮಲ್ದಾರ್ ಆಗೋದಕ್ಕಿಂತ ಕೂಲಿ ಆಗೋದು ಸಾವಿರ ಪಾಲಿಗೆ ವಾಸಿ ಗಿರಿಜಾ! ನಿನಗದು ತಿಳಿಯೋಲ್ಲ!'

'ಹೌದು ಕಣ್ರೀ! ನನಗೆ ತಿಳಿಯೋಲ್ಲ! ನನಗೆ ತಲೇನೇ ಇಲ್ಲ. ಒಳಗಡೆ ಇರೋದು ಬರೀ ಆಲೂಗಡ್ಡೆ. ಹೀಗೇ ಅಲ್ವೆ ನೀವು ಹೇಳೋದು?'

'ಏನಂದಿ? ಆಲೂಗಡ್ಡೇನೇ? ಬಹಳ ಒಳ್ಳೇದಾಯ್ತು. ಇಷ್ಟು ದಿನ ಯಾಕೇ ಹೇಳಲಿಲ್ಲ ನನಗೆ? ಸರಿ. ತೆಗೆದುಬಿಟ್ಟು ಬೆಳಗ್ಗೆ ಪಲ್ಯ ಮಾಡಿಬಿಡು. ಆಲೂಗಡ್ಡೆ ಪಲ್ಯ ತುಂಬ ರುಚಿ. ನಿನ್ನ ತಲೇಲಿ ಬೆಳದಿರೋದು ಅಂದ ಮೇಲೆ ಇನ್ನೂ ರುಚಿಕಟ್ಟಾಗಿದ್ದೀತು!'

'ಶುರುಮಾಡಿದ್ರು ತಮಾಷೇಗೆ! ಬಹಾಳ ಜಾಣರು ಕಣ್ರೀ ಮಾತು ಹೊರಳಿಸೋದ್ರಲ್ಲಿ!' ಎನ್ನುತ್ತಾ ಆಕೆ ಅವನ ಕೆನ್ನೆ ಚಿವುಟುತ್ತಾಳೆ. ತನ ಗರಿಯದಂತೆಯೆ ಅವಳ ತುಟಿಗಳಲ್ಲಿ ನಗೆಹೂ ಅರಳುತ್ತದೆ. ಕಂಗಳಲ್ಲಿ ಪ್ರಣಯಭಾವ ಚಿಮ್ಮುತ್ತದೆ. ಕೆನ್ನೆಗೆ ರಕ್ತವೇರುತ್ತದೆ. ಆಗ ಆಕೆಯೆ ಸೋತುಹೋಗುತ್ತಾಳೆ. ಆ ಕ್ಷಣಕ್ಕಂತೂ ಅವರ ಯುದ್ಧ ಮುಗಿದು ಒಪ್ಪಂದವಾಗುತ್ತದೆ. ನಲ್ಲನಲ್ಲೆಯರ ಧೃಡಾಲಿಂಗನದಲ್ಲಿ ಶಾಂತಿ ಮೊಗದೋರುತ್ತದೆ.

[೨]

ಆ ಶನಿವಾರ ಸಾಯಂಕಾಲ ಸಿದ್ಧರಾಮು ಮನೆಗೆ ಬಂದಾಗ ಗಿರಿಜಾ ಹೆಳಲು ಹಾಕಿ ಹೂ ಮುಡಿದುಕೊಂಡು ನಗುನಗುತ್ತ ನಿಂತಿದ್ದಳು ಅವನ ಬರವನ್ನೆ ಎದುರುನೋಡುತ್ತ.

ಬಟ್ಟೆ ತೆಗೆದುಹಾಕಿ, ಮುಖ ತೊಳೆದುಕೊಂಡು ಆತ ಹಾಸುಗೆ ಗೊರಗಿ ಕುಳಿತುಕೊಂಡ. ಯಾವುದೋ ಒಂದು ಪತ್ರಿಕೆಯನ್ನೆತ್ತಿಕೊಂಡು ಓದಲಾರಂಭಿಸಿದ.

ಎಂದೂ ಇಲ್ಲದೆ ಗಿರಿಜಾ ಅಂದು ಕಾಫಿಮಾಡಿಂಸಿದ್ದಳೇನೊ! ಒಂದು ಲೋಟದಲ್ಲಿ ಅದನ್ನು ತುಂಬಿಕೊಂಡು ಅವನ ಬಳಿ ಬಂದಳು.

'ರೀ ಽಽಽ.'

ಪತ್ರಿಕೆಯ ಮೇಲಿನ ದೃಷ್ಟಿಯನ್ನು ಕದಲಿಸದೆ ಆತ 'ಏನೇ?' ಎಂದ.

ಒಡನೆಯೆ ಆ ಪತ್ರಿಕೆಯನ್ನು ಕಿತ್ತುಕೊಂಡು ಮೂಲೆಯಲ್ಲಿಟ್ಟು ಗಿರಿಜಾ 'ಬರಿ ಓದೋದು ನೀವು ಬಿಡಿ! ಈ ಕಾಫೀನಾದ್ರೂ ಕುಡೀರಿ!' ಎಂದಳು.

'ಕಾಫಿ? ಅದೇನೇ ಇಂದು ಇಷ್ಟು ಸಡಗರ?'

'ಸಡಗರಾನೂ ಇಲ್ಲ. ಗಿಡಗರಾನೂ ಇಲ್ಲ. ಆಚೇಮನೇ ದೇವಮ್ಮನ ಗಂಡ ಮೈಸೂರಿಗೆ ಹೋಗಿದ್ದರಂತೆ. ಒಳ್ಳೆ ಕಾಫಿಪುಡಿ ತಂದಿದ್ದರಂತೆ. ಸ್ವಲ್ಪ ಕೊಟ್ಟಳು. ವಾಸನೆ ಚೆನ್ನಾಗಿದೆ. ಇಂದೇ ಕುಡೀಲಿ ಅಂತ ಮಾಡಿದೆ.'

'ದೇವಮ್ಮ?'

'ಆ ಸೂಪರ್‌ವೈಜರ್ ಇಲ್ವೆ? ಅವರ ಹೆಂಡತಿ.'

'ಸೂಪರ್‌ವೈಜರ್?'

'ನಿಮಗೆ ಕೂಲಿಕಾರರೆಲ್ಲಾ ಗೊತ್ತು. ಸೂಪರ್‌ವೈಜರ್ ಮಾತ್ರ ಗೊತ್ತಿಲ್ಲ!'

'ಹೇಗೆ ಗೊತ್ತಾಗಬೇಕು ಹೇಳು ಗಿರಿಜಾ! ಅವರು ಹೆಚ್ಚು ಸಂಬಳ ಪಡೆಯೋರು. ಡಿಪೋನಲ್ಲಿ ಅವರು ಹೇಳಿದ ಹಾಗೆ ಕೆಲಸ ಮಾಡಬೇಕಾಗುತ್ತೆ ನಾವು. ಅವರ ಜತೆ ಸ್ನೇಹ ಮಾಡೋಕಾಗುತ್ತೇನೇ ನಮಗೆ?'

"ಎಲ್ಲಾ ಆಗುತ್ತೆ. ನಿಮಗೆ ಮೊದಲು ಮನಸ್ಸಿರಬೇಕಲ್ಲ! ಅವರು—ಗಂಡ ಹೆಂಡರು ಎಷ್ಟು ನೆಮ್ಮದಿಯಿಂದಿದ್ದಾರೆ! ವಾರವಾರಾ ಬೆಂಗಳೂರಿಗೆ ಹೋಗೋದು ತಪ್ಪೋದಿಲ್ಲ. ಸಿನಿಮಾ ತಪ್ಪೋದಿಲ್ಲ. ಅಂದ ಹಾಗೆ ಮನ್ನೆ ದೇವಮ್ಮ ಹೊಸ ಸೀರೆ ಒಂದನ್ನ ಕೊಂಡು ತಂದಿದ್ದಾಳೆ. ನೂರಿಪ್ಪತ್ತು ರೂಪಾಯಂತೆ. ಬಹಳ ಚೆಂದಾಗಿದೆ ಕಣ್ರೀ! ನಯವಾದ ರೇಷ್ಮೆ ಕಲಾಬತ್ತಿಂದು!"

ಪತ್ನಿಯ ವಿಚಾರಧಾರೆ ಯಾವ ಕಡೆ ಹೊರಳುತ್ತಿದೆಯೆಂಬುದರ ಅರಿವಾಯಿತೇನೋ ಅವನಿಗೆ! ನೊಂದದನಿಯಲ್ಲಿ ನುಡಿದ.

"ಅವರ ಸೀರೆಯ ವಿಚಾರ ನನಗೆ ಹೇಳಬೇಡ ಗಿರಿಜಾ ! ನನ್ನ ತಲೆ ಕೆಟ್ಟುಹೋಗುತ್ತೆ !"

ಆ ನೊಂದ ದನಿ, ಅದರಲ್ಲಿ ಅವಿತಿದ್ದ ಆ ಆಳವಾದ ವೇದನೆ ಅವಳಿಗೆ ಅರ್ಥವಾಗಲಿಲ್ಲ— ಹೇಳಿದಳು.

"ಅಂಥಾದ್ದನ್ನ ನನಗೆ ತಂದುಕೊಡೋ ಯೋಗ್ಯತೆ ಅಂತೂ ನಿಮ ಗಿಲ್ಲ ! ಇನ್ನು ಅವರು ಉಡುತ್ತಾರೆ ಅಂತ ಹೊಟ್ಟೆ ಉರಿಯೇಕೋ ?"

"ಹೊಟ್ಟೆಉರಿ ಅಲ್ಲ ಅದು ಗಿರಿಜಾ ! ನಿನಗರ್ಥವಾಗುವುದಿಲ್ಲ. ನಾವು ಬಡವರು. ಅವರು ಶ್ರೀಮಂತರು. ನನಗೆ ಬರೋದು ನಲವತ್ತು ರೂಪಾಯಿ. ಅವರಿಗೆ ಬರೋದು ಎರಡು ನೂರು ರೂಪಾಯಿ. ಒಂದೇಕೆ— ಹತ್ತು ಸೀರೆಗಳನ್ನು ಕೊಂಡಾರು ಅವರು. ನನಗೆ ಬರೋ ನಲವತ್ತು ರೂಪಾಯಿನಲ್ಲಿ ಹೊಟ್ಟೆ ತುಂಬಿಸಿಕೊಳ್ಳೋದೇ ಕಷ್ಟ. ನಿನಗೂ ಗೊತ್ತೇ ಇದೆಯಲ್ಲ ! ಇನ್ನು ಅಂಥ ಸೀರೆಯ ವಿಚಾರ ಮಾತನಾಡೋದು ತಪ್ಪಲ್ವೆ ? ಅಂಥ ರೇಷ್ಮೆ ಸೀರೆಯನ್ನ ಕಣ್ಣಿಂದ ನೋಡೋದಕ್ಕೂ ಅಧಿಕಾರವಿಲ್ಲ ನಮಗೆ. ಹತ್ತು ರೂಪಾಯಿನ ಸೀರೆಗಳಲ್ಲೇ ನಾವು ತೃಪ್ತಿಪಟ್ಟು ಕೋಬೇಕು........'

'ಏನು ತೃಪ್ತಿಯೊ ! ಏನು ಕತೆಯೊ ! ಮದುವೆಯಲ್ಲಿ ತಂದ ದ್ದೆಷ್ಟೊ ಅಷ್ಟೆ. ಅಂದಿನಿಂದ ಹತ್ತು ರೂಪಾಯಿನ ಸೀರೇನಾದ್ರೂ— ಒಂದಾದ್ರೂ ತಂದಿದೀರಾ ?' ಎಂದಳಾಕೆ.

'ಎಲ್ಲಿಂದ ತರಲಿ ? ದುಡ್ಡು ಉಳಿದರೆ ತಾನೇ ತರೋದು ? ಅಕ್ಕಿ, ಬೇಳೆ, ಕಾಳು, ಸೌದೆ ಎಲ್ಲಾ ಒಂದಕ್ಕೆರಡು ಬೆಲೆ. ಹೊಟ್ಟೆ ತುಂಬೋದೇ ಕಷ್ಟ. ನನಗಾದರೂ ಬಟ್ಟೆಗಳಿವೆಯೇನೇ ? ಇರೋದು ಎರಡು ಷರ್ಟ್. ಅವೂ ಹರಿದು ಚಿಂದಿಯಾಗಿದೆ. ಇಲ್ಲಿ ನೋಡಿಲ್ಲಿ....' ಎಂದು ವಿಷಾದ ದಿಂದ ಹೇಳುತ್ತ ಸಿದ್ಧರಾಮ ಎದೆಯ ಮೇಲೆ ಹರಿದಿದ ಭಾಗವನ್ನು ತೋರಿಸಿದ.

'ನೀವೇನು ಮಾಡೀರಿ ? ನನ್ನ ಅದೃಷ್ಟ. ಒಂದು ಒಳ್ಳೇ ಸೀರೆ ಉಡೋ ಭಾಗ್ಯವೂ ನನಗಿಲ್ಲ. ಒಂದು ಸಿನಿಮಾ ನೋಡೋ ಭಾಗ್ಯವೂ ಇಲ್ಲ. ಪಕ್ಕದ ಮನೆಯವರೆಲ್ಲ ವಾರಕ್ಕೊಂದು ಬಾರಿ ನೋಡಿಕೊಂಡು

ಬರ್‍ತಾರೆ. ನನಗೆ ವರ್ಷಕ್ಕೊಂದು ಬಾರಿಯಾದರೂ....' ಎಂದು ಹೇಳು ತ್ತಿದ್ದ ಹಾಗೇ ಅವಳಿಗೆ ಅಳುವುಕ್ಕಿಬಂತು. ಸೆರಗಿನಲ್ಲಿ ಮುಖ ಮುಚಿ ಕೊಂಡು ಅಡಿಗೆಮನೆಗೆ ಹೊರಟುಬಿಟ್ಟಳು.

ವೇದನಾಪೂರ್ಣ ದೃಷ್ಟಿಯನ್ನು ಸಿದ್ಧರಾಮ ಕಾಫಿಯ ಕಡೆಗೆ ತಿರುಗಿ ಸಿದ. ಅದು ಆರಿಹೋಗಿತ್ತು. ಲೋಟ ಎತ್ತಿ ಕಿಟಕಿಯಲ್ಲಿ ಬಾಗಿಸಿದ.

ಚರಂಡಿಯ ಕೊಳಚೆಯೊಂದಿಗೆ ಹರಿದುಹೋಯಿತು ಕಾಫಿ.

[೩]

ತಿಗಣೆಯೊಂದು ಬಲವಾಗಿ ಕಚ್ಚಿ ಸಿದ್ಧರಾಮನನ್ನು ಎಚ್ಚರಗೊಳಿ ಸಿತು. ಕಣ್ದೆರೆದು ನೋಡಿದ. ಭಾನುವಾರದ ಬೆಳಗು ಅವನನ್ನು ಸ್ವಾಗ ತಿಸುತ್ತಿತ್ತು.

ಪಕ್ಕದಲ್ಲಿ ಗಿರಿಜಾ ಇನ್ನೂ ಗಾಢನಿದ್ರೆಯಲ್ಲಿ ತಲ್ಲೀನಳಾಗಿದ್ದಳು. ಎಂಥ ವಿಲಕ್ಷಣ ನಿದ್ರೆ ಅದು ಬೆಳಗಿನ ಜಾವದ್ದು! ಬಲಗಡೆ ಮಗ್ಗುಲಾಗಿ ಮಲಗಿದ್ದಳಾಕೆ. ತುಟಿಗಳೆರಡೂ ತೆರೆದಿದ್ದುವು. ಅವುಗಳೊಳಗಿನ ನಸು ಹಳದಿಬಣ್ಣದ ದಂತಪಂಕ್ತಿ ಅಸ್ಫುಟವಾಗಿ ಕಾಣಿಸುತ್ತಿತ್ತು. ತುಟಿಗಳ ಮೂಲೆಯಿಂದ ಮುಖರಸ ಸೋರುತ್ತಿತ್ತು. ಬಲಗೈ ಗೋಡೆಯ ಮೇಲೊ ರಗಿಕೊಂಡಿತ್ತು. ಉದ್ದವಾದ ಜಡೆ ತಲೆದಿಂಬಿನಿಂದಿಳಿದು ಈಚೆ ಬಂದು ಬಿದ್ದಿತ್ತು. ಅದರ ಕೊನೆಗೆ ಕಟ್ಟಿದ್ದ ಬಣ್ಣಬಣ್ಣದ ಆ ಟೇಪು!—ಅವನಿಗೆ ನಗೆ ಬಾರದಿರಲಿಲ್ಲ. ಎಂಥ ಮಾಟಗಾತಿ ಈ ನಿದ್ರೆ!—ಎಂದುಕೊಂಡು ಮೆಲ್ಲನೆ ಬಾಗಿ ಅವಳ ಸೀರೆಯ ಸೆರಗಿನಿಂದ ಮುಖರಸವನ್ನೊರೆಸಿದ. ಹಣೆಯ ಮೇಲೆ ಬಂದಿದ್ದ ಮುಂಗುರುಳುಗಳನ್ನೆತ್ತಿ ಹಿಂದೆ ಹಾಕಿದ. ಕೆನ್ನೆ ಗಳನ್ನೊರೆಸಿ ಒಂದು ಬಾರಿ ಅವುಗಳ ಮೇಲೆ ತುಟಿ ಒತ್ತಿದ. ಎಷ್ಟು ಮುದ್ದಾಗಿ ಕಾಣಿಸುತ್ತಿದ್ದಳು ಗಿರಿಜಾ ಆಗ! ಪುಟ್ಟದೊಂದು ಮಗುವಿನ ಹಾಗೆ!—ಹೌದು. ಮಗುವಿನ ಹಾಗೆ! ನಿನ್ನೆ ತಾನು ಆ ರೀತಿ ಮಾತ ನಾಡಿದುದರಿಂದ ಎಷ್ಟು ನೊಂದುಕೊಂಡಿದಾಳೊ! ಎಂಥ ನಿಷ್ಠುರಿ ತಾನು. ತನ್ನ ಕೈಹಿಡಿದು ಏನು ಸುಖಪಡಬೇಕು ಈ ಮುಗ್ಧೆ? ಜೀವನದ ಕಠೋರ ಹೋರಾಟ ಅವಳಿಗರ್ಥವಾಗದು. ಅದಕ್ಕೆ ಅವಶ್ಯವಾದ ಶಿಕ್ಷ

ಣವೂ ಅವಳಿಗೆ ದೊರೆತಿಲ್ಲ. ಪ್ರಪಂಚದ ಅನುಭವವೂ ಇಲ್ಲ. ತನ್ನ ವಿಚಾರಗಳೊಂದಿಗೆ ಅವಳು ಸಮರಸಳಾಗದಿರುವಲ್ಲಿ ಅವಳ ತಪ್ಪೇನೂ ಇಲ್ಲ........

ಅವನ ಮನಸ್ಸು ಏನೋ ನಿರ್ಧಾರಕ್ಕೆ ಬಂದಂತಾಯಿತು. ಇಂದು ತನ್ನ ಹತ್ತಿರ ಮೂರು ರೂಪಾಯಿ ಇದೆ—ಸಂಬಳ ಬರುವುದಕ್ಕೆ ಇನ್ನು ಎಂಟು ದಿನ. ಪರವಾಯಿಲ್ಲ. ಇಂದು ಈ ಮೂರು ರೂಪಾಯಿಯೂ ಖರ್ಚಾಗಿಹೋಗಲಿ. ಒಲವಿನ ಈ ಜೀವಕ್ಕೆ ಇಷ್ಟು ಸಂತೋಷವಾದರೂ ಆಗಲಿ. ಇವತ್ತು ಅವಳ ಆಸೆಯನ್ನು ಪೂರೈಸಿಯೆ ಬಿಡೋಣ—ಎಂದುಕೊಂಡು ಅವಳ ಗದ್ದವನ್ನು ಹಿಡಿದು ಮೆಲ್ಲನೆ ಅಲುಗಾಡಿಸಿದ.

'ಏಳು ಗಿರಿಜಾ! ಏಳು! ಏಳು ನನ್ನ ರಾಣೀ! ಏಳು! ಏಳು ಬೆಳಗಾಯಿತು!' ಎಂದ.

ಕಣ್ಣುಜ್ಜಿಕೊಳ್ಳುತ್ತ ಅವಳು ಎದ್ದು ಕುಳಿತಳು.

'ಬೇಗ ಬೇಗ ಅನ್ನ ಸಾರು ಮಾಡಿಬಿಡು. ಊಟಮಾಡಿಬಿಟ್ಟು ಬೆಂಗಳೂರಿಗೆ ಹೋಗೋಣ. ಇಂದು ಖಂಡಿತವಾಗಿಯೂ ಸಿನಿಮಾ ನೋಡಿಸ್ತೇನೆ ನಿನಗೆ!' ಎಂದ ಸಿದ್ಧರಾಮ.

ಅವನ ಮೈಯಸುತ್ತ ತನ್ನ ತೋಳು ಹೆಣೆಯುತ್ತ ಆನಂದದಿಂದ ಕೇಳಿದಳಾಕೆ.

'ಹೌದೇ? ನಿಜವಾಗಲೂ?'

'ಇನ್ನೂ ಸಂಶಯವೇನೇ ನಿನಗೆ—ನನ್ನ ಬೆಪ್ಪು ಹುಡುಗೀ?'

'ನಂಬೋದೇ ಕಷ್ಟ ಅಮ್ಮಾ ನಿಮ್ಮ ಮಾತನ್ನ! ಇಂದೇನೋ ಸೂರ್ಯ ಉತ್ತರದಲ್ಲಿ ಹುಟ್ಟಿರಬೇಕು' ಎಂದು ನಗುತ್ತ ಆಕೆ ಎದ್ದುಬಿಟ್ಟಳು.

ಅಡಿಗೆ ಮಾಡುವಾಗ ಅವಳ ಸಡಗರವೋ ಸಡಗರ! ಒಲೆಯ ಮೇಲೆ ಅನ್ನ ಕುದಿಯುತ್ತಿದ್ದ ಹಾಗೆ ಸಬಕಾರ ಹಚ್ಚಿ ಮುಖ ತೊಳೆದುಕೊಂಡಳು. ಜಡೆ ಹಾಕಿ ಟೇಪು ಕಟ್ಟಿಕೊಂಡಳು. ರಾತ್ರೆ ನೀರಿನಲ್ಲಿ ತೋಯಿಸಿ ಬಟ್ಟೆಯಲ್ಲಿ ಕಟ್ಟಿ ಇಟ್ಟಿದ್ದ ಕೆಂಪು ಹೂ ಮುಡಿದುಕೊಂಡಳು. ಕುಂಕುಮ ಇಟ್ಟುಕೊಂಡಳು. ಟ್ರಂಕಿನಲ್ಲಿದ್ದ ನಾಲ್ಕು ಸೀರೆಗಳನ್ನು

ಹೊರಡೆಗೆದು ಯಾವುದನ್ನು ಉಟ್ಟುದು—ಎಂದು ಹದಿನೈದು ನಿಮಿಷ ಯೋಚಿಸಿದಳು. 'ರೀ sss, ಯಾವುದನ್ನುಟ್ಟುಕೊಳ್ಳಲಿ ಹೇಳ್ರೀ ss' ಎಂದು ಪತಿಯ ಸಲಹೆಯನ್ನೂ ಕೇಳಿದಳು. 'ಯಾವುದನ್ನಾದರೂ ಉಟ್ಟು ಕೊಂಡು ಬಿಡು. ಎಂಥದು ಉಟ್ಟರೂ ನೀನು ಚೆಂದಾಗಿಯೇ ಕಾಣುತ್ತೀಯ!' ಎಂದು ಆತ ಉತ್ತರವಿತ್ತ. ಕೊನೆಗೆ ಬಿಳಿಯ ವಾಯಲ್ ಸೀರೆಯೆ ಸರಿಯೆಂದು ನಿಶ್ಚಯಿಸಿ ಉಟ್ಟುಕೊಂಡುದೂ ಆಯಿತು. ಬಿಳಿಯ ರವಕೆ ತೊಟ್ಟು ಮೂರು ನಾಲ್ಕು ಸಲ ಕನ್ನಡಿಯಲ್ಲಿ—ಹೌದು—ಅರ್ಧ ಒಡೆದ ಕನ್ನಡಿಯಲ್ಲಿ—ಮುಖ ನೋಡಿಕೊಂಡು, ಕೆನ್ನೆ ಉಜ್ಜಿಕೊಂಡು ಕುರುಳು ತಿದ್ದಿಕೊಂಡು, ಹುಬ್ಬು ತೀಡಿಕೊಂಡು, ಮೂಗು ಒರೆಸಿಕೊಂಡು, ತನ್ನಷ್ಟಕ್ಕೆ ತಾನೆ ನಕ್ಕು—ಅನ್ನ ಹೊತ್ತಿಕೊಂಡ ವಾಸನೆ ಬರುತ್ತಲೂ ಅವಸರದಿಂದ ಓಡಿಹೋಗಿ ಅದನ್ನಿಳಿಸಿದ್ದಾಯಿತು. ಅವಳ ಚಲನವಲನಗಳನ್ನೆಲ್ಲ ಕೌತುಕದಿಂದ ನಿರೀಕ್ಷಿಸುತ್ತ ಕೊಟಡಿಯಲ್ಲಿ ಕುಳಿತಿದ್ದ ಸಿದ್ಧರಾಮು. ಅವನ ಸಿದ್ಧತೆಯೇನೂ ಇರಲಿಲ್ಲ. ಸೂಟುಹಾಕಿ, ಬೂಟು ಧರಿಸಿ ಹೊರಡಬೇಕಾದರೆ ಸಿದ್ಧತೆ ಬೇಕು. ಅಂಗಿ ತೊಟ್ಟು, ಪಂಚೆ ಉಟ್ಟು ಹೊರಡಲು ಎಂಥ ಸಿದ್ಧತೆ ?

ಊಟ ತೀರಿಸಿಕೊಂಡು ನಿಲ್ದಾಣಕ್ಕೆ ಬಂದುದೂ ಆಯಿತು. ಅವಸರದಿಂದ ಟಿಕೆಟ್ ಕೊಂಡುಕೊಂಡು ಪ್ಲಾಟ್‌ಫಾರ್ಮಿಗೆ ಬಂದರು.

'ಅದೋ ! ದೇವಮ್ಮನೂ ಬಂದಿದ್ದಾಳೆ ನೋಡಿ. ಅವರೂ ಹೊರಟಂತೆ ಕಾಣುತ್ತೆ ಸಿನಿಮಾಕ್ಕೆ !'

ಸಿದ್ಧರಾಮು ಅತ್ತ ಹೊರಳಿದ. ದೇವಮ್ಮ ! ಅವಳನ್ನಾತ ನೋಡಿದ್ದು ಇದೇ ಮೊದಲನೆಯ ಸಲ. ಭಾರಿ ಬೆಲೆಯ ರೇಷ್ಮೆಸೀರೆ ಉಟ್ಟಿದ್ದಾಳೆ. ರೇಷ್ಮೆ ರವಕೆ ತೊಟ್ಟಿದ್ದಾಳೆ. ಕಿವಿಗಳಲ್ಲಿ ಕೆಂಪಿನ ಲೋಲಾಕು ಇಟ್ಟಿದ್ದಾಳೆ. ಕತ್ತಿನಲ್ಲಿ ಚಿನ್ನದ ಹಾರಹಾಕಿ ಕೈಗಳಲ್ಲಿ ಚಿನ್ನದ ಬಳೆ ತೊಟ್ಟಿದ್ದಾಳೆ. ಬೆರಳುಗಳಲ್ಲಿ ರತ್ನದುಂಗುರಗಳಿವೆ. ಕಾಲಿಗೆ ಹೊಳಪಿನ ಜೂಸು! ಮುಖದ ಮೇಲೆಲ್ಲ ಪೌಡರಿನ ತೆರೆ! ತುಟಿಗಳಲ್ಲಿ ಬಿಂಕದ ನಗೆ! ತಿಂಗಳಿಗೆ ಇನ್ನೂರು ರೂಪಾಯಿ ಸಂಪಾದಿಸುವ ಸೂಪರ್‌ವೈಜರ್ ಪತ್ನಿ ತಾನು—ಎಂಬುದನ್ನು ಸೂಚಿಸಲೆತ್ನಿಸುವಂಥ ವೃಷ್ಟಿ !

ಪಕ್ಕದಲ್ಲೇ ನಿಂತಿದ್ದ ಅವಳ ಕೈಹಿಡಿದ ಆ ಮಹಾನುಭಾವ—ಆಗ ತಾನೆ ಯೂರೋಪಿನಿಂದ ಮರಳಿಬವರಂಥ ವೇಷದಲ್ಲಿ. ಮ್ಯಾಂಚೆಸ್ಟರ್ ಸರ್ಜಿನ ಸೂಟು, ಟೈ, ಕಾಲರ್, ಹ್ಯಾಟು. ಬೆಳಕು ಬೀರುವ ಬೂಟು. ಬಿಂಕದಿಂದ ಸೆಟೆದು ನಿಂತ ಕತ್ತು !

ಸಿದ್ಧರಾಮನ ದೃಷ್ಟಿ ಆ ದಂಪತಿಗಳಿಂದ ಹೊರಳಿ ತಮ್ಮಿಬ್ಬರನ್ನು ನೋಡಿಕೊಂಡಿತು. ಆ ಸೂಪರ್‌ವೈಜರ್ ಮಹಾಶಯನ ಸೂಟು—ಬೂಟು, ತನ್ನ ಶರ್ಟು—ಪಂಚೆ, ಅವನ ಪತ್ನಿಯ ರೇಷ್ಮೆಸೀರೆ, ತನ್ನ ಪತ್ನಿಯ ಸಾದಾ ಸೀರೆ, ಅವಳ ಕತ್ತಿನಲ್ಲಿನ ಚಿನ್ನದ ಹಾರಗಳು, ಇವಳ ಕತ್ತಿನಲ್ಲಿನ ಕರಿಮಣಿಗಳು, ಅವಳ ಚಿನ್ನದ ಬಳೆ, ಇವಳ ಗಾಜಿನ ಬಳೆ, ಅವಳ ರತ್ನದುಂಗುರದ ಬೆರಳು, ಶೂ ಮೆಟ್ಟಿದ ಕಾಲು—ಇವಳ ಬೆರಳೂ ಬರಿಯವು—ಕಾಲೂ ಬರಿಯವು........

ಈ ಬಗೆಯ ತುಲನೆ ಸರಿಯಲ್ಲ—ಸರಿಯಲ್ಲ—ಎಂದು ಎಷ್ಟು ಹೇಳಿದರೂ ಕೇಳಲಿಲ್ಲ ಮನಸ್ಸು. ಮತ್ತೆ ಮತ್ತೆ ಆ ವೈಷಮ್ಯದ ಭಾವನೆಯೆ ಎದೆಯನ್ನು ಕಲಕುತ್ತಿತ್ತು. ಅವರೂ ಸಿನಿಮಾಗೆ ಹೋಗುತ್ತಿದಾರೆ—ನಾವೂ ಸಿನಿಮಾಗೆ ಹೋಗುತ್ತಿದೇವೆ. ಆದರೆ ಅವರ ಸ್ಥಿತಿಗೂ ನಮ್ಮ ಸ್ಥಿತಿಗೂ ಎಷ್ಟು ವ್ಯತ್ಯಾಸ ! ಆ ಸೂಪರ್‌ವೈಜರ್ ಅಮ್ಮನೆದುರಿಗೆ ಎಷ್ಟು ದೀನೆಯಾಗಿ ಕಾಣುತ್ತಾಳೆ ನನ್ನ ಗಿರಿಜಾ ! ಆಕೆಗಿಂತಲೂ ಚೆಲುವೆ ಈಕೆ. ಆದರೆ........

—ಧಾವಿಸುತ್ತ ಬಂತು ಉಗಿಬಂಡಿ. ಒಂದು ಡಬ್ಬಿಯಲ್ಲೂ ಸ್ಥಳವಿರಲಿಲ್ಲ. ಗಂಡಸರು, ಹೆಂಗಸರು, ಹುಡುಗರು, ಹುಡುಗಿಯರು, ಕೂಸುಗಳು ! ಕಾಲಿಟ್ಟುಕೊಂಡು ನಿಂತುಕೊಂಡಿರಲೂ ಸಹ ಸಾಧ್ಯವಿರಲಿಲ್ಲ. ಬಾಗಿಲು ತೆರೆದು ಒಳಸೇರುವುದೇ ಅಸಾಧ್ಯವಾಗಿತ್ತು. ಅವುಗಳ ಮೇಲೂ ಸವಾರಿ ಮಾಡಿದ್ದರು ಜನ. ಬಾಗಿಲು ತೆರೆಯುವುದು ಹಾಗಿರಲಿ. ಹತ್ತಿರ ಹೋದರೆ ಸಾಕು—ಆ ದ್ವಾರರಕ್ಷಕರು ಉರಿದು ಬೀಳುತ್ತಿದ್ದರು. ಕನ್ನಡ, ತೆಲುಗು, ತಮಿಳು, ಹಿಂದೀ—ಎಲ್ಲ ಭಾಷೆಗಳಲ್ಲೂ ಗಲಾಟೆಗಾರಂಭವಾಗುತ್ತಿತ್ತು.

ಎಲ್ಲ ಡಬ್ಬಿಗಳನ್ನೂ ಹುಡುಕಿದ್ದಾಯಿತು. ಒಂದರಲ್ಲೂ ಪ್ರವೇಶ ದೊರೆಯುವಂತಿರಲಿಲ್ಲ. ದೇವಮ್ಮನೂ, ಅವಳ ಪತಿಯೂ ಇಂಟರ್ ವರ್ಗದಲ್ಲಿ ಕುಳಿತುಕೊಂಡು ಬಿಟ್ಟಿದ್ದರು. ಅಲ್ಲಿ ಹಾಯ್ದುಹೋಗುತ್ತಿದ್ದ ಹಾಗೆ ದೇವಮ್ಮ ಗಿರಿಜೆಯನ್ನು ನೋಡಿದಳು.

'ನಾವೂ ಬರೋಣವೇನಮ್ಮಾ ಒಳಕ್ಕೆ ?' ಎಂದಳು ಗಿರಿಜಾ.

'ಟಿಕೆಟ್ ತಕೊಂಡಿದ್ದೀರೇನು ಇಂಟರ್‌ನದು ?' ಎಂದು ಉಪಹಾಸದಿಂದ ಹೇಳಿ ದೇವಮ್ಮ ಮುಸಿ ಮುಸಿ ನಕ್ಕಳು.

ಮುಖಭಂಗವಾದಂತಾಯಿತು ಸಿದ್ಧರಾಮನಿಗೆ. 'ಇಲ್ಲಿ ಬೇಡ ಬಾ ಗಿರಿಜಾ! ನಮ್ಮ ಸ್ಥಳವಲ್ಲ ಇದು! ಅಲ್ಲಿ—ಹೆಂಗಸರ ಡಬ್ಬಿಯಲ್ಲಿ ನೀ ಕೂತಿರು. ನಾನು ಎಲ್ಲಾದರೂ ನಿಂತುಕೊಂಡಿರ್ತೇನೆ' ಎಂದು ಹೇಳಿ ಆ ಕಡೆ ನಡೆದ.

ಅಲ್ಲೂ ಅದೇ ಗತಿ. ಅಷ್ಟೇ ಗಲಾಟೆ. ದಷ್ಟಗಿನ ಶರೀರದ ಮದ್ರಾಸೀ ಸ್ತ್ರೀಯೊಬ್ಬಳು ಬಾಗಿಲಿಗೆ ಅಡ್ಡವಾಗಿ ಕೂತುಕೊಂಡುಬಿಟ್ಟಿದ್ದಳು. ಅವಳ ಆ ದೀರ್ಘಕಾಯವನ್ನು ಬದಿಗೆ ಸರಿಸಿ ಬಾಗಿಲು ತೆರೆಯುವುದೂ ಅಸಾಧ್ಯವಾಗಿತ್ತು. ಹೇಗೋ ಪ್ರಯಾಸಪಟ್ಟು, ಬಾಗಿಲ ಮೇಲಿನಿಂದ ಗಿರಿಜಳನ್ನೇರಿಸಿ ಒಳಕ್ಕೆ ತೂರಿಸಿಬಿಟ್ಟು ಸಿದ್ಧರಾಮ ಪಕ್ಕದ ಡಬ್ಬಿಗೆ ಹೋದ. ಹತ್ತಾರು ಜನರ ಬೈಗಳ ಮಳೆಯಲ್ಲಿ ತೋಯಿಸಿಕೊಳ್ಳುತ್ತ ಹೇಗೂ ಒಳಕ್ಕೆ ನೆಗೆದ. 'ಉಸ್ಸಪ್ಪಾ' ಎಂದು ಒಂದು ಸಲ ದೀರ್ಘ ಉಸಿರುಹಾಕಿ ನಿಂತುಕೊಂಡ.

ಗಾಡಿಯೂ ಉಸಿರೆಳೆಯುತ್ತ ಧಾವಿಸತೊಡಗಿತು.

ಅಷ್ಟರಲ್ಲಿ ತಿಂದ ಅನ್ನ, ಕಟ್ಟಿತಂದ ಉತ್ಸಾಹ ಅರ್ಧಕ್ಕರ್ಧ ಕರಗಿ ಹೋಗಿತ್ತು ಸಿದ್ಧರಾಮನಿಗೆ.

ಬೆಂಗಳೂರು ನಗರದ ನಿಲ್ದಾಣ ಬಂತು. ಬಾಗಿಲಿನಿಂದ ಪ್ಲಾಟ್‌ಫಾರ್ಮಿಗೆ ಜಿಗಿದುಬಿಟ್ಟು ಈಚೆಗೆ ಬಂದು ಪತ್ನಿಯನ್ನು ಕರೆದುಕೊಂಡು ಹೊರಕ್ಕೆ ಬಂದ. ಓಡಾಡುತ್ತಿದ್ದವರಲ್ಲಿ ಅನೇಕರು ಬೇಕೆಂತಲೇ ಅವಳ ಮೈಗೆ ಮೈ ತಗಲಿಸಿಕೊಂಡು ಹೋಗುತ್ತಿದ್ದರು. ಅವಳೆಷ್ಟು ಎಚ್ಚರದಿಂದ ನಡೆದರೂ ಪ್ರಯೋಜನವಾಗಲಿಲ್ಲ.

'ಅದ್ಯಾಕೆ ಹೀಗೆಲ್ಲಾ ತಟ್ಟಿಕೊಂಡು ಹೋಗ್ತಾರೆ ಇವರು ?' ಎಂದು ಬೇಸರದಿಂದ ಕೇಳಿದಳಾಕೆ.

'ಇದು ಬೆಂಗಳೂರಿನ ಫ್ಯಾಶನ್ ಗಿರಿಜಾ! ಬಡವರನ್ನ ಕಂಡರೆ ಎಲ್ಲಾ ಹೀಗೇ. ನಾವು ನೋಡಹೊರಟಿರುವ ಸಿನಿಮಾದಲ್ಲಿ ಮೊದಲನೇ ದೃಶ್ಯ ಇದು!' ಎಂದ ಸಿದ್ಧರಾಮು. ಅವನ ಮಾತಿನಲ್ಲಿ ಎಷ್ಟು ಅರ್ಥವಾಯಿತೋ ಅವಳಿಗೆ!

ನಿಲ್ದಾಣದ ಹೊರಗಡೆ ಬಂದಾಗ ದೇವಮ್ಮನೂ ಅವಳ ಪತಿಯೂ ಕುದುರೆಗಾಡಿಯಲ್ಲಿ ಹತ್ತಿ ಹೊರಡಲಣಿಯಾಗಿದ್ದುದು ಕಾಣಿಸಿತು. ಗಿರಿಜಳ ಕಡೆ ದೃಷ್ಟಿ ಹೊರಳುತ್ತಲೂ ಮತ್ತೆ ದೇವಮ್ಮ ಮುಸಿ ಮುಸಿ ನಕ್ಕಳು. ಆ ನಗೆಯ ಅರ್ಥವೇನೆಂಬುದನ್ನರಿತುಕೊಳ್ಳುವಷ್ಟು ಸೂಕ್ಷ್ಮಬುದ್ಧಿಯಲ್ಲಿ ಬಂದೀತು ಗಿರಿಜಾಗೆ?

'ನೋಡಿದ್ರಾ! ಗಾಡಿ ಮಾಡ್ಕೊಂಡು ಹೊರಟಿದಾರೆ. ಎಲ್ಲಿಗೆ ಹೋಗ್ತಾ ಇದಾರೋ!' ಎಂದಳು.

'ಎಲ್ಲಿಗಾದರೂ ಹೋಗಲೇಳು. ಗಾಡಿ ಆದ್ರೂ ಮಾಡಿಕೊಳ್ಳಲಿ. ವಿಮಾನ ಆದ್ರೂ ಏರಿಕೊಳ್ಳಲಿ. ನಮಗೇನಂತೆ. ನಾವು ನಡೆದು ಹೋಗೋದೇ ಮೇಲು. ಬಾ' ಎಂದ ಸಿದ್ಧರಾಮು.

'ಎಲ್ಲಿಗೆ ಹೋಗೋದು ಈಗ?'

'ಚಿಕ್ಕ ಲಾಲ್‌ಬಾಗಿಗೆ.'

'ಲಾಲ್‌ಬಾಗ್? ದೇವಮ್ಮ ಅಲ್ಲಿಗೇ ಹೊರಟಿದ್ದಾಳೊ ಏನೊ! ಅಲ್ಲಿ ಪ್ರಾಣಿಗಳಿವೆಯಂತಲ್ಲ? ಹೌದೇನು?'

'ಇವೆಯಂತೆ. ನಾನೇನೂ ನೋಡಿಲ್ಲ. ಅದು ದೊಡ್ಡ ಲಾಲ್‌ಬಾಗ್. ನಾವೀಗ ಹೋಗೋದು ಅಲ್ಲಿಗಲ್ಲ. ಚಿಕ್ಕಲಾಲ್‌ಬಾಗಿಗೆ!'

'ಅಲ್ಲಿಗ್ಯಾತಕ್ಕೆ? ದೊಡ್ಡಲಾಲ್‌ಬಾಗಿಗೇ ಹೋಗೋಣ. ಪ್ರಾಣಿಗಳನ್ನಾದ್ರೂ ನೋಡಬಹುದು.'

'ದೊಡ್ಡ ಲಾಲ್‌ಬಾಗ್ ದೊಡ್ಡ ಮನುಷ್ಯರದು ಗಿರಿಜಾ! ಪ್ರಾಣಿ, ಗಿಳಿ, ಗೊರವಂಕ, ಗ್ಲಾಸ್ ಹೌಸ್ ಎಲ್ಲಾ ಅವರದೇ! ನಾವು ಚಿಕ್ಕಜನ. ನಮಗೆಲ್ಲಾ ಚಿಕ್ಕಲಾಲ್‌ಬಾಗೇ ಸರಿಯಾದ ಸ್ಥಳ. ಈ

ವೇಷದಲ್ಲಿ ನಾವು ದೊಡ್ಡಲಾಲ್‌ಬಾಗಿಗೆ ಹೋದರೆ ರೇಷ್ಮೆ ಸೀರೆಯುಟ್ಟು ಕೊಂಡು ಶೂ ಹಾಕಿಕೊಂಡು ಅಲ್ಲಿ ತಿರುಗುವ ಥಳಕಿನ ಹುಡುಗಿಯರು ಬಿದ್ದು ಬಿದ್ದು ನಕ್ಕಾರು. ಚಿಕ್ಕಲಾಲ್‌ಬಾಗಿನಲ್ಲಾದರೋ ಹಾಗೆ ನಗುವವ ರಾರೂ ಇರೋಲ್ಲ. ಇಲ್ಲಿಗೆ ಬರೋದು ಅಂದರೆ ಅವರ ಮರ್ಯಾದೆಗೆ ಕಡಮೆ. ನಮ್ಮಂಥ ಬಡವರೇ ಬರೋದು ಇಲ್ಲಿಗೆ. ಬಾ ಹೋಗೋಣ. ಮೂರೂವರೆಗೆ ಸಿನಿಮಾ ಸುರುವಾಗುತ್ತೆ. ಅಲ್ಲಿಯವರೆಗೆ ಮಾಡೋ ದೇನು ? ಕೂತಿರೋಣವಂತೆ ತೋಟದಲ್ಲಿ....'

—ತೋಟಕ್ಕೆ ಬಂದು ತಲುಪಿದರು. ಆಗಲೆ ಸೂರ್ಯ ನೆತ್ತಿಯ ಮೇಲೇರಿ ಬಂದಿದ್ದ. ಗಿಡಮರಗಳ ನೆರಳಿನಲ್ಲಿ ಅಲ್ಲಿ ಇಲ್ಲಿ ಅಸ್ತವ್ಯಸ್ತ ವಾಗಿ ಬಿದ್ದುಕೊಂಡಿತ್ತು ಬಡಜನ. ಶಿಲಾಸನವೊಂದರ ಮೇಲೆ ಇಬ್ಬರೂ ಕುಳಿತುಕೊಂಡರು.

ಸೆರಗಿನಿಂದ ಬೆವರನ್ನೊರೆಸಿಕೊಳ್ಳುತ್ತ ಕೇಳಿದಳು ಗಿರಿಜಾ.

'ಇನ್ನೇನು ಮಾಡೋದು ?'

'ಸಿನಿಮಾ ನೋಡೋದು' ಎಂದ ಸಿದ್ಧರಾಮ ಅರ್ಥಗರ್ಭಿತ ಸ್ವರದಲ್ಲಿ.

'ಸಿನಿಮಾ ? ಈಗಲ್ಲಿಯ ಸಿನಿಮಾ ? ಮೂರೂವರೆಗಲ್ಲವೇನು ನೀವು ಹೇಳಿದ್ದು ?'

'ಮೂರೂವರೆಗೆ ನಡೆಯೋದು ನಿಜವಾದ ಸಿನಿಮಾ ಅಲ್ಲ. ಸುಳ್ಳು ಸಿನಿಮಾ! ನಿಜವಾದ ಸಿನಿಮಾ ಇಲ್ಲೇ ನಡೆದಿದೆ ನೋಡು. ನಮ್ಮ ಅಕ್ಕ ಪಕ್ಕದಲ್ಲೇ. ನಮ್ಮ ಕಣ್ಣೆದುರಿನಲ್ಲೇ !'

'ಸುರುಮಾಡಿದ್ರೇನು ಹಾಸ್ಯಕ್ಕೆ ? ಇಲ್ಲೆಲ್ಲಿದೆ ಸಿನಿಮಾ ? ಈ ತೋಟದಲ್ಲಿ ?'

'ಹೂಂ ! ಈ ತೋಟದಲ್ಲಿ !'

'ಎಲ್ಲಿ ? ಕಾಣೋದಿಲ್ಲವಲ್ಲಾ ?'

'ಕಣ್ಣಿದ್ದವರಿಗೆ ಮಾತ್ರ ಕಾಣಿಸುತ್ತೆ ಅದು !'

'ಕಣ್ಣಿದ್ದವರಿಗೆ ? ಅಂದ್ರೆ ನನ್ನೇನು ಕುರುಡಿ ಅಂತ ತಿಳಕೊಂ ಡೀರೋ ?'

'ಹೂಂ! ಕುರುಡಿಯೇ ಸರಿ- ಇನ್ನೇನು?'

'ಕಣ್ಣಿದ್ದೂ?'

'ಹೌದು. ಕಣ್ಣಿದ್ದೂ ಕುರುಡಿ ನೀನು ಗಿರಿಜಾ! ಈ ಹೊರಗಿನ ಕಣ್ಣುಗಳಿಂದ ಕಾಣಲಾರದು ಈ ಸಿನಿಮಾ! ಅದಕ್ಕೆ ಒಳಗಿನ ಕಣ್ಣು ಬೇಕು! ಜ್ಞಾನದ ಕಣ್ಣು ಬೇಕು. ಬುದ್ಧಿಯ ಕಣ್ಣು ಬೇಕು. ಸಹಾನುಭೂತಿಯ ಕಣ್ಣು ಬೇಕು.'

'ಅಂದ್ರೆ?'

'ನಮ್ಮ ಸುತ್ತಮುತ್ತ ಏನು ನಡೆದಿದೆನಮ್ಮ, ದೇಶದ ಗತಿ ಏನಾಗಿದೆ, ಜನ ಯಾವ ಸ್ಥಿತಿಯಲ್ಲಿದಾರೆ, ಅವರ ಕಷ್ಟಸುಖ ಹೇಗಿದೆ— ಅನ್ನೋದನ್ನ ತಿಳಿದ್ಕೊಳ್ಳೋ ವಿಚಾರಬೇಕು ನಮಗೆ ಗಿರಿಜಾ! ಅದೋ, ಆ ಗಿಡದ ಕೆಳಗೆ ಒಬ್ಬ ಹೆಂಗಸು ಬಿದ್ದುಕೊಂಡಿದಾಳೆ. ಕಾಣಿಸುತ್ತೆ ತಾನೇ ನಿನಗೆ?'

'ಹೌದಲ್ರಿ! ಪಾಪ! ಯಾಕೆ ಹಾಗೆ ಬಿದ್ದುಕೊಂಡಿದಾಳೊ? ಹತ್ತಿರ ಇರೋವು ಆ ನಾಲ್ಕು ಪಿಳ್ಳೆಗಳು ಮಕ್ಕಳೂ ಅಂತ ಕಾಣುತ್ತೆ!'

'ಮಕ್ಕಳೇ! ಇನ್ನಾರಿದ್ದಾರು! ನೋಡು. ಆಕೆಯೂ ನಮ್ಮ ಹಾಗೆ- ಮನುಷ್ಯಳೇ. ನಿನ್ನ ಹಾಗೆ ಹೆಂಗುಸೇ. ಮಾನ, ಮರ್ಯಾದೆ ಎಲ್ಲಾ ಮರೆತುಬಿಟ್ಟು ಒಬ್ಬಳೇ ಈ ಮಕ್ಕಳನ್ನ ಕಟ್ಟಿಕೊಂಡು ಈ ತೋಟಕ್ಕೆ ಬಂದು ಈ ರೀತಿ ಬಿದ್ದುಕೋಬೇಕಾದರೆ ಅವಳಿಗೆ ಯಾವ ಗತಿ ಬಂದಿದ್ದೀತು?-ಅವಳಿಗೆ ಇಂಥಾ ಸ್ಥಿತಿ ಬರಲು ಕಾರಣ ಏನು? ಅನ್ನೋ ವಿಚಾರ ನಮಗೆ ಬರಬೇಡವೇ?'

ಗಿರಿಜಾ ಮಾತನಾಡಲಿಲ್ಲ. ಅವಳ ಮನಸ್ಸಿಗೆ ಮುತ್ತಿಕೊಂಡಿದ್ದ ಮೌಢ್ಯದ ಪರದೆ ಮೆಲ್ಲಮೆಲ್ಲನೆ ಕಳಚಿ ಬೀಳತೊಡಗಿತ್ತು.

'ಆ ಹೆಂಗಸಿನ ಮಾತು ಹಾಗಿರಲಿ. ಈ ಕಡೆ ಎಡಗಡೆ-ಆ ಬೇಲಿಯ ಹತ್ತರ ನೋಡು. ಹರಕು, ಹೊಲಸು ಬಟ್ಟೆ ಹಾಕಿಕೊಂಡು ಆ ನಾಲ್ಕು ಹುಡುಗರು ಹೇಗೆ ಬಿದ್ದಿವೆ ನೋಡು ಬಿಸಿಲಿನಲ್ಲೇ! ಪಾಪ! ಅವುಗಳ ವಯಸ್ಸಾದರೂ ಎಷ್ಟಿದ್ದೀತು! ಆರರಿಂದ ಏಳರವರೆಗೆ. ಹೆಚ್ಚಿರಲಿಕ್ಕಿಲ್ಲ. ಶಾಲೆ ಕಲಿಯೋ ವಯಸ್ಸಿದು. ಇವು ಇಲ್ಲಿ ಬಿದ್ದುಕೊಂಡಿವೆ.

ಎಲ್ಲಿಯಾದರೂ ಕೂಲಿನಾಲಿ ಮಾಡೋದು-ಆರು ಕಾಸಿನ ಕಡಲೆಪುರಿ ತಿನ್ನೋದು-ಮುಸುರೆ ಎಲೆ ಹುಡುಕಿ ಎಂಜಲು ತಿನ್ನೋದು-ಇಲ್ಲಿ ಬಂದು ಬಿದ್ದುಕೊಳ್ಳೋದು-ಇದೂ ಜೀವನವೆ ಗಿರಿಜಾ! ಈ ಮಕ್ಕಳೂ ಮಕ್ಕಳೆ ! ನೋಡಿದರೆ ನಾಯಿಯ ಕುನ್ನಿಗಳು ಬಿದ್ದುಕೊಂಡ ಹಾಗೆ ಕಾಣಿಸೋಲ್ಲವೆ ಅವು ?—ನಮ್ಮ ದೇಶದಲ್ಲಿ ನೂರಕ್ಕೆ ತೊಂಬತ್ತ ರಷ್ಟು ಮಕ್ಕಳ ಗತಿಯೂ ಹೀಗೇ ಆಗಿದೆ ಗಿರಿಜಾ ! ನಾಯಿಯ ಕುನ್ನಿಗಳ ಹಾಗೆ. ನಾವು ನೋಡುತ್ತಿರುವ ಸಿನಿಮಾದಲ್ಲಿ ಎರಡನೇ ದೃಶ್ಯ ಇದು !....' ಎಂದ.

ಕೆಲಕಾಲ ದಂಪತಿಗಳಿಬ್ಬರೂ ಮೌನವಾಗಿದ್ದರು. ಯಾರ ಬಾಯಿಂದಲೂ ಮಾತು ಹೊರಡುವಹಾಗಿರಲಿಲ್ಲ.

'ಕಳ್ಳೇಕಾಯಿ ! ಕಳ್ಳೇಕಾಯಿ !'

ತಲೆಯೆತ್ತಿ ನೋಡಿದಳು ಗಿರಿಜಾ.

ಮುದುಕನೊಬ್ಬ ಬುಟ್ಟಿಯೊಂದನ್ನು ಹೊತ್ತುಕೊಂಡು ಕೂಗುತ್ತ ಬರುತ್ತಿದ್ದ. ವಯಸ್ಸಾದ ಮುದುಕ. ಅರವತ್ತು ಎಪ್ಪತ್ತು ಆದರೂ ಆಗಿದ್ದೀತು. ಕೈಯಲ್ಲೊಂದು ಕೋಲು ಹಿಡಿದುಕೊಂಡು ಅದರ ಆಧಾರ ದಿಂದ ತನ್ನ ಕೋಲಿನಂಥ ಶರೀರವನ್ನು ಮುಂದುವರೆಯಿಸುತ್ತ ಬಾಗುತ್ತ, ಬಳುಕುತ್ತ ಬರುತ್ತಿದ್ದಾನೆ. ಹರಿದುಹೋದ ಪಂಚೆಯೊಂದನ್ನು ಮೊಳ ಕಾಲಿನವರೆಗೆ ಸುತ್ತಿಕೊಂಡು ಹೊಲಸು ಅಂಗಿಯೊಂದನ್ನು ತೊಟ್ಟಿದಾನೆ. ತಲೆಗೊಂದು ಚಿಂದಿಬಟ್ಟೆ. ಅದರೊಳಗಿನಿಂದ ಇಣುಕಿಹಾಕುವ ಬಿಳಿಯ ಕೂದಲು. ಮುಖದ ಮೇಲೆ ಬೆಳೆದು ನಿಂತ ಬಿಳಿಯ ಗಡ್ಡ ಮೀಸೆ. ಮೊದಲೇ ಕಳಾಹೀನವಾದ ಆ ಮುಖ ಬಿಸಿಲಿನಲ್ಲಿ ಸುತ್ತಿ ಸುತ್ತಿ ಇನ್ನೂ ಕಂದಿಹೋಗಿದೆ. 'ಕಳ್ಳೇಕಾಯಿ ! ಕಳ್ಳೇಕಾಯಿ !' ಎಂಥ ಕುಗ್ಗಿದ ದನಿ ಅದು !

'ಹಸಿವಾಗಿದೆಯೇನೇ ?' ಎಂದ ಸಿದ್ಧರಾಮು.

ಹೌದು. ಹಸಿವಾಗಿತ್ತು ಅವಳಿಗೆ. ಬೆಳಗಿನಲ್ಲಿ ತಿಂದ ಆ ಅನ್ನ ಯಾವಾಗಲೋ ಕರಗಿಹೋಗಿತ್ತು. ಆ ರೈಲು ಪ್ರಯಾಣ—ಆ ಗಲಾಟೆ—ಆ ಬಿಸಿಲು—ಆ ದಾಹ........

'ಕೊಡಯ್ಯಾ ಒಂದಾಣೆಯದು !'

ನಡುಗುವ ಕೈಗಳಿಂದ ಬುಟ್ಟಿಯನ್ನಿಳಿಸಿ ಆ ಮುದುಕ ಕುಳಿತು ಕೊಂಡ. ಒಂದು ಪಾವು ಕಡಲೇಕಾಯಿಯನ್ನಳೆದು ಕೊಟ್ಟು ದುಡ್ಡು ತೆಗೆದುಕೊಂಡು ಹೊರಟುಹೋದ. ಭಾರತದ ದಾರಿದ್ರ್ಯ, ದೈನ್ಯತೆ, ಅಸಹಾಯಕತೆಗಳೇ ಮೂರ್ತಿವೆತ್ತು ಬಂದಂತಿದ್ದ ಆ ಮುದುಕನನ್ನು ಶೂನ್ಯದೃಷ್ಟಿಯಿಂದ ನಿಟ್ಟಿಸುತ್ತ ಸಿದ್ಧರಾಮನೆಂದ.

'ನಾವು ನೋಡುತ್ತಿರುವ ಸಿನಿಮಾದಲ್ಲಿ ಮೂರನೇ ದೃಶ್ಯ ಇದು ಗಿರಿಜಾ! ಇನ್ನೂ ಕೊಂಚ ಕಣ್ದೆರೆದು ನೋಡು. ಮುಪ್ಪಿನ ಮುದುಕ ಈತ. ಅರವತ್ತಕ್ಕೂ ಹೆಚ್ಚಾಗಿದ್ದೀತು ವಯಸ್ಸು. ಮೈಯಲ್ಲಿ ಶಕ್ತಿಯಾದರೂ ಇದೆಯೇ ಅವನಿಗೆ? ಅವನ ಕತ್ತಿನಲ್ಲಿ ನರಗಳಾದರೂ ಇವೆಯೇ? ಕೈಯಲ್ಲಿ ರಕ್ತವಾದರೂ ಇದೆಯೇ? ಆದರೂ ಆತ ಆ ಬುಟ್ಟಿ ಹೊತ್ತು ಕೊಂಡು ಈ ಭೀಕರ ಬಿಸಿಲಿನಲ್ಲಿ ತಿರುಗುತ್ತಾನೆ. ಊಟಮಾಡಿ ತಂಪಾದ ಸ್ಥಳದಲ್ಲಿ ಮಲಗಿಕೊಂಡು ವಿರಮಿಸುವ ಹೊತ್ತು ಇದು. ಇವನ ವಯಸ್ಸಿನ ಶ್ರೀಮಂತರೆಷ್ಟು ಜನ ಸೋಫಾಗಳ ಮೇಲೆ ಒರಗಿ ನಿದ್ರಿಸುತ್ತಿದ್ದಾರೊ! ಇವನು ಮಾತ್ರ ಹೊಟ್ಟೆಪಾಡಿಗಾಗಿ ಈ ಕಳ್ಳೇಕಾಯಿಯ ಕ್ಷುಲ್ಲಕ ವ್ಯಾಪಾರ ಮಾಡುತ್ತ ತಿರುಗಬೇಕಾಗಿದೆ. ದಿನವೆಲ್ಲಾ ಈ ರೀತಿ ತಿರುಗಿದರೆ ಅವನಿಗೆ ದೊರೆಯುವ ಲಾಭವಾದರೂ ಎಷ್ಟಿದ್ದೀತು ಅಂತೀಯಾ? ನಾಲ್ಕಾಣೆ—ಐದಾಣೆ ಆದರೆ ಬಹಳ ಆಯಿತು. ಈ ಅಲ್ಪ ಲಾಭಕ್ಕಾಗಿ ಈ ಮುದುಕ ಪಡುತ್ತಿರುವ ಕಷ್ಟ ನೋಡಿದೆಯಾ? ಇಂಥ ಕಷ್ಟವೇ ಇವನಂಥ ಕೋಟ್ಯಾವಧಿ ಜನ ಮುದುಕರಿಗೂ ಇದೆ ಇಂದಿನ ಹಿಂದುಸ್ಥಾನದಲ್ಲಿ! **ಇದು ನಿಜವಾದ ಸಿನಿಮಾ ಗಿರಿಜಾ!** ಅಲ್ಲಿ—ಆ ಥೇಟರಿನಲ್ಲಿ ಈ ನಿಜ ದೃಶ್ಯಗಳನ್ನ ನೋಡಿಸೋಲ್ಲ. ಅದೆಲ್ಲಾ ಸುಳ್ಳು ಸೃಷ್ಟಿ. ಬರೀ ಶ್ರೀಮಂತರ ಅಟ್ಟಹಾಸ! ಅವರ ಸೂಟು, ಅವರ ಬೂಟು, ಅವರ ಭಾರಿ ಭಾರಿ ಬಂಗಲೆಗಳು, ಮೋಟಾರು ಕಾರುಗಳು, ಅವರ ಪ್ರೇಯಸಿಯರು, ಅವರ ಚಿತ್ರ ವಿಚಿತ್ರ ಸೀರೆ—ರವಕೆಗಳು—ಅವರ ವಿಲಕ್ಷಣ ಪ್ರೇಮ! ಈ ಜಗತ್ತಿನಲ್ಲಿ ನಿಜವಾಗಿ ನಡೆದಿರೋದು ಆ ಸಿನಿಮಾಗ

ಳಲ್ಲಿ ಕಾಣಿಸೋಲ್ಲ ಗಿರಿಜಾ !—ಅದ್ಯಾವದೋ ಬೇರೆ ಜಗತ್ತಿನ ಸಿನಿಮಾ ! ಅದಕ್ಕಾಗಿ ಹಣ ಹಾಳುಮಾಡಿಕೊಳ್ತೀವೆ ಹುಚ್ಚರು ನಾವು !....'

ಬೇರಾವುದಾದರೂ ಸಮಯವಾಗಿದ್ದರೆ ಗಿರಿಜಾ ಸುಮ್ಮನಿರುತ್ತಿರ ಲಿಲ್ಲ. 'ದುಡ್ಡು ಖರ್ಚಾಗುತ್ತೆ ಅಂತ ಸುರುವಾಯ್ತೇನೋ ನಿಮ್ಮ ಲೆಕ್ಕರು !' ಎಂದು ಹೇಳಿ ಮೂಗು ಮುರಿಯದಿರುತ್ತಿರಲಿಲ್ಲ. ಆಧರೆ ಈಗ್ಗ ಹಾಗೇನೂ ಮಾಡಲಿಲ್ಲ ಆಕೆ. ಅದು ಸಾಧ್ಯವೂ ಇರಲಿಲ್ಲ. ಈ ವಾತಾ ವರಣವೇ ವಿಲಕ್ಷಣವಾಗಿತ್ತು. ಮನೆಯಲ್ಲಿ ಕೂತು ಕೂತು ಸಂಕುಚಿತ ವಾಗಿದ್ದ ಅವಳ ದೃಷ್ಟಿ ಹೊರ ಜಗತ್ತಿನ ಸಂಪರ್ಕದೊಂದಿಗೆ ವಿಶಾಲವಾಗು ತ್ತಿತ್ತು. ಅವಳ ಕಣ್ಣು ಮೆಲ್ಲನೆ ಬಿಚ್ಚಿಕೊಳ್ಳುತ್ತಿತ್ತು—ಸಿದ್ಧರಾಮನೆಂದ ಆ ಒಳಗಣ್ಣು........

'ಇಂಥ ಬಡತನ, ಇಂಥ ದೈನ್ಯತೆ, ಇಂಥ ಅಸಹಾಯಸ್ಥಿತಿ ನಮ್ಮದು !—ಇದನ್ನೆಲ್ಲ ಹೋಗಲಾಡಿಸಲು ನಾವು ದುಡಿಯಬೇಕಲ್ಲವೇ ಗಿರಿಜಾ ? ಈ ಬಡವರೂ ನಮ್ಮವರೆ ! ನಮ್ಮ ದೇಶದವರೆ ! ನಮ್ಮ ಅಣ್ಣ ತಮ್ಮ ಅಕ್ಕ ತಂಗಿಯರೆ ! ಅವರ ದುಃಖ ಹೇಗೆ ಹೋದೀತು—ಅದಕ್ಕಾಗಿ ಎಂಥ ಕೆಲಸಮಾಡಬೇಕು—ಎನ್ನುವುದನ್ನು ನಾವು ಯೋಚಿಸಬೇಕಲ್ಲವೆ ? ಭಾನುವಾರ ಬರುತ್ತಲೂ ಅದೇ ಕೆಲಸದಲ್ಲಿ ತೊಡಗಿರುತ್ತೇನೆ ನಾನು. ಕಾಡುಗೋಡಿಯಲ್ಲಿರುವ ಇಂಥ ಬಡ ಕೂಲಿಕಾರರ ಸಂಘಟನೆ ಮಾಡುತ್ತಿ ರುತ್ತೇನೆ. ಈ ಅಸಹ್ಯ ಬಡತನ ಹೋಗಬೇಕು. ಅವರೂ ಮನುಷ್ಯರಾಗಿ ಬದುಕುವಂತಾಗಬೇಕು. ಅವರ ಮಕ್ಕಳೂ ಶಾಲೆಗೆ ಹೋಗಿ ಕಲಿಯ ಬೇಕು. ನಾಯಿಕುನ್ನಿಗಳಂತೆ ಎಂಜಲುತಿಂದು ಈ ರೀತಿ ಬಿಸಿಲಲ್ಲಿ ಬೀಳ ಬಾರದು. ಅವರ ಹೆಂಗುಸರೂ ಮರ್ಯಾದೆಯಿಂದ ಸುಖದಿಂದ ಇರುವಂ ತಾಗಬೇಕು. ಈ ರೀತಿ ಅನಾಥೆಯರಾಗಿ ತೋಟದಲ್ಲಿ ಬಿದ್ದುಕೊಳ್ಳಬಾ ರದು. ಅವರ ಮುದುಕ ತಂದೆಗಳೂ ಸುಖವಾಗಿ ಊಟಮಾಡಿ ವಿರಮಿಸು ವಂತಾಗಬೇಕು. ಇಂಥ ಉರಿಬಿಸಿಲಿನಲ್ಲಿ ಕಳ್ಳೇಕಾಯಿ ಮಾರುತ್ತ ತಿರುಗಿ ಕೊನೆಗೆ ಕೆಮ್ಮುತ್ತ ಕೆಮ್ಮುತ್ತ ಪ್ರಾಣ ಬಿಡಬಾರದು...

'ಅದೆಲ್ಲಾ ಸರಿ. ಆದರೆ ನೀವೊಬ್ಬರೆ ಏನು ಮಾಡೀರಿ ಇವರಿಗೆಲ್ಲ ? ನಿಮ್ಮೊಬ್ಬರಿಂದ ಏನಾದೀತು ?'

'ನಾನೊಬ್ಬನು ಮಾತ್ರವಲ್ಲ ಗಿರಿಜಾ! ಎಷ್ಟೋ ಜನ ಇಂಥ ಕಾರ್ಯ ಮಾಡುತ್ತಿದೇವೆ. ಒಂದೊಂದು ಊರಿನಲ್ಲಿ ನಮ್ಮಂತವರು ಇಬ್ಬಿಬ್ಬರಿದ್ದರೆ ಸಾಕು. ಎಷ್ಟೋ ಕೆಲಸವಾದೀತು. ಇಂದಿಲ್ಲ ನಾಳೆ ಈ ಬಡ ಜನರಿಗೆಲ್ಲ ಒಳ್ಳೆಯ ದಿನ ಬಂದೀತು. ಅವರೂ ಸುಖವಾಗಿ ಬಾಳಿಯಾರು! ಆ ಸುಖಜೀವನಕ್ಕಾಗಿ ನಾವು ಸಿದ್ಧತೆ ನಡಸುತ್ತಿದೇವೆ ಗಿರಿಜಾ! ಇದೊಂದು ಮಹಾ ದೊಡ್ಡ ಸಿನಿಮಾ! ಅದರಲ್ಲಿ ಪಾತ್ರವಹಿಸಿರುವವರು ಹತ್ತಿಪ್ಪತ್ತು ಮಂದಿ ಮಾತ್ರವಲ್ಲ—ದೇಶದ ಬಡಜನರೆಲ್ಲಾ ಅದರಲ್ಲಿ ಅಭಿನಯಿಸುತ್ತಿದ್ದಾರೆ. ನಾವೆ ಅದರ ನಿರ್ಮಾತೃಗಳು—ನಿರ್ದೇಶಕರು....ಕಳ್ಳೆಕಾಯಿ ತಿನ್ನು ಗಿರಿಜಾ! ಹಸಿದಿದ್ದೀಯ!....'

ತಿನ್ನಲಾಗಲಿಲ್ಲ ಅವಳಿಗೆ. ಭಾವನಾವೇಗದಿಂದ ಅವಳ ಬಾಯಿ ಕಟ್ಟಿಹೋಗಿತ್ತು. ಕತ್ತಿನ ಶಿರವುಬ್ಬಿಕೊಂಡಿತ್ತು.

[೩]

ಸೂರ್ಯ ಪಶ್ಚಿಮದ ಕಡೆ ಮೆಲ್ಲಮೆಲ್ಲನೆ ಇಳಿಯಲಾರಂಭಿಸಿದ್ದ. ಗಿಡಗಳ ನೆರಳು ಪೂರ್ವಕ್ಕೆ ಹೊರಳುತ್ತಿದ್ದವು. ಸಿದ್ಧರಾಮನ ಹತ್ತಿರ ಗಡಿಯಾರವೆಲ್ಲಿಂದ ಬಂದೀತು? ಸೂರ್ಯನನ್ನು ನೋಡಿಯೆ ಹೊತ್ತು ಗುರುತಿಸಬೇಕು ಅತ.

'ಮೂರು ಗಂಟೆ ಆಯ್ತೇನೊ—ಏಳು ಹೋಗೋಣ' ಎಂದ.

ಮೂರು ಗಂಟೆಯಲ್ಲ—ಮೂರೂವರೆಯಾಗಿ ಹೋಗಿತ್ತು ಅವರು ಸಿನಿಮಾಮಂದಿರಕ್ಕೆ ಬಂದು ತಲುಪಿದಾಗ. ಗಿರಿಜಳಿಗಾಗಿ ಮೂರುಮುಕ್ಕಾಲಾಣೆಯದೊಂದು ಟಿಕೆಟ್ ತೆಗೆಯಿಸಿ ತನಗಾಗಿ ಎಂಟಾಣೆಯದೊಂದನ್ನು ಕೊಳ್ಳಲು ಹೋದರೆ 'ಟಿಕೆಟ್ ತೀರಿವೆ. ಹದಿಮೂರಾಣೆಯದೂ ಇಲ್ಲ ರೂಪಾಯಿ ನಾಲ್ಕಾಣೆಯದಿದೆ' ಎಂದು ಉತ್ತರ ಬಂತು. ಒಂದು ರೂಪಾಯಿ ನಾಲ್ಕಾಣೆ! ಅಷ್ಟು ದಂಡತೆತ್ತು ಸಿನಿಮಾ ನೋಡುವುದು! ಅದೂ ತನ್ನಂಥ ನಲವತ್ತು ರೂಪಾಯಿ ಸಂಬಳದವ! ಅಷ್ಟು ಹಣವೂ ಹತ್ತಿರ ಇಲ್ಲ—ಸರಿ. ಮುಖ ಬಾಡಿಸಿಕೊಂಡು ಹೊರಳಿ ಬಂದ.

'ಏನು ಮಾಡೋಣ ಗಿರಿಜಾ! ಎಂಟಾಣೆಯ ಟಿಕೆಟ್ ತೀ

'ಇನ್ನು ಎಷ್ಟರದಿದೆ ?'

'ಒಂದೂಕಾಲು ರೂಪಾಯಿಂದು.'

'ತೆಗಿಸಿ ಬಿಡಿ. ಇನ್ನೇನು ಮಾಡೋದು ? ನಾನಂತೂ ಕೊಂಡಾಯಿತಲ್ಲ?'

'ಒಂದೂಕಾಲು ರೂಪಾಯಿ ಟಿಕೆಟ್ಟಿಗೆ ಕೊಟ್ಟರೆ ರೈಲಿಗೆ ಹಣವನ್ನೆಲ್ಲಿಂದ ತರೋದು ? ಇಬ್ಬರಿಗೂ ಹತ್ತಾಣೆ ಬೇಕು ರೈಲಿಗೆ.'

ಈ ರೀತಿ ಇವರ ಲೆಕ್ಕಾಚಾರ ನಡೆದಿರುವಾಗಲೇ ದೇವಮ್ಮ ಬಂದಳು ಗಂಡನ ಜತೆಯಲ್ಲಿ. ಇವರನ್ನು ನೋಡಿಯೂ ನೋಡದವರಂತೆ ಅವರಿಬ್ಬರೂ ನೇರವಾಗಿ ಹೊರಟು ಮಂದಿರವನ್ನು ಸೇರಿದರು.

'ಅವರು ಹೋದರಲ್ಲ ? ಯಾವ ಜಾಗಕ್ಕೆ ?', ಎಂದಳು ಗಿರಿಜಾ.

'ಎರಡು ರೂಪಾಯಿ ನಾಲ್ಕಾಣೆಯದಕ್ಕೆ !'

'ಅಂದ್ರೆ ? ಇಬ್ಬರಿಗೂ ಸೇರಿ ನಾಲ್ಕೂವರೆ ಆಯ್ತಲ್ಲ ? ಬರೀ ಸಿನಿಮಾಕ್ಕೆ ಇಷ್ಟು ಖರ್ಚು ಮಾಡ್ತಾರೇ ಅವರು ?'

'ದುಡ್ಡಿದೆ. ಮಾಡುತ್ತಾರೆ. ನಮ್ಮ ಹತ್ತಿರ ದುಡ್ಡಿಲ್ಲ. ನಾವು ಮಾಡಲಾಗೋದಿಲ್ಲ. ಇದೇ ಇಂದಿನ ಜಗತ್ತಿನ ರೀತಿ. ಬಾ ಗಿರಿಜಾ ! ಹಾಳಾಯ್ತು ಈ ಸಿನಿಮಾ ! ಹೊರಟುಬಿಡೋಣ' ಎಂದ ಸಿದ್ಧರಾಮು.

'ಬೇರ್ಯಾವುದಾದ್ರೂ ಸಿನಿಮಾಕ್ಕೆ ಹೋಗಿದ್ದರೆ ?'

'ಸೆಲೆಕ್ಟ್‌ಗೆ ಹೋಗೋಣ ಬಾ. ಅಲ್ಲಿಯಾದರೂ ಟಿಕೆಟ್ ಸಿಕ್ಕಿದರೆ ! ಇಂದು ಭಾನುವಾರ. ತುಂಬ ಗಲಾಟೆ. ಸಮಯಾನೂ ಮೀರಿಹೋಗಿದೆ. ಆದರೂ ಪ್ರಯತ್ನಿಸೋದಕ್ಕೇನಂತೆ. ಬಾ' ಎಂದ.

ಅವರ ಪ್ರಯತ್ನವೇನೂ ಸಫಲವಾಗಲಿಲ್ಲ. ಆಗಲೇ ಅಲ್ಲಿಯೂ ಟಿಕೆಟ್ಟು ಮುಗಿದುಹೋಗಿದ್ದುವು.

ಮೆಜೆಸ್ಟಿಕ್ ಆಯಿತು; ಸಾಗರ್, ಪ್ರಭಾತ್, ಸ್ಟೇಟ್ಸ್ ಎಲ್ಲ ಸುತ್ತಿ ಮುಗಿಯಿತು. ಎಲ್ಲೂ ಟಿಕೆಟ್ಟು ಸಿಕ್ಕುವಂತಿರಲಿಲ್ಲ. ಎಲ್ಲೆಲ್ಲೂ 'ಹೌಸ್ ಫುಲ್' ಪಟ. ಟಿಕೆಟ್ ಸಿಕ್ಕದೆ ನಿರಾಶರಾಗಿ ಹಿಂದಿರುಗುತ್ತಿದ್ದ ಜನಗಳ ತಂಡ ತಂಡ. ಅಲ್ಲಲ್ಲಿ ನಾಲ್ಕಾರು ಜನ ಧಡಿಯರು ನಿಂತುಕೊಂಡು ಕಾಳ ಸಂತೆಯ ವ್ಯಾಪಾರವನ್ನೇನೊ ನಡಸುತ್ತಿದ್ದರು. ಒಂದಕ್ಕೆರಡು ಬೇರೆ

ಕೊಟ್ಟು ಅವರ ಟಿಕೆಟ್ ಕೊಂಡು ಸಿನಿಮಾನೋಡುವ ಆಸೆಯೇನೂ ಸಿದ್ಧರಾಮನಿಗಿರಲಿಲ್ಲ. ಆರೂವರೆ ಗಂಟೆಯ ಆಟಕ್ಕೆ ಹೋಗಬೇಕೆಂದರೆ ಅದೂ ಅಸಾಧ್ಯವೆ. ಎಂಟು ಗಂಟೆಯ ರೈಲಿಗೆ ಮನೆಗೆ ತೆರಳಬೇಕು. ಅದನ್ನು ಬಿಟ್ಟರೆ ಬೇರೆ ರೈಲಿಲ್ಲ. ಬೆಂಗಳೂರಿನಲ್ಲಿ ಪರಿಚಿತರ ಮನೆಗಳೂ ಇಲ್ಲ. ರಾತ್ರಿಯನ್ನೆಲ್ಲಿ ಕಳೆಯುವುದು ಈಕೆಯನ್ನು ಕಟ್ಟಿಕೊಂಡು ? ನಿಲ್ದಾಣದ ವೇಟಿಂಗ್‌ರೂಮಿನಲ್ಲಿ ?—ಛೆ! ಅದೆಲ್ಲ ತೊಂದರೆಯೇತಕ್ಕಂತೆ ? ಈಗಲೆ ಹೊರಡುವುದೇ ವಾಸಿ—ಎಂದುಕೊಂಡು—

'ನನಗಂತೂ ಟಿಕೀಟು ಸಿಕ್ಕೋಹಾಗಿಲ್ಲ. ನೀನೊಬ್ಬಳೇ ಹೋಗಿ ನೋಡಿ ಬರ್ತೀಯಾ ಗಿರಿಜಾ ? ನಾನು ಥೇಟರ್ ಹೊರಗಡೆ ಕಾದಿರ್ತೀನೆ' ಎಂದ.

ಅವಳು ಒಪ್ಪಲಿಲ್ಲ. 'ನಿಮ್ಮನ್ನ ಬಿಟ್ಟು ನಾನೊಬ್ಬಳೇ ನೋಡೋದೇ! ಏನೂ ಬೇಡ. ಕಾಡಗೋಡಿಗೆ ಹೋಗೋಣ ನಡೀರಿ' ಎಂದಳು.

ಅಷ್ಟರಲ್ಲಿ ಹತ್ತಿರದಲ್ಲೆ ಯಾರದೊ ಆರ್ತ ನಾದ ಕೇಳಿ ಬಂದಿತು. ಅತ್ತ ಹೊರಳಿದರು. ಬಡ ಕೂಲಿಗಾರನೊಬ್ಬನನ್ನು ನಾಲ್ಕು ಜನ ಸೇರಿ ಹೊಡೆಯುತ್ತಿದ್ದುದು ಕಾಣಿಸಿತು. 'ಇಲ್ಲೆ ನಿಂತಿರು ಗಿರಿಜಾ ! ಪಾಪ ! ಅವನನ್ಯಾಕೆ ಹೊಡೆಯುತ್ತಿದಾರೊ ನೋಡ್ತೀನೆ' ಎಂದು ಹೇಳಿ ಸಿದ್ಧರಾಮ ಗಲಾಟೆ ನಡೆದಿದ್ದಲ್ಲಿಗೆ ಹೋದ.

ಆ ನಾಲ್ಕು ಜನ ಧಡಿಯರಿಂದ ಕೂಲಿಕಾರನನ್ನು ಬಿಡಿಸಿಕೊಂಡು 'ಏನು, ಏನಾಯಿತು ? ಯಾಕೆ ಹೊಡೆದಾಟ ?' ಎಂದ.

ಆ ಬಡಪಾಯಿ ಅಳುತ್ತಳುತ್ತ ಹೇಳಿದ.

'ಐದಾಣೆಯ ಒಂದು ಟಿಕೆಟ್ ಎಂಟಾಣೆಗೆ ಕೊಡ್ತೀನೆ ಅಂದರು ನನ್ನ ಹತ್ತಿರ ಇದ್ದದ್ದೂ ಅಷ್ಟೆ. ಕೊಟ್ಟು ಬಿಟ್ಟೆ. ಈಗ ಟಿಕೆಟ್ಟೂ ಕೊಡಲೊಬ್ಬರು. ದುಡ್ಡಾದರೂ ವಾಪಸುಮಾಡಿ ಅಂದ್ರೆ ಅದನ್ನೂ ಕೊಡಲೊಲ್ಲರು.'

ಕಾಳಸಂತೆಯ ಆ ಕಳ್ಳರನ್ನು ಕ್ರುದ್ಧ ದೃಷ್ಟಿಯಿಂದ ನಿಟ್ಟಿಸುತ್ತ ಸಿದ ರಾಮ 'ಹೌದೇನು ? ಈತ ಹೇಳೋದು ನಿಜವೇನು ?' ಎಂದ.

'ಅರೆ! ನೀನೆಲ್ಲಿಯೋನೋ ಬಂದೆ ಮಹಾರಾಜ! ನಿನ್ನ ಹಾದಿ ಹಿಡಿದು ಹೋಗು!' ಎಂದು ಉಪಹಾಸದ ದನಿಯಲ್ಲಿ ಉತ್ತರ ಬಂತು.

'ಒಳ್ಳೆ ಮಾತಿನಿಂದ ಇವನ ಹಣ ಇವನಿಗೆ ವಾಪಸುಕೊಡ್ತೀರೋ, ಇಲ್ಲ ಪೋಲೀಸರಿಗೆ ತಿಳಿಸಬೇಕೋ?' ಎಂದ ಸಿದ್ಧರಾಮು ಇನ್ನೂ ಕ್ರುದ್ಧನಾಗಿ.

ಆ ನಾಲ್ಕು ಜನರೂ ಗಹಗಹಿಸಿ ನಕ್ಕುಬಿಟ್ಟು 'ಪೋಲೀಸರಿಗೆ ತಿಳಿಸು ತಾನಂತೆ ಪೋಲೀಸರಿಗೆ! ನಮ್ಮ ಮಾವನ ಮಕ್ಕಳು ಕಣೋ ಅವರು! ನಿನ್ನನ್ನೆ ಬೇಕಾದರೆ ಸ್ಟೇಶನ್ನಿಗೆ ಸಾಗಿಸುತ್ತಾರೆ—ನಾವು ಒಂದು ಮಾತು ಹೇಳಿದ್ರೆ. ಸುಮ್ಮನೆ ಹೋಗೋ ನಿನ್ನ ಹಾದಿ ಹಿಡಿದು' ಎಂದರು.

ಸಿದ್ಧರಾಮುನಿಗೆ ವಿಪರೀತ ಕೋಪವೇರಿತು. ಮುಷ್ಟಿಯನ್ನು ಮುಂದೆ ಮಾಡಿ ಗರ್ಜಿಸಿದ. 'ಕೊಡ್ತೀರೋ ಇಲ್ಲವೋ ಇವನ ಎಂಟಾಣೆ?'

ಸರಿ. ಮತ್ತೆ ಹೊಡೆದಾಟಕ್ಕಾರಂಭವಾಯಿತು. ನಾಲ್ಕು ಜನ ಪೈಲ್ವಾನರ ಮುಂದೆ ಒಬ್ಬನ ಆಟ ಎಷ್ಟು ನಡೆದೀತು? ಮುಖಕ್ಕೆ, ಮೂಗಿಗೆ, ತಲೆಗೆ, ಎದೆಗೆ—ದೇಹದ ಎಲ್ಲ ಕಡೆಗಳಲ್ಲೂ ಬಲವಾದ ಏಟು ಬಿತ್ತು ಸಿದ್ಧರಾಮುನಿಗೆ. ಹಣೆಯೊಡೆದು ರಕ್ತ ಬಳಬಳನೆ ಸುರಿಯತೊಡಗಿತು. ನೋಡುತ್ತ ನಿಂತಿದ್ದ ಗಿರಿಜೆ ಗಾಬರಿಗೊಂಡು ಕೂಗತೊಡಗಿದಳು. ಪೋಲೀಸರು ಬಂದರು. ಹೊಡೆದಾಟವನ್ನು ನಿಲ್ಲಿಸಿ, ಸಿದ್ಧರಾಮುನನ್ನು ಬಿಡಿಸಿ, ಆ ಪೈಲ್ವಾನರನ್ನು ಬೈದಹಾಗೆ ಮಾಡಿ ಹೊರಟುಹೋದರು. ಆ ಕೂಲಿಯವನ ಹಣವೂ ಸಿಕ್ಕಲಿಲ್ಲ. ಸಿದ್ಧರಾಮುನ ಪ್ರತಿಭಟನೆಯಿಂದ ಯಾವ ಪ್ರಯೋಜನವೂ ಆಗಲಿಲ್ಲ.

ಕೈವಸ್ತ್ರದಿಂದ ಹಣೆ ಕಟ್ಟಿಕೊಂಡು ಪತ್ನಿಯ ಕೈಹಿಡಿದುಕೊಂಡು ನಿಲ್ದಾಣಕ್ಕೆ ಹೊರಟ ಸಿದ್ಧರಾಮು. ಮೆಜಸ್ಟಿಕ್ ಹಿಂದೆಹಾಕಿ ಧರ್ಮಾಂಬುಧಿ ಕೆರೆಯಲ್ಲಿ ಹಾದು ಬರುತ್ತಿದ್ದ ಹಾಗೆ ಆತ ಕಂಪಿಸುವ ಕಂಠದಿಂದ ಉದ್ಗಾರ ತೆಗೆದ.

'ಇಂದಿನ ನಮ್ಮ ಸಿನಿಮಾದಲ್ಲಿ ನಾಲ್ಕನೇ ದೃಶ್ಯ ಇದು ಗಿರಿಜಾ! ಇದಕ್ಕೆ ಕೆ ,ಮಾಕ್ಸ್ ಅಂತಾರೆ........'

ರೈಲಿನ ಸಮಯವಾಗುವವರೆಗೂ ಕೆರೆಯ ಅಂಗಳಲ್ಲಿ ಕುಳಿತಿದ್ದು ನಿಲ್ದಾಣಕ್ಕೆ ಬಂದರು. ಟಿಕೆಟ್ ತೆಗೆಯಿಸುವುದಕ್ಕಾಗಿ ಜೇಬಿಗೆ ಕೈಹಾಕಿದ ಸಿದ್ಧರಾಮು. ಹಣದ ಸುಳಿವೇ ಇರಲಿಲ್ಲ! ಇಳಿದ ಮುಖದಿಂದ ಪತ್ನಿ ನಿಂತಲ್ಲಿಗೆ ಮರಳಿದ.

'ತೆಗಿಸಿದಿರಾ ಟಿಕೆಟ್ಟನ್ನ ?'

'ಇಲ್ಲ.'

'ಯಾಕೆ ?'

'ದುಡ್ಡು ಎಲ್ಲೋ ಕಳೆದುಹೋಯಿತು. ಬಹಳ ನೂಡಿ ಹೊಡೆದಾಟ ನಡೆದಿದ್ದಾಗ ಆ ಪೋಕರಿಗಳಲ್ಲಿ ಯಾರೋ ಹಾರಿಸಿರಬೇಕು.'

'ಇನ್ನೇನು ಮಾಡೋದು ?'

'ಮಾಡೋದೇನು ಬಂತು ? ಉಪವಾಸ ಮಾಡೋದು. ಬೆಳಗ್ಗೆ ಬೇಗನೆ ಎದ್ದು ಹದಿನೈದು ಮೈಲು ನಡೆದುಕೊಂಡು ಹೋಗೋದು.'

'ರಾತ್ರಿ ಮಲಗುವುದಾದರೂ ಎಲ್ಲಿ ?'

'ಇದೆಯಲ್ಲ ಅನಾಥರ ಧರ್ಮಛತ್ರ—ಆ ಚಿಕ್ಕಲಾಲ್‌ಬಾಗ್....'

'ಅಲ್ಲಿ ? ನಾವು ?'

'ಯಾಕೆ ಹೀಗೆ ದಿಗಿಲುಗೊಳ್ತೀ ? ನಮ್ಮಂತೇ ಎಷ್ಟೋ ಜನ ಮಲಗೋದಿಲ್ಲವೆ ? ಹೆಂಗಸರು, ಗಂಡಸರು ಎಲ್ಲಾ ? ದುಡ್ಡಿದ್ದವರೇನೊ ಹೋಟೆಲುಗಳಿಗೆ ಹೋಗುತ್ತಾರೆ. ದುಡ್ಡಿಲ್ಲದವರೆಲ್ಲ ಇನ್ನೆಲ್ಲಿಗೆ ಹೋಗೋದು ? ಚಿಕ್ಕಲಾಲ್‌ಬಾಗಿಗೇ. ಹೆದರಿಕೆಯೇನು ನಿನಗೆ ?'

'ಹೆದರಿಕೆಯೇನು ? ನೀವು ಜೊತೆಗಿದ್ದಾಗ ?'

'ಸರಿ, ಹಾಗಾದರೆ ಬಾ !'

ಮತ್ತೆ ನಿಲ್ದಾಣವನ್ನು ಬಿಟ್ಟು ಹೊರಟರು. ಮೆಟ್ಟಲು ಇಳಿಯುತ್ತಿದ್ದ ಹಾಗೆ ಎದುರಿನಲ್ಲಿ ದೇವಮ್ಮನೂ ಅವಳ ಪತಿಯೂ ಕಾಣಿಸಿಕೊಂಡರು.

'ಸಿನಿಮಾ ನೋಡಿದ್ದಾಯ್ತೇನು ಗಿರಿಜಮ್ಮ ?' ದೇವಮ್ಮನೇ ಮಾತನಾಡಿಸಿದಳು.

ಆವಳೊಂದಿಗೆ ಮಾತನಾಡುವ ಮನಃಸ್ಥಿತಿಯಲ್ಲಿರದಿದ್ದರೂ ಸಹ ಗಿರಿಜಾ ಉತ್ತರವಿತ್ತಳು.

'ಹೂಂ. ನೋಡಿದೆವು !'

'ಊರಿಗೆ ಬರೋಲ್ಲವೇನು ಮತ್ತೆ ? ಎಲ್ಲಿ ಹಿಂದಿರುಗುತ್ತಿದೀರಲ್ಲ ?'

'ಲಾಲ್‌ಬಾಗಿಗೆ ಹೋಗಿ ಬರ್ತೇವೆ. ನೀವು ಹೊರಡಿ.' ಎಂದು ಹೇಳಿ ಗಿರಿಜಾ ಅಲ್ಲಿ ನಿಲ್ಲದೆ ಮುಂದುವರೆದಳು.

'ಲಾಲ್‌ಬಾಗಿಗೆ ! ಅಂತೂ ಮಜಾ ಐತಪ್ಪ ನಿಮ್ಮಿಬ್ಬರದೂ ! ಸಾಗಲಿ ಸಾಗಲಿ !' ಎಂದು ಹಾಸ್ಯಮಾಡಿ ದೇವಮ್ಮ ಗಂಡನ ಕಡೆ ತಿರುಗಿ ನಕ್ಕಳು.

"ನಾವು ಹೋಗೋದು ದೊಡ್ಡ ಲಾಲ್‌ಬಾಗಿಗಲ್ಲ—ಚಿಕ್ಕ ಲಾಲ್ ಬಾಗಿಗೆ—ಇಂದಿನ ನಮ್ಮ ಸಿನಿಮಾದ ಕೊನೆಯ ದೃಶ್ಯಕ್ಕೆ—ಅನ್ನೋದು ಅವಳಿಗೇನು ತಿಳಿದೀತು ಗಿರಿಜಾ ! ಬಾ. ಬೇಗ ಬೇಗ ಹೆಜ್ಜೆಯಿಡು." ಎಂದ ಸಿದ್ಧರಾಮು.

ಗಿರಿಜಾ ಹೆಜ್ಜೆ ಹಾಕತೊಡಗಿದಳು. ಚಿಕ್ಕ ಲಾಲ್‌ಬಾಗಿಗೆ–ಅಲ್ಲ—ನಿಜ ಜೀವನದ ಕಡೆಗೆ !

**ಬೆಂಗಳೂರು** **ಜೂನ್ ೧೯೪೭**

ಜಿ. ಬಿ. ರಾಜ್

೧) ಪ್ರವಾಹದೊಂದಿಗೆ

೨) ತೆರೆದ ಗುಟ್ಟು

೩) ಬಾಡಿದ ಹೂ

# ಪ್ರವಾಹದೊಂದಿಗೆ-

'ಥಫ್....ಥಫ್....ದಫಾರ್ !' ಮಿಂಚಿನ ಬೆನ್ನತ್ತಿ ಬಂದ ಸಿಡಿಲು- ಸುಖದ ಬೆನ್ನತ್ತಿಬಂದ ದುಃಖದಂತೆ !

'ಡುಬ್'- ಮುನಿಸಿಪಾಲಿಟಿ ದೀಪದ ಕಂಬ ಸಿಡಿಲಿಗೆ ತುತ್ತಾಗಿ ಗುಡಿಸಿಲ ಮೇಲೊರಗಿತು-ಯುದ್ಧರಂಗದಲ್ಲಿ ಉರುಳುವ ಹೆಣದ ಹಾಗೆ ! ಮೂರಡಿ ಎತ್ತರ ಕೆಸರಿನ ಪ್ರವಾಹ ತೀವ್ರವಾಗಿ ಹರಿಯುತ್ತಿತ್ತು.

ತೇಲಿ ಹೋಗುತ್ತಿತ್ತು !-ಮರಗಳು, ಗಿಡಗಳು, ಕೊಂಬೆಗಳು-ಇನ್ನೂ ಏನೇನೋ ?

ಗುಡಿಸಲಿನ ಮಧ್ಯೆ ಬಿದುರಿನ ಕಂಬವನ್ನು ತಬ್ಬಿದ್ದ ಕೆಂಪಿಯ ಮೈ ಸಿಡಿಲಿನಿಂದ ತತ್ತರಗುಟ್ಟುತ್ತಿತ್ತು. ಹೊರಗೂ ಒಳಗೂ ಪ್ರವಾಹ ರಭಸದಿಂದ ಹರಿಯುತಿತ್ತು. ಹುಂ ! ತಡೆಯೇನುಂಟು ! ಒಂದು ಗೋಡೆಯೇ ?- ಒಂದು ಮನೆಯೇ !

ನೆನೆದ ಹರಕು ಸೀರೆಯ ಸಂದುಗಳಲ್ಲಿ ಪ್ರವಾಹದ ರೊಚ್ಚು ನೀರು ತೂರಿ ಅವಳ ತೊಡೆಗಳನ್ನು ಅಲುಗಿಸುತಿತ್ತು. ಚಟಚಟ ಬೀಳುತ್ತಿದ್ದ ಮಳೆಯ ಹನಿಗಳು ! ಆಲಿ ಕಲ್ಲುಗಳು ! ಭೋರ್ಗರೆಯುವ ಬಿರುಗಾಳಿ ! ತಗಡು, ಮರ, ಮನೆಗಳನ್ನೇ ತೂರಿಕೊಂಡು ಹೋಗುವ ಬಿರುಗಾಳಿಗೆ ಈ ಕ್ಷುದ್ರ ಜೋಪಡಿ ತಡೆದೀತೆ !

ತೇಲಿಹೋದ ಮಡಕೆಗಳು....ಕದಡಿಹೋದ ರಾಗಿಹಿಟ್ಟು....ಕೆಸರಿನಲ್ಲಿ ಕಲೆತುಹೋದ ರಾಗಿಮುದ್ದೆ....ಕೊಚ್ಚಿಹೋದ ಆ ಹರಕು ಸೀರೆ.... ಮಗುವಿನ ಮೈಗೂ ಸಾಲದ ಆ ಹರಕು ಚಿಂದಿ ! ಆಳವಾದ ಉಸಿರನ್ನು ಗಾಳಿಗೆ ಬೆರಸಿ ಕಂಬಕ್ಕೆ ಹಣೆ ಅಂಟಿಸಿ ನಿಂತಳು ಕೆಂಪಿ. ಚಳಿಯಿಂದ ಮೈ ರೋಮಗಳು ಹಂದಿ ಮುಳ್ಳಿನಂತೆ ಎದ್ದು ನಿಂತಿವೆ. ಹಲ್ಲು ಕಟ ಕಟ ಕುಣಿಯುತ್ತಿವೆ. ತಿರಿಗಟ್ಟಿದ ಅವಳ ಮುಂಗುರುಳು ಗಾಳಿಯಿಂದಾಗಿ ಕಣ್ಣು ಮೂಗುಗಳಿಗೆ ಚಟಚಟನೆ ಚಾಟಿಯಂತೆ ಬೀಸುತ್ತಿವೆ. ಒಂದು ಬಟ್ಟೆಯೋ ? ಒಂದು ಕಂಬಳಿಯೋ ? ಒಂದು ಗೂಡೇ ?— ಅವಳಿಗೆ ಅಳು

ಉಕ್ಕಿಬಂತು. ಬಿಸಿ ಬಿಸಿ ಕಂಬನಿಗಳು ಕೆನ್ನೆಗಿಳಿದು ತಣ್ಣಗಾಗಿ ಪ್ರವಾಹಕ್ಕೆ ಸೇರಿ ಹರಿದುಹೋಯಿತು. ಇನ್ನಾ ವಸ್ತುಗಳನ್ನು ಗಳಿಸಲು ಎಷ್ಟು ಕಾಲ ಬೇಕೊ! ಎಷ್ಟು ಸಾರಿ ಡಬ್ಬಿ ಕುಲುಕಬೇಕೊ! ಗೋಳಿನ ಪಲ್ಲವಿ ಹಾಡಬೇಕೋ! ಮೂರು ದಿನಗಳ ಜಡಿಮಳೆಯಿಂದ ನೆನೆದ ಗೋಡೆಗಳು ಥಸಕ್ಕನೆ ನೆಲಕ್ಕುರುಳಿದವು. ಹೆಂಟೆಗಳ ರಾಶಿಯನ್ನು ಪ್ರವಾಹ ನಿಧಾನವಾಗಿ ಕರಗಿಸುತ್ತಿತ್ತು. ಆಗಾಗ ಮಿಂಚು, ಸಿಡಿಲು! ಇವಳ ಎದೆಯಲ್ಲೋ ವಿಚಾರಗಳ ತಾಕಲಾಟ! 'ಚೀಚಾ' 'ಚೀಚಾ' ಶಬ್ದ ಅವಳ ಹೃದಯ ಗೋಪುರದಲ್ಲಿ ಗಂಟೆ ಬಾರಿಸಿದಂತೆ ಕೇಳುತಿತ್ತು. ತುಟಿಯೂ 'ಚೀಚಾ' ಎಂದಿತು. ಕಾಲುಗಳು ಪ್ರವಾಹಕ್ಕೆ ಅಭಿಮುಖವಾಗಿ ಏನನ್ನೊ ಹುಡುಕುತ್ತಾ ಹೊರಟವು. ಹೃದಯ ತುಡಿಯುತ್ತಿತ್ತು—

'ಜಣ್ ...ಜಣ್ !–ತಾಯಿಯಿಲ್ಲ! ತಂದೆಯಿಲ್ಲ! ಮೂರು ದಿನಗಳಿಂದ ಕೂಳಿಲ್ಲ! ಒಂದು ಬಿಡಿಕಾಸು ದೇವರು!' ಈ ಪಲ್ಲವಿ ಅವಳ ಎದೆಗೂಡಿನಲ್ಲಿ ರುದ್ರವೀಣೆಯಂತೆ ಮಿಡಿಯುತ್ತಿತ್ತು. ನಿಜ! ತಂದೆಯಿಲ್ಲ! ಆದರೆ? ತಾಯಿ ಇದ್ದೂ ಸತ್ತಂತೆ?–ಒಂದು ಹಿಡಿ ಕೂಳಿಗಾಗಿ, ತನ್ನ ಬಾಯಿಂದ ಆ ಕೂಸಿಗೆ ಹೇಳಿಕೊಟ್ಟ ಆ ಪಲ್ಲವಿ! ಮಾರ್ಕೆಟ್, ದೇವಸ್ಥಾನ, ಚಿತ್ರಗೃಹ, ಬಸ್‌ಸ್ಟ್ಯಾಂಡ್, ಇನ್ನೂ ಎಲ್ಲೆಲ್ಲೂ........ಚೀಚನ ಅಸ್ಥಿಪಂಜರ ಗ್ರಾಳಿಯಲ್ಲಿ ಡಬ್ಬಿ ಕುಲುಕುತ್ತಿದ್ದ ಭೀಕರ ಚಿತ್ರ ಅವಳೆದೆಯಲ್ಲಿ ಅಚ್ಚೊತ್ತಿದಂತೆ ಮೂಡಿತು.

ಜೀವನದಲ್ಲಿನ ಘಟನೆಗಳ ಚಿತ್ರಪರಂಪರೆ ಅವಳ ಕಣ್ಣಿಗೆ ಕಟ್ಟಿ ಮಾಯವಾಗುತ್ತಿತ್ತು. ನೆನಪಿನ ಸುರುಳಿ ಬಿಚ್ಚಿಕೊಂಡು ಓಡಿತು.

ಆಗ?-ಹರೆಯದ ಪ್ರಾಯ! ಎಣ್ಣೆ ಗೆಂಪು ಮೈ! ತುಂಬಿ ಬಂದ ಸೌಂದರ್ಯ; ದವಡೆಯಲ್ಲಿ ಉಬ್ಬಿ ಕಾಣುವ ಅಡಿಕೆಲೆ ತಾಂಬೂಲ! ರಂಗಿನ ತುಟಿಗಳು! ಅರಿಸಿನದಿಂದಾದ ಹೊಂಗೆನ್ನೆಗಳು! ಹುಬ್ಬಿನ ನಡುವೆ ರೂಪಾಯಗಲದ ಕುಂಕುಮ! ತಲೆಗೆ ತಿರುಮುಸುಕು ಹಾಕಿ ಕಂಕುಳಲ್ಲಿ ಪೊರಕೆ ಇರಿಸಿಕೊಂಡು ಮುಂಜಾನೆ ಗುಡಿಸಲು ಬಿಟ್ಟವಳು ಮತ್ತೆ ಸಂಜೆಗೆ –ಹೆಣದಂತೆ ದುಡಿದು–ಊರಿನ ಕಸ ಗುಡಿಸಿ ತರುತಿದ್ದ ಹತ್ತು ರೂಪಾಯಿ; ಹತ್ತೇ ರೂಪಾಯಿ!

—ನಂಜ! ಕೆಂಪಿಯ ನಂಜ!

ಚರಂಡಿಯಿಂದ ಹೊರಗೆ ತೆಗೆದುಹಾಕಿದ ಕಪ್ಪಾದ ಹೊಲಸು ರಾಶಿಯ ಪಕ್ಕದಲ್ಲಿನ ಗೋಣಿಚೀಲದ ಮೇಲೆ ನಂಜನ ದೇಹ ಬೆಳಗಿನಿಂದ ಸಂಜೆವರೆಗೆ! ಅವನ ಬೆನ್ನಿಗಾಧಾರವಾಗಿ ಕಸದ ತೊಟ್ಟಿ, ಮುಂದೆ ಜೂತು ಚರ್ಮಗಳ ರಾಶಿ, ಪಕ್ಕದಲ್ಲಿ ಮಹಾನದಿಯಂತೆ ನಿಂತು ನಿಂತು ಹರಿಯುತ್ತಿದ್ದ ಚರಂಡಿ; ತಲೆನೋವು ಬರಿಸುವ ಹೊಲಸು ವಾಸನೆ! ಹೆಬ್ಬೆರಳಿಗೆ ದಾರ ತಗುಲಿಸಿಕೊಂಡು ಎಡಗೈ ಚಾಚಿ ಹಿಡಿದು ದಾರಕ್ಕೆ ಮೇಣ ಸವರುತ್ತಿದ್ದ ಅವನ ಬಲಗೈ! ಗಳಿಗೆಗೊಂದು ಬಾರಿ ಚರಂಡಿಗೆ ತಂಬುಲದ ಪಿಚಕಾರಿ ಹೊಡೆಯುತ್ತಿದ್ದ ಬಾಯಿ! ಕ್ಷಣಕ್ಕೊಂದು ಬಾರಿ 'ಟಪ್' ಎಂದು ಸೊಳ್ಳೆ ಹೊಡೆಯುತ್ತಿದ್ದ ಕೈ! ಕಾಯಿಲೆ ಹೆಗ್ಗಣದಂತೆ ಕಾಣುವ ಮುಖದಲ್ಲಿ ವಿರಳವಿರಳವಾಗಿ ಬೆಳೆದ ಗಡ್ಡ ಮೀಸೆ! ನಡುನೆತ್ತಿಯಲ್ಲಿ ಹಾರಾಡುತ್ತಿದ್ದ ಹತ್ತಾರು ಕೂದಲು. ಕೆಂಪಿ ಅವನನ್ನು ಪ್ರೀತಿಸುತ್ತಿದ್ದಳು! ಮದುವೆಯಾಗಿದ್ದಳು!

ಅಗ್ನಿಸಾಕ್ಷಿ ಮದುವೆಯೇ? ಸಾಲಂಕೃತ ಕನ್ಯಾದಾನವೇ? ಪುರೋಹಿತರ ಬಾಯ ವ್ಯಾಯಾಮವೇ? ಸುಮಂಗಲಿಯರ ಸ್ತೋತ್ರವೇ? ಹೋಳಿಗೆ ತುಪ್ಪದ ಬೀಗರೂಟವೇ?—ಇಲ್ಲ—ಹರಕುಸೀರೆಯಲ್ಲಿ ಸುತ್ತಿದ ಕೆಂಪಿಯ ಹೃದಯ ಹಳೆಯ ಗೋಣಿಚೀಲದಲ್ಲಿದ್ದ ನಂಜನ ಎದೆಗೆ ಬೆರೆಯಿತು. 'ನಂಜ' ಎಂದು ಕೆಂಪಿಯೂ, 'ಕೆಂಪಿ' ಎಂದು ನಂಜನೂ ಕೈಮೇಲೆ 'ಅಚ್ಚೆ' ಹಾಕಿಸಿಕೊಂಡಿದ್ದರು. ಅದಿನ್ನೂ ಕೆಂಪಿಯ ಕೈಯಲ್ಲಿ ವನಾಸನೆ ನಿಂತಿತ್ತು. ಹೃದಯದಲ್ಲಿ ಅಳಿಯದೆ ಕುಳಿತಿತ್ತು! ಪರಸ್ಪರ ಬದಲಾಯಿಸಿಕೊಂಡ ಆ ಕುಡಿನೋಟ! ಅದೆಲ್ಲಾ ಹಠಾತ್ತಾಗಿ ನೆನಪಿಗೆ ಬಂತು.

'ಫಳ್' ಎಂದು ಮಿಂಚಿತು. ಅವಳ ಮುಖ ಮಿಂಚಿನ ಬೆಳಕಿನಲ್ಲಿ ದೆವ್ವದ ಮುಖದಂತೆ ಕಾಣಿಸಿತು.

—'ಖಹ್... ಖಹ್' ಎಂದು ಕೆಮ್ಮುತ್ತಾ ನಂಜ ಹಾಸಿಗೆ ಹಿಡಿದಿದ್ದ. ಅವನಾಗ ನರಪೇತಲ ನಂಜ!—ಆರು ತಿಂಗಳಿನಿಂದ ದಿನಬಿಟ್ಟು ದಿನ ಕಾಯುವ ಮಲೇರಿಯಾ ಜ್ವರ. ಮೋರಿಯಲ್ಲಿನ ಸೊಳ್ಳೆಗಳು ಈ

ರೋಗವನ್ನು ಅನುಗ್ರಹಿಸಿದ್ದವು. ಜೊತೆಗೆ ನಾಯಿಕೆಮ್ಮುಲು ಬೇರೆ ಗಂಟಲಿನ ನೆಂಟನಾಗಿತ್ತು. ರಾತ್ರಿಯೆಲ್ಲಾ ಒಂದೇಸಮನೆ 'ಟ್ರೊಂಯ್... ಟ್ರೊಂಯ್' !

ನಂಜನ ಸಂಪಾದನೆ ನಿಂತಿತ್ತು. ಕೆಂಪಿಯ ಹತ್ತು ರೂಪಾಯಿ ಸಂಸಾರ ತಳ್ಳುತಿತ್ತು ! ಮುಗ್ಗಟ್ಟಿನ ಸಂಸಾರ ! ವಾರಕ್ಕೆರಡು ಮೂರು ಏಕಾದಶಿ ! ಆಸ್ಪತ್ರೆಯಲ್ಲಿ ಹಂಚುವ ಔಷಧಿಯನ್ನು ತಂದುಕೊಟ್ಟಳು. ಹೇಗೋ ಆರೈಕೆ ಮಾಡಿದಳು. ಒಂತು ! ಅವಳು ಬರಬಾರದೆಂದು ಎಣಿಸುತಿದ್ದ ದಿನ ಬಂತು ! ಕೆಂಪಿಯ ಕರುಳನ್ನು ಕೊಯ್ಯುವ ದಿನ ಬಂತು !

ಒಂದು ಸಂಜೆ ! ನಂಜನಿಗೆ ವಿಪರೀತ ಜ್ವರ. ಆವರಟ್ಟೆಯಲ್ಲಿ ಜನ ಹುಳುಗಳಂತೆ ಸತ್ತಿದ್ದರು. ಅವಳೋ ತಾಯ್ತನದ ತಯಾರಿಕೆಯಲ್ಲಿದ್ದಾಳೆ—ಏಳು ತಿಂಗಳು. 'ಅಳಬೇಡ ಕೆಂಪಿ, ಧೈರ್ಯವಾಗಿರು, ನಿನ್ನ ಹೊಟ್ಟೆಯಲ್ಲಿ ನನ್ನ ಕುರುಹಿದೆ !' ಎಂದು ಹೇಳುವ ನಂಜನ ತುಟಿ ದುಃಖ ಸೂಸುತ್ತಿತ್ತು. ಕೆಂಪಿಗೆ ಉತ್ತರ ಗಂಟಲಿನಲ್ಲೇ ಸತ್ತುಹೋಯಿತು. ಕಣ್ಣಿನಲ್ಲಿ ದುಃಖದ ಹನಿಗಳು ಕುಣಿಯುತ್ತಿದ್ದವು. ಅವಳ ಮುಂಗುರುಳು ಅವನ ಭುಜಕ್ಕೆ ತಗುಲಿ ಅವನ ಕೆನ್ನೆಯ ಬಳಿ ಸುಳಿದಾಡುತ್ತಿತ್ತು. ಅವನ ಸುಡುತಿದ್ದ ತೋಳು ಅವಳ ಸುತ್ತ ಇತ್ತು. ಅವನ ಭುಜ ಅವಳ ಕೆನ್ನೆಯ ಕೆಳಗಿತ್ತು. ಅವಳು ನಡುಗಿದಳು. ಕೊನೆಯ ಮುತ್ತಿಗಾಗಿ ತುಟಿಯಾಸಿಸಿದಳು. ತುಟಿಗಳು ಒಟ್ಟುಗೂಡಿದವು. ಉಸಿರು ಬಿಸಿಯಾಗಿ, ಬಿರುಸಾಗಿ ಈಚೆಗೆ ಬಂದಿತು.

ಶ್ವಾಸಗತಿ ನಿಧಾನವಾಗುತ್ತಿತ್ತು ! ಮಂದವಾಗುತ್ತಿತ್ತು ! ಆ ಆತ್ಮ ಕೆಂಪಿಯ ಕುಂಕುಮ ಕಿತ್ತುಕೊಂಡು ತೆಳುಗಾಳಿಯಲ್ಲಿ ಅದೃಶ್ಯವಾಯಿತು.

ನಂಜನಿಲ್ಲದ ಕೆಂಪಿ ! ಹೃದಯವಿಲ್ಲದ ಕೆಂಪಿ ! ಕಠೋರ ಮಾನಸಿಕ ಯಾತನೆಗೆ ಗುರಿಯಾದಳು. ತುತ್ತಿನ ಚೀಲದ ಅಗ್ನಿಜ್ವಾಲೆಯನ್ನು ಶಮನಗೊಳಿಸಲು ಹಗಲು ರಾತ್ರಿ ದೇಹ ತೇದಳು. ಕೂಲಿನಾಲಿಗಾಗಿ ತಿರಿದಳು ! ಎಷ್ಟು ತುಂಬಿದರೂ ಸಾಲದು ಈ ಚೀಲಕ್ಕೆ ! ಎಂಜಲೆಲೆಯೂ ಸಿಕ್ಕದ ದಿನಗಳೆಷ್ಟು ಆಗಿ ಹೋಗಿಲ್ಲ ಅವಳ ಜೀವನದಲ್ಲಿ !

'ತಾಯ್ತನ....ಹೆರಿಗೆ....ಕೂಸು' ಒಂದೊಂದೂ ದಾಟಲಾಗದ ಘಟ್ಟವಾಗಿತ್ತು, ವಿಷನಿಮಿಷಗಳಾಗಿತ್ತು. ನಂಜನ ಕೊನೆಯ ಮಾತು ಅವಳ ಅಂತರಾಳದಲ್ಲಿ ಪ್ರತಿಧ್ವನಿಸುತಿತ್ತು. ಸರಸದಿಂದ ಕೂಡಿದ ಸಂಸಾರ ವಿರಸವಾಗಿತ್ತು. ಅಂತೂ ಕೆಂಪಿಯ ಹೊಟ್ಟೆಯಲ್ಲಿದ್ದ 'ಚೀಚ' ಜಗತ್ತಿಗೆ ಮುಖ ತೋರಿಸಿದ.

ಐದು ವರ್ಷಗಳು ತೇಲಿಹೋದವು! ಎಂತೋ ಹೇಗೋ ಕೆಂಪಿಗೇ ತಿಳಿಯದು. 'ಚೀಚ' ಈಗ ತಾಯಿಗೆ ನೆರವಾಗಿದ್ದಾನೆ. ಉಜ್ಜಿದರೆ ಪುಡಿಪುಡಿಯಾಗಿ ಕೊಳೆ ಉದುರುವ ಮೈ! ಧೂಳಿನಿಂದ ಕೂಡಿ ಸಿಕ್ಕುಸಿಕ್ಕಾದ ಕೆಂಗೂದಲು, ಮೂಗಿನ ಕೆಳಭಾಗದಲ್ಲಿ ಹೆಪ್ಪುಗಟ್ಟಿದ ಸಿಂಬಳ! ಕಣ್ಣು ಕುಣಿಕೆಯಲ್ಲಿ 'ಪಿರಮಿಡ್ಡು'ಗಳಂತೆ ಕೂತ ಗೀಜು! ಹೊಲಸು ತುಂಬಿದ ಹಳದೀ ಹಲ್ಲು! ಮೊಳಕಾಲವರೆಗೂ ಇರುವ ನೂರಾರು ತೂತುಳ್ಳ ಅಂಗಿ! ಕೈಲೊಂದು ಒಡಕು ಡಬ್ಬಿ!

'ಜಣ್....ಜಣ್....ಕಾಸು ಬುದ್ಧಿ'—ಅವಳ ಕರುಳಿನ ಕೂಸು ಆತ!

ಎಲ್ಲಿದ್ದಾನೋ?—ಏನು ಮಾಡುತ್ತಿದ್ದಾನೋ?

* * * *

ಆಕಾಶ ಬೆಳ್ಳಗಾಗಿತ್ತು. ಮೈನೆಂದಿದ್ದ ಕಾಗೆ ಗುಬ್ಬಚ್ಚಿಗಳು ವಿದ್ಯುತ್ ತಂತಿಯಮೇಲೆ ಕೂತು ಪಟಪಟ ರೆಕ್ಕೆಬಡಿಯುತ್ತ ಮೈ ಆರಿಸುತ್ತಿದ್ದವು. 'ಕರ್ ಕೊರ್' ಎಂದು ಸಂಗೀತ ಹಚ್ಚಿದ್ದವು.

ಮೋರಿಗಳಲ್ಲಿ ನೀರು ತುಂಬಿ ರಸ್ತೆಯಲ್ಲಿ ಮೂರು ನಾಲ್ಕಡಿ ಮೇಲೆ ನುಗ್ಗುತ್ತಿತ್ತು. ಬರುಬರುತ್ತಾ ರಭಸ ಹೆಚ್ಚುತ್ತಿತ್ತು. ಸಣ್ಣಗೆ ಹನಿಯುತ್ತಿದ್ದ ಮಳೆ ಹನಿಗಳು, ರೊಚ್ಚು ನೀರಿನಲ್ಲಿ ಬಿದ್ದು 'ಚಳ್ ಚಳ್' ಎಂದು ಗುಳ್ಳೆ ಏಳಿಸುತ್ತಿದ್ದವು.

ತುಂಬಿ ಬಂತು! ಮೇಲಿಂದ ಬಂತು! ಆನೆಯ ಗಾತ್ರದಲ್ಲಿ ಜಗತ್ತನ್ನೆ ಕಬಳಿಸುವ ಪ್ರವಾಹದಂತೆ, 'ಧರ್ಮಾಂಬುದಿ' ಕೆರೆಯ ನೀರೆಲ್ಲಾ ಅಧರ್ಮಕ್ಕೆ ಕೈಹಾಕಿತು.

ಅಬ್ಬಾ! ಭೋರ್ಗರೆಯುವ ಆ ಪ್ರವಾಹ ಜನರ ಹೃದಯವನ್ನು ಥಡಥಡಿಸುತಿತ್ತು.

ಓಡುತಿತ್ತು ಐದು ವರ್ಷದ ಮಗುವೊಂದು ! ಕೈಲಿ ಭಿಕ್ಷೆಯ ಡಬ್ಬಿ ! ಓಡಿಓಡಿ ದಣಿದಿದ್ದನು, ಏದುತ್ತಿದ್ದನು. ಕಾಲು ಸೋತು ಹೋಗಿದ್ದವು. 'ಲೊಪ್' 'ಲೊಪ್' ಎಂದು ಕಾಲುಗಳನ್ನು ಎತ್ತಿಹಾಕುತ್ತಾ ಓಡುತ್ತಿದ್ದನು. 'ಪೊಂವ್....ಪೊಂವ್ ಚರ್sss' ಎಂದು ಇಕ್ಕೆಲಗಳಲ್ಲಿ ರೊಜ್ಜನ್ನು ಹಾರಿಸುತ್ತಾ ಒಂದು ಲಾರಿ ಬರುತಿತ್ತು. ಲಾರಿಗೆ ದಾರಿಬಿಟ್ಟು ಹುಡುಗ ಪಕ್ಕಕ್ಕೆ ಹೋದ. 'ಲೊಡಪ್' ಎಂದಿತು. ನೀರು ಸುರುಳಿಯಾಡಿತು ! ಬಹಳ ಹೊತ್ತಿನವರೆಗೂ ಹುಡುಗ ಕಾಣಲಿಲ್ಲ ! ಡಬ್ಬಿ ಮಾತ್ರ ಮೇಲೆ ಬಂದು ತನ್ನ ಪಾಡಿಗೆ ತಾನು ಹರಿಯುತ್ತಿದ್ದ ಪ್ರವಾಹದಲ್ಲಿ ತೇಲಿಹೋಯಿತು. ಆ ಜಾಗದಲ್ಲಿ ಮೋರಿಗೆ ಮೇಲುಗಲ್ಲಿರಲಿಲ್ಲವೆಂದು ಅನೇಕರು ಕೂಗಿದರು.

* * * *

ಮಾರನೆಯ ದಿನ ಮಳೆ ನಿಂತಿತ್ತು. ಸೂರ್ಯ ಕಳಕಳಿಸುತ್ತಿದ್ದ. ತಂಗಾಳಿ ಮರದ ಟೊಂಗೆಗಳಿಂದ ಸುಳಿದುಕೊಂಡು ಬೀಸುತಿತ್ತು. ಮರದೆಲೆಗಳು, ಹೂ, ಮೊಗ್ಗು ಎಲ್ಲವೂ ಗಾಳಿಗೆ ವ್ಯತಿರಿಕ್ತವಾಗಿ ತಲೆದೂಗುತ್ತಿದ್ದವು.

ಕೆಸರಿನ ಮೇಲೆ ಚಿಕ್ಕ ಹುಡುಗನೊಬ್ಬನ ಶವ ಬಿದ್ದುಕೊಂಡಿತ್ತು.

—ಸುದ್ದಿ ತಿಳಿದು ಕೆಂಪಿ ಧಾವಿಸುತ್ತ ಬಂದಳು. ತನ್ನ ಮಗು ! ತನ್ನ ಕಂದ ! ತನ್ನ ಚೀಚ ! ದೇವರೇ, ಅವನಿಗೇನಾದರೂ ಆಗಿರಲಾರದಷ್ಟೆ?—

ಆ ದೇವರಿಗೆ ದಯೆಯಿರಲಿಲ್ಲ ! ಆ ಶವ ಇನ್ನಾರದೂ ಆಗಿರಲಿಲ್ಲ. ಚೀಚನದೇ ಆಗಿತ್ತು ! ಹಾರಿ ಬಂದು ಕೆಂಪಿ ಅವನ ತಲೆಯನ್ನು ತೊಡೆಯ ಮೇಲೆಳೆದುಕೊಂಡಳು. ಅವನ ಕೆನ್ನೆಗೆ ಕೆನ್ನೆ ಇಟ್ಟಳು. ಅವಳ ಕಣ್ಣಿನಲ್ಲಿ ಕುಣಿಯುತ್ತಿದ್ದ ದುಃಖದ ಹನಿಗಳು ಅವನ ಮುಖದ ಮೇಲೆ ಮುಗ್ಗುರಿಸಿ ಬಿದ್ದವು. 'ಚೀಚಾ' ಎಂದಳು. ಕಣ್ಣುಗಳಲ್ಲಿ ಚಿಲ್ಲನೆ ನೀರೂರಿ ಕಣ್ಣು ಕಾಣದಂತಾಯಿತು.

ಎಡಗೈ ನೋಡಿಕೊಂಡಳು. 'ನಂಜ'ನ ಕೆಳಗೆ 'ಚೀಚ' ಎಂದು ಹಾಕಿಸಿಕೊಂಡಿದ್ದ ಅಚ್ಚೆ ನೋಡಿದಳು. ಯಾರು ಕೂಗಿದರೂ, ಯಾರು ಏನಂದರೂ ಅವಳಿಗೆ ಕೇಳುತ್ತಿರಲಿಲ್ಲ. ನಾಡಿಗಳಲ್ಲಿ ಗತಿ ಕುಂದುತಿತ್ತು ಹೃದಯ ಆರ್ಭಟಿಸುತ್ತಿತ್ತು.

ಮೆಲ್ಲನೆ ಎದ್ದು ನಿಂತಳು! 'ಹಾ! ಹಾ! ಹೋ' ಎಂದು ಚೀರಿದಳು. ಕರ್ಕಶವಾದ ಒಂದು ವಿಕಟ ನಗುವನ್ನು ನಕ್ಕಳು. ಅತಿ ಮೃದುವಾಗಿ ಕೂಗಿದಳು 'ಚೀಚಾ' ಎಂದು.

ಚೀಚನನ್ನು ಸೊಂಟಕ್ಕೆ ಎತ್ತಿಕೊಂಡಳು. ಚೀಚನ ಕೈ ಕಾಲುಗಳು ಜೋಲಾಡುತ್ತಿದ್ದವು. ಬಲಗೈಲಿ ಡಬ್ಬಿ ಹಿಡಿದು ಹೊರಟಳು. ಅಳಲಿಲ್ಲ! ಕಣ್ಣೀರು ಸುರಿಸಲಿಲ್ಲ!

'ಜಣ್... ಜಣ್' ಎಂದು ಕೈಕುಲಕುತಿತ್ತು! 'ಸ್ವಾಮೀ, ಕಾಸು ದೇವರು!' ಎಂದು ತುಟಿ ಕೂಗುತಿತ್ತು. ಕಣ್ಣೀರಿನಲ್ಲಿ ಮುಳುಗಿದ್ದ ಗುಡ್ಡೆಗಳು ಏನನ್ನೊ ಯೋಚಿಸುತಿದ್ದವು.

ಮಗನಿಗೆ ಮಣ್ಣುಗಾಣಿಸಲು ದುಡ್ಡು ಕೂಡಿಸುವುದಕ್ಕಾಗಿ ಕೈ ಬಾಯಿ ಕೆಲಸ ಮಾಡುತಿದ್ದವು.

ಸಾಲುಸಾಲಾಗಿ ಜನ ಕೇವಿಯಿಂದ 'ಶಾಂತಿಯಾಗಕ್ಕೆ' ಹೋಗುತ್ತಿದ್ದರು. ಯಾರಿಗೆ ತಿಳಿದೀತು--ಆ ತಾಯ ಎದೆಯಲ್ಲಿನ ಅಶಾಂತಿ ?

---

# ತೆರೆದ ಗುಟ್ಟು !

ಮುಖವನ್ನು ಬೆಳಕಿನ ಕಡೆಗೆ ಹೊರಳಿಸಿ ಕನ್ನಡಿಯಲ್ಲಿ ನೋಡುತ್ತ ತನ್ನ ನೊಣದ ಮೀಸೆಗೆ ಕಪ್ಪು ಬಳಿಯುತ್ತ—

"ಚಂದ್ರ ಬಂದನೇನು ಅಲುಮೇಲು" ಎಂದು ಕೂಗಿದ ಲಿಂಗಣ್ಣ.

"ಬಂದಿದ್ದಾನೆ. ಕೋಣೆಯಲ್ಲಿದ್ದಾನೆ. ಈಗ ತಾನೆ ವಸಂತ ಅವನಿಗೆ ಕಾಫಿ ಕೊಟ್ಟು ಬಂದಳು''....ಎಂದು ಹೇಳಿ ಅಲುಮೇಲು 'ಚಂದ್ರಪ್ಪಾ' ಎಂದು ಕೂಗಿದಳು.

ತೊಟ್ಟಿದ್ದ ಶರಟಿನ ಕೈಗುಂಡಿಗಳನ್ನು ಚಟಕ್ಕನೆ ಒತ್ತಿಕೊಂಡು, "ಬಿಡು, ನಾನೇ ಹೋಗುತ್ತೇನೆ" ಎಂದ ಲಿಂಗಣ್ಣ.

ಉಟ್ಟಿದ್ದ ಫಿನ್ಲೆ ಪಂಚೆಯ ಕಚ್ಚೆಯನ್ನು ಮತ್ತೊಮ್ಮೆ ಎರಡು ಕೈಗಳಿಂದಲೂ ತೀಡಿಕೊಂಡು ಉಣ್ಣೆಯಕೋಟನ್ನು ಹೆಗಲ ಮೇಲೆ ಹಾಕಿಕೊಂಡು 'ಶುಶ್ಶೂ ಽ !' ಎಂದು ಶಿಳ್ಳು ಹಾಕುತ್ತ ಕೋಣೆಯ ಹೊಸ್ತಿಲಿಗೆ ಹೋದವನು ಸರ್ರನೆ ಪುನಃ ಹಿಂದಕ್ಕೆ ಬಂದು ಕನ್ನಡಿಯ ಮುಂದೆ ನಿಂತು ಮಧ್ಯಕ್ಕೆ ಬೈತಲೆ ತೆಗೆದಿದ್ದ ಗುಂಗುರು ಕ್ರಾಪಿನ ಮೇಲೆ ನಯವಾಗಿ ಬಾಚಣಿಗೆ ಆಡಿಸಿ, ಕನ್ನಡಿಯಲ್ಲಿ ಮೂಡಿದ್ದ ತನ್ನ ಪೌಡರು, ಸ್ನೋ ರಂಜಿತ ಮುಖವನ್ನು ನೋಡಿಕೊಂಡು ಬಿಂಕದ ನಗೆ ನಕ್ಕು ಕೋಣೆಯಿಂದ ಹೊರಟ....ನಲವತ್ತು ವರ್ಷ ವಯಸ್ಸಾಗಿದ್ದರೂ ಅವನ ಷೋಕಿಯೇನು!

ಚಂದ್ರನ ಕೋಣೆಯ ಕದ ಓರೆಗೊಳಿಸಿ 'ಚಂದ್ರಾ........ಲೋ ಚಂದ್ರಾ ಽ' ಎಂದು ಕೂಗಿದ.

ಸಂಜೆಯಲ್ಲಿ ಇವನ ಧ್ವನಿ ಕೇಳಿದರೆ ಚಂದ್ರನಿಗೆ ನಾಲಗೆಯಲ್ಲಿ ತೇವವಿಲ್ಲವಾಗುತ್ತದೆ. ಅನೇಕವೇಳೆ ಕುಡಿಯುತ್ತಿದ್ದ ಕಾಫಿಯ ಕೊನೆಯ ಗುಟುಕು ಲೋಟಕ್ಕೇ ಮರಳುತ್ತದೆ. "ಲಿಂಗಣ್ಣನೊಂದಿಗೆ ವಾಕಿಂಗ್‌ಗೆ ಹೋಗುವ ಗ್ರಹಚಾರ ತಪ್ಪಿದರೆ...ಮತ್ತೇನುಬೇಕಾದರೂ ಮಾಡುವೆನಪ್ಪಾ" ಎಂದು ತುಟಿಯಲ್ಲೇ ಗೊಣಗಿಕೊಳ್ಳುತ್ತಾನೆ. ಕೈಯಣ್ಣೆ ಕುಡಿದವನಂತೆ ಮುಖಮಾಡಿಕೊಳ್ಳುತ್ತಾನೆ.

ಆದರೇನು? ಬರಲಾಗುವುದಿಲ್ಲ ಎನ್ನಲಾಗುತ್ತದೆಯೇ?— ತನ್ನ ಹತ್ತಿರ ಸಂಬಂಧಿಕ ಲಿಂಗಣ್ಣ. ಚಿಕ್ಕಪ್ಪನಿಗೆ ಸಮಾನ. ತನ್ನ ಮ್ಯಾಟ್ರಿಕ್ ಪರೀಕ್ಷೆಯಾದ ಮೇಲೆ ಶ್ರಮವಹಿಸಿ ಇಂಟರ್ ಕಾಲೇಜಿನಲ್ಲಿ 'ಲೈಬ್ರರಿಯನ್' ಕೆಲಸ ದೊರಕಿಸಿಕೊಟ್ಟಿದ್ದಾನೆ. ಮದುವೆಯಾಗಿ, ಮನೆಸಿಕ್ಕಿ, ಸಂಸಾರ ಹೂಡುವವರೆಗೂ ಅವನ ಮನೆಯಲ್ಲಿ ಇರಲು ಅನುಕೂಲ ಕಲ್ಪಿಸಿಕೊಟ್ಟಿದ್ದಾನೆ ಈ ಯುದ್ಧಕಾಲದಲ್ಲೂ! ತಾನೇನೋ ಬರುವ ನಲವತ್ತು ರೂಪಾಯಿಗಳಲ್ಲಿ ಇಪ್ಪತ್ತನ್ನು ಊಟದ ವೆಚ್ಚಕ್ಕೆ ಕೊಡುತ್ತಾನೆ. ಆದರೂ ಒಂದು ರೀತಿಯ ದಾಕ್ಷಿಣ್ಯಕ್ಕೆ ಗಂಟುಬಿದ್ದು 'ಬರುವುದಿಲ್ಲ' ಎನ್ನುವುದಕ್ಕೆ ಹಿಂಜರಿಯುತ್ತಾನೆ. ಏರುವ ರೇಗನ್ನು ನುಂಗಿಕೊಂಡು ಹೊರಡಲು ಸಿದ್ಧನಾಗುತ್ತಾನೆ.

ಒಂದೊಂದು ದಿನ ಚಂದ್ರ ಆಫೀಸಿನಿಂದ ಬಂದವನೇ 'ತಲೆನೋವು' ಎಂದು ಮಲಗಿಬಿಟ್ಟು ತಪ್ಪಿಸಿಕೊಳ್ಳಲು ಯತ್ನಿಸುತ್ತಾನೆ. ಆದರೂ ಬಿಡಬೇಕಲ್ಲ ಲಿಂಗಣ್ಣ. 'ವಾಕ್ ಬೇಡ. ಫಾರ್ಮಸಿಗೆ ಹೋಗಿ ಔಷಧಿ ತೆಗೆದುಕೊಳ್ಳುವಿಯಂತೆ ನಡಿ" ಎನ್ನುತ್ತಾನೆ.' ಎಳೆದುಕೊಂಡು ಹೋಗೇ ತೀರುತ್ತಾನೆ. ಏಳಲಾರದೆ ಎದ್ದು ಲಿಂಗಣ್ಣನ ಹಿಂದೆ ಕಾಲುಹಾಕುತ್ತ 'ವಾಕಿ'ನ ಹೆಸರಿನಲ್ಲಿ ಜನರ ಗುಂಪಿನಲ್ಲಿ ತೂರುತ್ತ ಹೋಗುತ್ತಾನೆ. ಇದೇನು ಈ ಹೊತ್ತಿನದಲ್ಲ. ಒಂದು ವರ್ಷದಿಂದ. 'ಹೌದು! ಆಗಲೇ ಒಂದು ವರ್ಷವಾಗಿ ಹೋಯಿತಲ್ಲ, ನಾನು ಲಿಂಗಣ್ಣನ ಮನೆಯಲ್ಲಿರತೊಡಗಿ' ಎನ್ನುತ್ತಾನೆ.

ರಸ್ತೆಯಲ್ಲಿ ಎಲ್ಲರಂತೆ ಸುಮ್ಮನೆ ಹೋಗುವ ಸ್ವಭಾವ ಲಿಂಗಣ್ಣನದಲ್ಲ. ನಡೆಯುತ್ತಿದ್ದವನು ಒಮ್ಮೆಲೆ ನಿಂತು, 'ಚಂದ್ರಾ' ಎನ್ನುತ್ತಾನೆ. ಚಂದ್ರ ಚಂಡಿಹಿಡಿದ ಮಗುವಿನಂತೆ ಮುಂದೆ ಬಂದು ಒಲ್ಲದ ಮನಸ್ಸಿನಿಂದ ಗೋಣನ್ನೆತ್ತಿ 'ಆ' ಎನ್ನುತ್ತಾನೆ.

'ನೀನು ಹೇಳುವುದು ಗೊತ್ತಿದೆ' ಎಂದು ಪ್ರಾರ್ಥಿಸುವಂತೆ ಕಣ್ಣುಗಳು ಮಿನುಗುತ್ತವೆ. ಆದರೂ ಲಿಂಗಣ್ಣ ಹೇಳಿಯೇ ತೀರುತ್ತಾನೆ.

"ನಾವು ಹೊರಟಾಗ ಕಂಬ ಒರಗಿಕೊಂಡು ನಿಂತಿದ್ದ ಅಲುಮೇಲು ಹೆಗಲ ಮೇಲೆ ತಲೆ ಇಟ್ಟುಕೊಂಡು ನಿಂತಿದ್ದ ವಸಂತಳ ಕಣ್ಣನ್ನು

ನೋಡಿದೆ ಏನು ಚಂದ್ರಾ ? ಆ ನಟ್ಟೆ ನೋಟ !....ಒಂದೆರಡು ಬಾರಿ ನಿನ್ನ ಕಡೆಗೆ ದೃಷ್ಟಿತೂರಿ ಬಲಗಣ್ಣೊಂದನ್ನೇ ಲಘುವಾಗಿ ಮಿಟುಕಿಸಿದ್ದನ್ನು ನೀನು ಗಮನಿಸಲಿಲ್ಲ ? ಬೇಕಾಗಿ ಜಾರಿಬೀಳುವಂತೆ ಮಾಡಿಕೊಂಡಿದ್ದ ಸೆರಗನ್ನು ಸರಿಪಡಿಸಿಕೊಳ್ಳದೆ ಏನೋ ಒಂದು ರೀತಿಯ ಅಂಗ ವಿನ್ಯಾಸ ತೋರಿಸುತ್ತಿದ್ದುದನ್ನು ನೀನು ನೋಡಲಿಲ್ಲ ?'' ಎಂದು ಆರಂಭಿಸುತ್ತಾನೆ.

"ನೀನು ಈ ದಿನ ಬಾತ್‌ರೂಮಿನ ಬಾಗಿಲಬಳಿ ವಸಂತಳೊಂದಿಗೆ ಮಾತನಾಡುತ್ತಿದ್ದುದೇನು" ಎಂದು ಕೇಳುತ್ತಾನೆ. "ಅವಳಿಗೆ ಕತೆ ಕಾದಂಬರಿ ಸಾಕಂತೆ, ಒಳ್ಳೆಯ ಏಕಾಂಕಗಳು ಬೇಕಂತೆ'' ಎಂದು ಉತ್ತರಿಸುತ್ತಾನೆ ಚಂದ್ರ. ಒಂದು ರೀತಿಯ ಗಾಬರಿಯ ದೃಷ್ಟಿಯಿಂದ ಲಿಂಗಣ್ಣ ಹೇಳುತ್ತಾನೆ, ''ಅದಕ್ಕೇ ನೋಡು. ನಾನು ನಿನಗೆ ಹೇಳುವುದು ! 'ನೀನು ಏಕಾಏಕಿ ಬಾತು ರೂಮಿಗೆ ನುಗ್ಗಬೇಡ' ಎಂದು. ಬೇಕಂತಲೇ ಬಾಗಿಲು ಹಾಕಿಕೊಳ್ಳದೆ ಸ್ನಾನಮಾಡುತ್ತಿರುತ್ತಾಳೆ. ನೀನು ಒಳಕ್ಕೆ ಹೋದರೆ . ಬಾತ್ ರೂಮನಾದರೇನು ?....ಎಲ್ಲಾದರೇನು ? ಅವಳಿಗೆ ! ಅಂಥವಳಿಗೆ ! ಅವಳು ನಲ್ಲಿಯಹತ್ತಿರವಿದ್ದರೂ ನೀನು ಹೋಗಕೂಡದು. ಅವಳ ಕಡೆಗೂ ನೋಡಬೇಡ.'' ಎನ್ನುತ್ತಾನೆ.

'ಇವತ್ತು ವಸಂತಳ ಸೀರೆಯ ಬಿಂ... ಗನೋಡಿದೆಯೇನು ?— ಏನೋ ಒಂದು ರೀತಿಯ ಗುರುತು'—ಎನ್ನುತ್ತಾನೆ.

''ಎಚ್ಚರಿಕೆ ! ವಸಂತಳ ಬಗ್ಗೆ ಹುಷಾರಿ ಚಂದ್ರ ! ತುಂಬಾ ಕೆಟ್ಟ ಹೆಂಗಸು. ನಿನ್ನ ಮೇಲೆ ಕಣ್ಣು ಹಾಕಿರುವ ಹಾಗೆ ಕಾಣುತ್ತದೆ. ನಿನ್ನ ಹತ್ತಿರ ಬಹಳವಾಗಿ ಮಾತಾಡುತ್ತಾಳೆ. ನಿನ್ನ ಕೋಣೆಗೆ ಆಗಾಗ 'ಪುಸ್ತಕಗಳಿಗೆ....ಅದಕ್ಕೆ....ಇದಕ್ಕೆ'' ಎಂದು ಬರುತ್ತಾಳೆ. ಅವಳ ಕಡೆ ಮನಸ್ಸು ಕೊಟ್ಟೆಯೋ—ತೀರಿತು ನಿನ್ನ ಆಟ; ನಿನ್ನ ಜೀವನವೇ ಮುಗಿದ ಹಾಗೆ ! ನೀನಿನ್ನೂ ಮದುವೆಯಾಗಿ ಬಾಳಿ ಬದುಕಬೇಕಾದವನು. ಅವಳ ಮುಖ, ಅವಳ ಚರ್ಯೆ ನೋಡಿದೆಯೇನು ಯಾವುದೋ ಗುಪ್ತರೋಗ ಅವಳಿಗೆ ಅಂಟಿಕೊಂಡು....'ಎನ್ನುತ್ತಾನೆ. ಈ ರೀತಿಯ ಮಾತುಗಳಿಗೆ ಚಂದ್ರ ''ಇಲ್ಲಪ್ಪ ಮಹರಾಯ, ನನಗೇಕೆ ಅದೆಲ್ಲ. ನನ್ನ ಕೆಲಸ ನನ್ನದು.... ಮಿಕ್ಕವುಗಳ ಗೊಡವೆಯೇ ಬೇಡ" ಎನ್ನುತ್ತಾನೆ.

ಆವನೂ ಒಂದೊಂದು ಬಾರಿ ಗಂಟೆ ಗಂಟೆಗಳಕಾಲ ಯೋಚಿಸು ತ್ತಾನೆ, ಕಸಿಕರಪಡುತ್ತಾನೆ ಅವಳ ಬಗ್ಗೆ.

ಈಗತಾನೆ ಅರಳಿದ ತಾರುಣ್ಯದ ಮೊಗ್ಗು ಎನ್ನಬಹುದು ಅವಳ ಸೌಂದರ್ಯ. ಬಳ್ಳಿಯ ತುದಿಯ ಹೂವಿನಂತೆ ಬಾಗಿ ಬಳುಕುವ ತೆಳ್ಳ ನೆಯ ಉದ್ದನೆಯ ಶರೀರ. ರೂಪುಗೊಂಡು ಬಹಳ ದಿನಗಳಾಗಿಲ್ಲವೆನ್ನುವ ಎದೆಯ ಏರು ಇಳುವು. ಕೆಳುಸೀಲಿಯ ಬ್ಲೊವುಜ್‌ನಿಂದ ಹೊರಗೆ ಚಾಚಿದ್ದ ಕುತ್ತಿಗೆ, ಬಿಳಿಯ ಭುಜಗಳು. ಬಿಳಿಗೆಂಪು ಕೋಲುಮುಖ. ನಕ್ಕರೆ ಕೆನ್ನೆಗಳಲ್ಲಿ ಗುಳಿಮೂಡಿ ಮುಖಕ್ಕೆ ಇನ್ನೂ ಮೋಹಕತೆ ಬರುತ್ತದೆ. ಬಿಲ್ಲಿನಂತೆ ಬಾಗಿದ ಕಪ್ಪು ಹುಬ್ಬು; ನೀಲಿಯ ಬಲ್ಬುಗಳಂತೆ ಥಳಥಳಿಸುವ ಅರಳು ಗಣ್ಣುಗಳು! ಅವುಗಳ ಸುತ್ತಲೂ ಚಿಟ್ಟೆಯ ರೆಕ್ಕೆಯಂತೆ ತೆರೆದು ಮುಚ್ಚುವ ಕರಿಯಂಚಿನಾಲಿಗಳು. ಮುಚ್ಚಿದ್ದ ತುಟಿಗಳಿಂದಾದ ಕಿರುಗ ಣಿವೆ! ಅಲ್ಲಿಂದ ಚಿಮ್ಮುತ್ತಿದ್ದ ಮೋಹದ ಕೆಂಬೆಳಕು. ಆ ರೂಪ....ಓ! ಆ ರೂಪ....

"ಅಂಥ ರೂಪಕ್ಕೆ....ಎಂಥ ರೋಗ" ಎಂದು ನೊಂದುಕೊಳ್ಳು ತ್ತಾನೆ. 'ಅವಳು ಈ ಹೀನಸ್ಥಿತಿಗಿಳಿದದ್ದು ಅವಳ ತಪ್ಪಲ್ಲ. ಪರಿಸ್ಥಿತಿಯ ತಪ್ಪು. ಈ ಆಡಂಬರದ ಸಮಾಜದ ತಪ್ಪು' ಎನ್ನುತ್ತಾನೆ. ಅವಳ ಬಾಳು ಆವನ ಮನದ ತೆರೆಯಲ್ಲಿ ಆಗಾಗ ಮೂಡಿ ಮೂಡಿ ಮಾಯ ವಾಗುತ್ತದೆ.

ಗಂಡ ಚಿಕ್ಕವಯಸ್ಸಿನಲ್ಲಿಯೇ ಶುದ್ಧ ಪೋಲಿಯಾಗಿದ್ದನಂತೆ. ನೂರು ಸುಳ್ಳು ಹೇಳಿ ಒಂದು ಕಲ್ಯಾಣಮಾಡುವ ನೆಪದಲ್ಲಿ ಅವನ ಆರೋಗ್ಯದ ಕಡೆ ಯಾರೂ ಗಮನಕೊಡಲಿಲ್ಲ. ಅದು ಎಲ್ಲರಿಗೂ ಗೊತ್ತಿದ್ದರೂ ತಮಗೆ ಗೊತ್ತಿಲ್ಲದಂತೆ ನಟಿಸಿ ಮದುವೆಯನ್ನು ನೆರವೇರಿಸಿಯೇ ಬಿಟ್ಟರು. ಇದಾದ ಮೂರು ತಿಂಗಳಿಗೆ ಇದುವರೆಗೂ ಅಡಗಿ ನಿಂತಿದ್ದ ಮೇಹರೋಗ, ಗೋಚ ರಿಸಿ ಪ್ರಜ್ವಲಿಸತೊಡಗಿತು. ಮೈಕೈ ಶೋಭೆ ಬಂದು ಮಚ್ಚೆ ಮಚ್ಚೆಯಾ ಯಿತು. ಕಣ್ಣಸುತ್ತ ಕಪ್ಪುಗಟ್ಟಿತು. ಸೊಂಟ ಬಿದ್ದುಹೋಯಿತು. ಮುಂದೆ....?

ಓ ಮುಂದೆ ?—ಅದನ್ನು ನೆನಸಿಕೊಂಡರೆ ಮೈ ಜುಮ್ಮೆನ್ನುತ್ತದೆ. ಹೆಂಗಸರನ್ನು ಈ ಜನ್ಮದಲ್ಲೇ ನೋಡಕೂಡದೆಂದು ವೈದ್ಯರು ಎಚ್ಚರಿಸಿದ್ದಾರೆ. ಅವನ ದೃಷ್ಟಿ ಬಿದ್ದ ಹೆಂಗಸಾದರೂ ಉಳಿಯುವುದೆಲ್ಲಿ ಬಂತು ? ಈಗ ಐವತ್ತು ಮೈಲುಗಳ ದೂರದಲ್ಲಿ ತನ್ನ ತಾಯಿಯ ಮನೆಯಲ್ಲಿ, ಅಣ್ಣನ ಆಶ್ರಯದಲ್ಲಿ, ತನ್ನ ಪಾಪದ ಫಲವನ್ನನುಭವಿಸುತ್ತ ಕಾಲವನ್ನು ಒದೆಯುತ್ತಿದ್ದಾನೆ. ಸದಾ ಹಾಸಿಗೆಯಲ್ಲಿ ಬಿದ್ದಿರುತ್ತಾನೆ.

—ಮದುವೆಯಾದಾಗ ಪುರೋಹಿತರ ಸಮ್ಮುಖ ಕೈಹಿಡಿದದ್ದು ಅಷ್ಟೆ ! ಪುನಃ ಆ ಕೈಯನ್ನೇ ನೋಡಲಿಲ್ಲ ವಸಂತಾ. ಮದುವೆ ತೀರಿಸಿಕೊಂಡು ಹೋದ ಬೀಗರು ಮತ್ತೆ ಬರಲೇ ಇಲ್ಲ ವಸಂತಳನ್ನು ಕರೆದು ಕೊಂಡು ಹೋಗಲು. ''ಈ ಜನ್ಮದಲ್ಲಿ ಗಂಡನಮನೆಗೆ ಹೋಗುವ ಭಾಗ್ಯ ನನಗಿಲ್ಲ'' ಎಂದು ಅಳುತ್ತ ತೌರೂರಲ್ಲೇ ಉಳಿದಳು. ಗಂಡ ಕಟ್ಟಿದ್ದ ಮಂಗಳಸೂತ್ರ ಇವಳ ಕೊರಳಲ್ಲಿ ಇನ್ನೂ ನೇತಾಡುತ್ತಿತ್ತು 'ಎಂದೋ ಯಾವತ್ತು ಅದಕ್ಕೂ—ಚ್ಯುತಿ ಬರುತ್ತದೆಯೋ' ಎಂದು ಎದೆ ತುಡಿಯುತ್ತಿತ್ತು.

ತೌರುಮನೆಯಾದರೇನು - ಎಷ್ಟು ದಿವಸ ಕುಳಿತು ಉಣ್ಣಲು ಬರುತ್ತದೆ ? ಅವರೇನು ಸಾಹುಕಾರರಲ್ಲ. ಮಧ್ಯಮ ವರ್ಗದ ಜನ. ತಂದೆ ಪೆನ್‌ಷನ್ ಪಡೆದ ಗುಮಾಸ್ತೆ. ಅದೂ ಇಪ್ಪತ್ತು ರೂಪಾಯಿಗಳು. ಹೇಗೋ ಸಂಸಾರ ನಡೆಸುತ್ತಿದ್ದ. ಈಗ ಎರಡು ವರ್ಷಗಳ ಕೆಳಗೆ ಅವನೂ ಸತ್ತು ಹೋದ. ಆ ತೌರುಮನೆಯಲ್ಲೂ ಸುಸೂತ್ರವಿಲ್ಲ. ಅಲ್ಲೂ ಫಜೀತಿಯೇ ! ಇವಳಕ್ಕ ಅಲುಮೇಲು ಲಿಂಗಣ್ಣನನ್ನು ಪ್ರಿಯನನ್ನಾಗಿ ಆರಿಸಿಕೊಂಡಿದ್ದಳು. ಅವನಾದರೋ ಮಾಂಗಲ್ಯ ಕಟ್ಟಿದವನಂತೆಯೇ ಅವಳ ಮನೆಯಲ್ಲಿಯೇ ಇದ್ದು ಬಿಟ್ಟ. ಸಂಸಾರದ ವೆಚ್ಚ ನೋಡತೊಡಗಿದ. ವಸಂತಳಿಗೆ ಇದು ಹಿಡಿಸಲಿಲ್ಲ. ಅವನ 'ಕೈಯಕೂಳು ನಾನೇಕೆ ತಿನ್ನಲಿ' ಎಂದು ತಾನು ಒಂದು ಬಾಲಕಿಯರ ಪಾಠಶಾಲೆಯಲ್ಲಿ ಮೂವತ್ತೈದು ರೂ.ನ ಉಪಾಧ್ಯಾಯಿನಿಯ ಕೆಲಸ ಹಿಡಿದಳು. ತನ್ನ ವೆಚ್ಚ ತಾನು ಸಂಪಾದಿಸುತ್ತಿದ್ದಳು.

ಅಲುಮೇಲು ಲಿಂಗಣ್ಣರ ಸಂಬಂಧಕ್ಕೆ ಅವಳ ಮುದುಕ ತಂದೆ ಭಯಂಕರವಾಗಿ ಪ್ರತಿಭಟಿಸಿದ. ಆದರೆ ಅವನ ಆಟವೇನು ನಡೆಯಲಿಲ್ಲ. "ಕಿರಿಯುವಳಿಗೆ ಖಾಯಿಲೆ ಗಂಡ ಸಿಕ್ಕಿದ. ಹಿರಿಯವಳು ಮುಂಡನನ್ನು ಕಟ್ಟಿಕೊಂಡಳು." ಎಂದು ಹಗಲು ರಾತ್ರಿ ಕೊರಗತೊಡಗಿದ. ಸಾಯುವಾಗಲೂ ಅಲುಮೇಲೂನ ಬೈಯುತ್ತಲೇ ಸತ್ತ. "ನಮ್ಮ ಜಾತಿಯನ್ನೆ ಹಾಳು ಮಾಡಿದಳು ಈ ಅಲುಮೇಲು ಮುಂಡೇ!"—ಎಂದು.

ನಿಜ! ಅಲುಮೇಲು ಮುಂಡೆಯೇ ಆಗಿದ್ದಳು, ಅವಳ ಜೀವನದಲ್ಲಿ ಲಿಂಗಣ್ಣ ಕಾಲಿಕ್ಕುವ ಮೊದಲು. ಅವಳಿಗೆ ಐದು ವರ್ಷವಾಗಿದ್ದಾಗ ಬುದ್ಧಿ ಬರುವುದಕ್ಕೆ ಮುಂಚೆ, ಕೊರಳಿಗೆ ತಾಳಿಬಂದಿತ್ತು. ಕಾಲಿಗೆ ಬೆಳ್ಳಿಯುಂಗುರ ಬಂದಿತ್ತು. ಕೈಗೆ ಕರಿಯ 'ಮುತ್ತೈದೆಬಳೆ'! ಪುಟ್ಟ ಕಿರುನೆಯನ್ನೇ 'ಒಳಗಚ್ಚೆ' ಹಾಕಿ ಉಡಬೇಕಾಯಿತು. ಕಿವಿಯ ತೂತಿನಲ್ಲಿದ್ದ ಬೆಂಡನ್ನು ಓಲೆಗಳಾಕ್ರಮಿಸಿದವು. ಹೊಸದಾಗಿ ಚುಚ್ಚಿ ಗಾಯವಾಗಿದ್ದ ಮೂಗಿನ ರಂಧ್ರಗಳಲ್ಲಿ ಮೂಗುತಿ ಹೊಳೆಯುತ್ತಿತ್ತು.

ಒಂದು ದಿನ! ಅಲುಮೇಲು ಮೈನೆರೆಯುವ ಮೊದಲೆ ಇವಳಿಗೆ ಅಗ್ನಿಸಾಕ್ಷಿಯಾಗಿ, ಓಲಗದ ಕೋಲಾಹಲದಲ್ಲಿ, ಅಕ್ಷತೆಯ ಮಳೆಯೊಂದಿಗೆ ಕಟ್ಟಿಸಿದ್ದ ತಾಳಿಯನ್ನು ಪುರೋಹಿತರೇ ಕಣ್ಣೀರಿನ ಮಳೆಯೊಂದಿಗೆ ಅಳುವಿನ ಕಹಳೆಯೊಂದಿಗೆ ಕಳಚಿಸಿಬಿಟ್ಟರು. ಅತ್ತು ಕರೆದು ಅಂಗಲಾಚಿ ತಲೆಗೂದಲನ್ನು ಮಾತ್ರ ಉಳಿಸಿಕೊಂಡು ಮಿಕ್ಕೆಲ್ಲ ಸೌಭಾಗ್ಯಗಳನ್ನೂ ವಾಪಸು ಕೊಡಬೇಕಾಯಿತು. ಅವಳಿಗೆ ತಲೆಗೂದಲಿರುವುದನ್ನು ಸಮಾಜ ಆಗಾಗ ಎತ್ತಿ ಟೀಕಿಸುತ್ತಿತ್ತು "ಮುಂಡೆಗೇಕೆ ತುರುಬಿನ ಮೋಜು" ಎಂದು. ರೂಪಸಿಯಲ್ಲದಿದ್ದರೂ ನೋಡಲು ಚೆನ್ನಾಗಿದ್ದಾಳೆ ಅಲುಮೇಲು. ಎಣ್ಣೆಗೆಂಪು ಸ್ಥೂಲಶರೀರ. ರಕ್ತ ತುಂಬಿ ತೊನೆಯುತ್ತಿದ್ದ ಕೆನ್ನೆಗಳು....

ದಿನವೂ ರಸ್ತೆಯಲ್ಲಿನ ಜನರ ತಿರುಗಾಟವನ್ನು ನೋಡುತ್ತ ಸಂಜೆ ಬಾಗಿಲಿನಲ್ಲಿ ನಿಲ್ಲುತ್ತಿದ್ದಳು. ಒಂದು ದಿನ ಲಿಂಗಣ್ಣ ಇವಳನ್ನು ನೋಡಿದ. ಹಣೆಯಲ್ಲಿ ಕುಂಕುಮವಿರಲಿಲ್ಲ. 'ಸಿಕ್ಕಿತು ಹಕ್ಕಿ' ಎಂದು ಏನೇನೊ ತಂತ್ರಮಾಡಿ ವಶಪಡಿಸಿಕೊಂಡ. ಯೌವನದ ಆವೇಗದಲ್ಲಿ, ಸುಖದ ಮಬ್ಬಿನಲ್ಲಿ, ಎಡವಿಯೇಬಿಟ್ಟಳು ಅಲುಮೇಲು. ಆದರೆ ಮತ್ತೆ ಎಡವಲಿಲ್ಲ!

ಆ ಲಿಂಗಣ್ಣನೇನು ಸಾಮಾನ್ಯನೇ. ಅವನ ಬಾಳೂ ವಿಚಿತ್ರವೇ!

ಊರಿನಲ್ಲಿ ಬೇಕಾದಷ್ಟು ಭೂಮಿ ಕಾಣಿ ಇದೆ. ರೂಪಿನಲ್ಲಿ ವಸಂತಳಿಗೇನೂ ಕಡಿಮೆಯಿಲ್ಲದ ಹೆಂಡತಿ ಇದ್ದಾಳೆ. ಅವಳನ್ನು ಕಂಡರೆ ಕೋಗಿಲೆಯ ಮರಿಯನ್ನು ಕಂಡ ಕಾಗೆಯಂತಾಡುತ್ತಾನೆ. ಅವಳಿಗೂ ರೂಪಿದೆ. ಯೌವನವಿದೆ. ಗಂಡನಲ್ಲಿ ಪ್ರೀತಿ ಇದೆ. ಆದರೆ........

ಹಳ್ಳಿಯ ಹುಡುಗಿ ಅವಳು. ಎಲ್ಲರ ಎದುರಿನಲ್ಲೂ ಗಂಡನ ತೋಳಿಗೆ ಸೊಂಟ ಕೊಟ್ಟು ಅವನ ಹೆಗಲಿಗೆ ಕೈಸುತ್ತುವಷ್ಟು ಮುಂದುವರೆದಿಲ್ಲ. ಮುಂದುವರೆಯಬೇಕೆನ್ನುವವಳೂ ಅಲ್ಲ. ಹೆಂಡತಿಯ ಕಿರುಬೆರಳನ್ನು ಹಿಡಿದುಕೊಂಡು ನಾಲ್ಕು ಹೊತ್ತೂ ಅಲೆಯಬೇಕೆನ್ನುವ ಲಿಂಗಣ್ಣ! ಹೊಸ್ತಿಲ ಮೇರೆಯನ್ನೇ ದಾಟಲಿಚ್ಛಿಸದ ಶಂಕ್ರಮ್ಮ! ಹೀಗಾಗಿ ಗಂಡ ಹೆಂಡರಿಗೆ ವಿರಸ ಹೆಚ್ಚುತ್ತಿತ್ತು. ಅವಳಿಗೆ ಫ್ಯಾಷನ್ ಕಲಿಸಲು ಬ್ರಹ್ಮಪ್ರಯತ್ನ ಪಟ್ಟ. ಕೊನೆಗೂ ಅದು ಉಪಯೋಗವಾಗಲಿಲ್ಲ. 'ಎಲ್ಲೋ ಹಳ್ಳಿಯ ಕೊಂಗ' ಎಂದು ತಾತ್ಸಾರದಿಂದ ಕಾಣತೊಡಗಿದ. ಅಲುಮೇಲಳೊಂದಿಗೆ ಪ್ರಣಯ ಬೆಳೆಸುತ್ತಲೂ, ಶಂಕ್ರಮ್ಮನ ಹಂಬಲನ್ನೇ ತೊರೆದುಬಿಟ್ಟ. ಅವಳ ಹೊಟ್ಟೆಬಟ್ಟೆಗೆ ವ್ಯವಸ್ಥೆ ಮಾಡಿ ಆ ಊರನ್ನೇ ಬಿಟ್ಟು ಅಲುಮೇಲು ಮನೆಯಲ್ಲೇ ಇರತೊಡಗಿದ. ಶಂಕ್ರಮ್ಮ ದಿನದಿನವೂ ಬೊಗಸೆಯಷ್ಟು ಕಣ್ಣೀರು ಸುರಿಸುತ್ತ ದಿನ ತಳ್ಳುತ್ತಿದ್ದಾಳೆ.

ಈಗ ವಸಂತಳು ತುಂಬು ಯೌವನದಲ್ಲಿದ್ದಾಳೆ. ಗಂಡನಿಲ್ಲದೆ ಬಾಳುಮೆ ಮಾಡಬೇಕಾಗಿದೆ. ಮಾಡುತ್ತಿದ್ದಾಳೆ. ಅಕ್ಕಪಕ್ಕದ ಜನ, ಗುರುತು ಕಂಡ ಜನ ಏನೇನೋ ಕಿವಿಮಾತು ಹೇಳಿಕೊಳ್ಳುತ್ತಾರೆ. "ಅಕ್ಕನೇ ಆರೀತಿಯಾದಮೇಲೆ ತಂಗಿಯದೇನು ?"-ಎನ್ನುವ ಮಾತು ಚಂದ್ರನ ಕಿವಿಗೂ ಆಗಾಗ ಬೀಳುತ್ತದೆ. "ತಂಗಿ ಹಾಗೆ ಆಗಲೇಬೇಕಿಲ್ಲ"-ಎಂದು ತನ್ನಷ್ಟಕ್ಕೆ ತಾನೇ ವಾದಿಸಿಕೊಂಡು ಸುಮ್ಮನಾಗುತ್ತಾನೆ. "ಆದರೂ ಲಿಂಗಣ್ಣ ಹೇಳುವ ಮಾತಿನಲ್ಲಿ ನಿಜವಿರಬೇಕು. ನಿಜವಿದೆ"

"ಹೆಣ್ಣಿಗೆ ಕಾಮೋದ್ರೇಕವಾದರೆ ತೀರಿತು. ಯಾವ ಗಳಿಗೆಯಲ್ಲಿ ಏನೋ? ಸೋದರಭಾವವೇನು ಬಂತು ಕಾಮದ ಚಟದ ಮುಂದೆ.

ಗಂಡಸಿಲ್ಲ........ಯೌವನ....ಅವರಿಂದಾಗಿ ಲಿಂಗಣ್ಣ ಹೇಳುವುದರಲ್ಲಿ ಸಂಶಯವೇನು ಬಂತು ? '' ಎಂದು ಹೇಳಿಕೊಳ್ಳುತ್ತಾನೆ.

೨

ಸಂಶಯ ಬಂದೇ ಬರುತ್ತಿತ್ತು ವಸಂತಾಗೆ. ತನ್ನಕ್ಕ ಅಲುಮೇಲುವಿಗೂ ತಾರದವಸ್ತುಗಳನ್ನು ತನಗೇಕೆ ತರುತ್ತಾನೆ? ಬಲವಂತದಿಂದ ಕೊಡುತ್ತಾನೆ ಲಿಂಗಣ್ಣ ? ಸ್ನೋ, ಪೌಡರು, ತುಟಿಗೆಂಪು, ಬ್ಲೌಜ್, ಬಟ್ಟೆ, ಸೀರೆ ಅವನು ತಾರದ ವಸ್ತುಗಳಿಲ್ಲವೇನೋ ಎಂದೆನಿಸುತ್ತಿತ್ತು. ವಸಂತಳಿಗೆ ಸಂಜೆ ಪೇಟೆಯಿಂದ ಬಂದಾಗ ಹೂ ತಂದೇ ತರುತ್ತಿದ್ದ. ತಂದ ವಸ್ತುಗಳನ್ನು ಅವಳ ಕೈಗೇ ಕೊಡಬೇಕು. ಅವಳು ಮನೆಯಲ್ಲಿಲ್ಲದಿದ್ದರೆ ಹಾಗೆಯೇ ಇಟ್ಟಿದ್ದು ಅವಳು ಬಂದ ನಂತರ ಕೊಡಬೇಕು. ಅವನು ಕೊಡಲು ಬಂದಾಗ ಅವಳೆದೆಯಲ್ಲಿ ಏನೋ ಒಂದು ರೀತಿಯ ಹೆದರಿಕೆ ಹುಟ್ಟುತ್ತದೆ. ಅವನ ಮಾತು, ಅವನ ನೋಟ, ಇದೆಲ್ಲದರ ಗುರಿ ಯೇನೋ ಇರಬೇಕು. ಇದೆ, ಎಂದು ಅವಳ ಒಳದನಿ ಒಂದೊಂದು ಬಾರಿ ಕೂಗಿಕೊಳ್ಳುತ್ತದೆ. ಅದೊಂದು ಸಂಶಯ ಅಷ್ಟೆ. ಆಧಾರವಿಲ್ಲ.

''ಇವೆಲ್ಲ ನನಗೇಕೆ? ''— ಎಂದು ಆಗ್ರಹ ಮಾಡಿಕೊಳ್ಳುತ್ತಾಳೆ ವಸಂತ. ಆಗ ಲಿಂಗಣ್ಣ ಸಮಾಧಾನ ಹೇಳುತ್ತಾನೆ. ''ಮನೆಯಲ್ಲಿ ನೀನೊಬ್ಬಳೇ ಮುತ್ತೈದೆ. ಅದೂ ಸೂಜಿಯ ಮೇಲಿನ ಗುಲಗಂಜಿಯ ಹಾಗೆ. ಎಂದೋ....ಯಾವತ್ತೋ....ಈ ವಯಸ್ಸಿನಲ್ಲಿಲ್ಲದೆ ಮತ್ತ್ಯಾವಾಗ ಸಂತೋಷಪಡುವುದು. ನೀನಲ್ಲದೆ ಮನೆಯಲ್ಲಿ ಮತ್ತ್ಯಾರು ಇದ್ದಾರೆ ಮುಟ್ಟಿಕೊಳ್ಳಲು, ತೊಟ್ಟುಕೊಳ್ಳಲು? '' ಎನ್ನುತ್ತಾನೆ. ಈಗ ಎರಡು ದಿನಗಳಿಂದ ಅವಳಿಗೆ ಪೂರ್ತಿ ಸಂಶಯ ಬಂದಿತ್ತು.

ಎರಡು ದಿನಗಳ ಹಿಂದೆ-ಭಾನುವಾರ-ಅವಳೇ ಉಪಹಾರ ಮಾಡಿದ್ದಳು. ಪೂರಿ ಪಲ್ಯ ಆದಿನ ಅವಳು ಎಣ್ಣೆ ನೀರು ಹಾಕಿಕೊಂಡಿದ್ದಳು. ನೀಳವಾದ ರೇಷಿಮೆಯ ಕೂದಲನ್ನು ಆರಲೋಸುಗ ಜಡೆ ಹೆಣೆಯದೆ ತುದಿ ಗಂಟು ಹಾಕಿದ್ದಳು. ಅವು ಚೆಲ್ಲಾಪಿಲ್ಲಿಯಾಗಿ ಬೆನ್ನು ಭುಜಗಳ ಮೇಲೆಲ್ಲ

ಹರಡಿ ಅವಳು ಗರಿಗೆದರಿದ ಬಿಳಿಯ ನವಿಲಾಗಿದ್ದಳು. ಬ್ಲೌಜ್ ಹಾಕದೆ ಬರೀ ಬಾಡೀಸ್‌ನಲ್ಲಿದ್ದುದರಿಂದ ಸೆರಗು ಜಾರಿದಾಗ ಆ ಗೌರವರ್ಣದ ಚರ್ಮದಿಂದ ಪ್ರತಿಫಲಿತ ಬೆಳಕು ಕಣ್ಣಿಗೆ ಏನೋ ಮೃದುತ್ವ ಕೊಡುತ್ತಿತ್ತು

ಪೂರಿಸಾಗು ಬಡಿಸುತ್ತಿದ್ದಾಗ 'ಸಾಕುಸಾಕು' ಎನ್ನುತ್ತಲೋ 'ಬೇಡ ಬೇಡ' ಎನ್ನುತ್ತಲೋ ಲಿಂಗಣ್ಣ ವಸಂತಳ ಕೈಹಿಡಿದು ಮೃದುವಾಗಿ ಒತ್ತುತ್ತಿದ್ದ. ಸುಮ್ಮಸುಮ್ಮನೆ ನಗುತ್ತಿದ್ದ. "ವಸಂತಳ ಕೈ ತಿಂಡಿಯೆಂದರೇ" ....ಎಂದು ಊರಗಲ ಬಾಯಿ ತೆಗೆದು ನಗುತ್ತಿದ್ದ. ಚಂದ್ರ ಇದನ್ನೆಲ್ಲಾ ನೋಡುತ್ತಿದ್ದಾನೆ. ಏನೆಂದುಕೊಳ್ಳುವನೋ ಎಂದು ವಸಂತಳಿಗೆ ಕರಳು ಕತ್ತರಿಸಿದಂತಾಗುತ್ತಿತ್ತು. ಅವಳು ಮಾತಾಡಲಿಲ್ಲ. ಎದೆಮಾತ್ರ ವೇಗವಾಗಿ ಆಡಿ ಭಯದ ಪ್ರತಿಕೃತಿ ರೂಪಿಸುತ್ತಿತ್ತು. ಅಂದಿನಿಂದ ಅವಳಿಗೆ ಬಹಳ ಸಂಶಯ ಬಂದಿತ್ತು. ಆದರೂ ಲಿಂಗಣ್ಣ ಹೇಳುವ ಮಾತು ಕೇಳಿದಾಗ ಅವನೊಬ್ಬನೇ ತನ್ನ ಹಿತಚಿಂತಕನೆಂದುಕೊಳ್ಳುತ್ತಿದ್ದಳು.

"ಚಂದ್ರನ ಬಗ್ಗೆ ಹುಷಾರಾಗಿರು ವಸಂತಾ. ಈವರೆಗೆ ಅನೇಕ ಹಕ್ಕಿಗಳಾಗಿವೆ ಅವನ ಬೇಟೆಯಲ್ಲಿ. ನಿನ್ನ ಮೇಲೆ ಏರ್ಪಾಡು ನಡೆಸಿರುವಂತೆ ತೋರುತ್ತದೆ. ನೀನು ಆಗಾಗ ಕತೆ ಪುಸ್ತಕಗಳಿಗಾಗಿ ಅವನ ಕೋಣೆಗೆ ಹೋಗುತ್ತಿ ಅವನೊಂದಿಗೆ ಮಾತನಾಡುತ್ತ ನಿಲ್ಲುತ್ತಿ. ನೋಡು ನಿನ್ನ ಕತೆ ಮುಗಿಸಿಬಿಟ್ಟಾನು." ಎನ್ನುತ್ತಾನೆ. ಅದು ನಿಜವೆಂದು ಅವಳಿಗನ್ನಿಸುವದಿಲ್ಲ. ಚಂದ್ರ ಅಂಥವನಲ್ಲ ಎಂದು ಅವಳಿಗೆ ಗೊತ್ತು. ಆದರೂ ಲಿಂಗಣ್ಣ ಹೇಳಿದ ಮಾತನ್ನು ನಂಬಲು ಹಿಂದೆ ಮುಂದೆ ನೋಡಲಿಲ್ಲ.

"ಇದೂ ಒಂದು ರೀತಿಯ ಕಾರ್ಯಸಾಧನೆಯೇನೋ" ಎಂದು ಅವಳ ಮನಸ್ಸು ತಳಮಳಿಸುತ್ತಿತ್ತು.

೩

ಓಣಿಯ ಕೊನೆಯದೇ ಅವರ ಮನೆ. ಕೈಸಾಲೆಯಲ್ಲೇ ಮಹಡಿಗೆ ಹೋಗುವ ಮರದ ಹಂತ. ಮಹಡಿಯಲ್ಲಿ ಎರಡು ಕೋಣೆಗಳು. ಒಂದರಲ್ಲಿ ಮನೆಯ ಹಳೆಯ ಸಾಮಾನು. ಮತ್ತೊಂದರಲ್ಲಿ ಚಂದ್ರ, ಕೆಳಗಡೆ

ಕಿರುಓಣಿಯನ್ನು ದಾಟಿದರೆ ಒಂದು ಹಾಲನ್ನೇ ಎರಡಾಗಿ ವಿಭಾಗಿಸಿದೆ. ಒಂದರಲ್ಲಿ ಅಲುಮೇಲು ಲಿಂಗಣ್ಣ ಮತ್ತೊಂದರಲ್ಲಿ ವಸಂತ. ಈ ಹಾಲನ್ನು ದಾಟಿದರೆ ಸ್ನಾನದ ಮನೆ ಅಡಿಗೆ ಮನೆ ಇತ್ಯಾದಿ....

ಮೂರು ದಿನಗಳಿಂದ ವಸಂತ ಶಾಲೆಗೆ ಹೋಗಲಾಗುತ್ತಿಲ್ಲ. ಅಲುಮೇಲುಗೆ ವಿಪರೀತ ಜ್ವರ, ತಲೆನೋವು, ನಿಶ್ಶಕ್ತಿ. ಹಾಸಿಗೆಯಿಂದ ಮೇಲೇಳಲು ತ್ರಾಣವಿಲ್ಲದೆ ಬಿದ್ದಿದ್ದಾಳೆ. ಮೂರು ದಿನಗಳಿಂದ ಸ್ನಾನವಿಲ್ಲದೆ, ತಲೆ ಬಾಚಿಲ್ಲದೆ, ಆ ಮುಖ ತನ್ನ ಕಾಂತಿಯನ್ನೇ ಕಳೆದುಕೊಂಡು ಏನೋ ಒಂದು ರೀತಿಯ ಅಸಹ್ಯ ತಂದಿತ್ತು. ಕಣ್ಣುಗಳು ಬೆಳ್ಳಗೆ ರಕ್ತಹೀನವಾಗಿದ್ದವು. ತುಟಿಗಳು ಸುಕ್ಕು ಸುಕ್ಕಾಗಿ ಮುದುಡಿಕೊಂಡಿದ್ದವು.

ವಸಂತ ರೋಗಿಯ ಪಕ್ಕದಲ್ಲಿ ಕುಳಿತು ಸೀಸೆಯ ಗೆರೆನೋಡುತ್ತ ಔಷಧಿ ಬಗ್ಗಿಸುತ್ತಿದ್ದಳು. ಸಂಜೆ ಸುಮಾರು ಏಳೂವರೆ ಗಂಟೆ ಇರಬಹುದು. ಆಗ ತಾನೇ ತಿರುಗಾಡಿ ಬರಲು ಹೋಗಿದ್ದ ಲಿಂಗಣ್ಣ ಬಂದು ಒಂದೆರಡು ನಿಮಿಷ ವಸಂತಳನ್ನು ನೋಡುತ್ತ ನಿಂತಿದ್ದ.

"ಈ ದಿವಸ ನಾನು ನೋಡಿಕೊಂಡಿರುತ್ತೇನೆ. ಅಲುಮೇಲು ಹತ್ತಿರ ನೀನು ಮಲಗಿಕೋ ವಸಂತಾ !" ಎಂದ.

ಮೂರು ದಿನಗಳು ಒಂದೇ ಸಮನೆ ರೋಗಿಯ ಬಳಿ ಕೂತು ಸೊಂಟ ಒಡೆತ ಬಂದಿತ್ತು. ಕಣ್ಣು ಉರಿಯುತ್ತಿತ್ತು ವಸಂತಳಿಗೆ. ಅವಳಿಗೆ ಈ ಮಾತು ಒಂದು ವರವಾಯಿತು. 'ಹೂಂ' ಗುಟ್ಟಿ ಸುಮ್ಮನಾದಳು.

ಸುಮಾರು ಹನ್ನೊಂದು ಗಂಟೆಯಾಗಿತ್ತು. 'ಅಲುಮೇಲು' ಎಂದ ಲಿಂಗಣ್ಣ. ಅವಳು ಮಾತನಾಡಲಿಲ್ಲ. ನಿದ್ರೆ ಹತ್ತಿತ್ತು. ಮೆಲ್ಲನೆ ಎದ್ದು ಬೆಕ್ಕಿನಂತೆ ಹೆಜ್ಜೆಹಾಕುತ್ತ ಕೋಣೆಯ ದೀಪ ಆರಿಸಿದ. ರೋಗಿಯ ತಲೆಯಮೇಲಿದ್ದ ದೇವರ ಪಟದ ಮೇಲೆ ಸಣ್ಣ ದೀಪವೊಂದು ಉರಿಯುತ್ತ ಸುತ್ತಲಿನ ಕತ್ತಲನ್ನು ಕೆಣಕುತ್ತಿತ್ತು. ಲಿಂಗಣ್ಣ ಪುನಃ ಬಂದು ಅದೇ ಸ್ಥಳದಲ್ಲಿ ಅಂಗೈಗೆ ಹಣೆಯೂರಿ ಏನನ್ನೋ ಯೋಚಿಸುತ್ತ ಕುಳಿತ. ಕೆಲವು ನಿಮಿಷಗಳ ಮೇಲೆ ಎದ್ದು ಭರಭರ ಹೊರಟ. ಮತ್ತೆ ಹಿಂದಿರುಗಿ ಬಂದು

ಕುಳಿತ. ಕಣ್ಣುಗಳನ್ನು ಬಲವಾಗಿ ಮುಚ್ಚಿ ತಲೆಯನ್ನು ಅಲ್ಲಾಡಿಸಿದ. ಕೈಗಳನ್ನು ಬೀಸಿದ. ಕೋಣೆಯಿಂದ ಹೊರಕ್ಕೆ ಬಂದ.

"ಅಯ್ಯೊ! ಅಯ್ಯೋ! — ಯಾರು ನನ್ನ ತೋಳನ್ನು....ನನ್ನ ಬ್ಲಾಜನ್ನು....ನನ್ನ ತುಟಿಗಳನ್ನು........

"ಅಯ್ಯೋ! ಅಯ್ಯೊ! ಯಾರದೋ ಕೂಗು!

ಮಹಡಿಯ ಮೇಲೆ ಮಲಗಿದ್ದ ಚಂದ್ರನಿಗೆ ಎಚ್ಚರವಾಯಿತು. ಅಲು ಮೇಲೂಗೆ ಖಾಯಿಲೆ ಜಾಸ್ತಿಯಾಗಿದೆ. ಎಂದು ಗೊಣಗಿಕ್ಕೊಂಡು ಪಕ್ಕಕ್ಕೆ ಹೊರಳಿ ಮಲಗಿಕ್ಕೊಂಡ.

'ಅಯ್ಯೋ' ಕೂಗು ಮತ್ತಷ್ಟು ಜೋರಾಗಿ ಕೇಳಿಸಿತು. ಆ ಧ್ವನಿ ಅವಳದಲ್ಲ. ಅದು ವಸಂತಳದು. ಅವನಿಗೆ ಚೆನ್ನಾಗಿ ಗೊತ್ತು. ಧ್ವನಿ ಕೇಳಿ ಎದ್ದ. ಮೇಜಿನ ಮೇಲಿದ್ದ ಟಾರ್ಚನ್ನು ತಡಕಿ ತೆಗೆದುಕೊಂಡ. ಮೆಟ್ಟಿಲಿಳಿದು ಕೆಳಗೆ ಬಂದ.

ಏನಾಗಿದೆ ವಸಂತಳಿಗೆ? ಲಿಂಗಣ್ಣ ಎಲ್ಲಿದ್ದಾನೆ? ಅವನಿಗೆ ಕೇಳಿಸ ಲಿಲ್ಲವೇ ಈ ಕೂಗು? ಅವನೇಕೆ ತನ್ನ ಕೋಣೆಯಿಂದ ಹೊರಗೆ ಬಂದಿಲ್ಲ. ಸಾವಿರ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತ ವಸಂತಳ ಕೋಣೆಬಾಗಿಲ ಬಳಿ ನಿಂತ. ಕೋಣೆಯಲ್ಲಿ ದೀಪವಿಲ್ಲ. ಒಂದೆರಡು ನಿಮಿಷಗಳು ಪ್ರವೇಶಿ ಸಲು ಧೈರ್ಯ ಸಾಲದೆ ನಿಂತ. ದೀಪದ ಸ್ವಿಚ್ ಎಲ್ಲಿದೆಯೋ ಅದೂ ಗೊತ್ತಿಲ್ಲ. ತಡಕಿ ಹುಡುಕಲು ಸಮಯವೂ ಇಲ್ಲ. ಒಳಗೆ ಜೋರಾಗಿ ಉಸಿರಾಡುವುದು ಕೇಳುತ್ತಿತ್ತು. ಒದ್ದಾಟದಿಂದಾಗಿ ಮಂಚದ ಸ್ಪ್ರಿಂಗ್‌ಗಳು 'ಕಿರ್ ಕಿರ್' ಎನ್ನುತ್ತಿದ್ದುವು. ಹಾ! ಊ! ಎಂದು ವಸಂತ ಅಳುತ್ತಿದ್ದಳು.

ಕೈಲಿದ್ದ ಟಾರ್ಚಿನ ಬೆಳಕಿನಲ್ಲೇ ಕೋಣೆಯನ್ನೆಲ್ಲಾ ಶೋಧಿಸಿದ. ಒಂದು ಕಡೆ ವಸಂತಳ ಮಂಚದ ಮೇಲೆ........

ವಸಂತ ಹಾವಿನಂತೆ ಪಕ್ಕದಿಂದಪಕ್ಕಕ್ಕೆ ಹೊರಳಿ ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದಳು.

"ಯಾರು? ಏನು?" ಎಂದು ಚಂದ್ರ ಜೋರಾಗಿ ಕೂಗಿದ. ಬೆಳ ಕನ್ನು ಕಂಡೊಡನೆಯೇ ಅವನು ಎದ್ದುಬಿಟ್ಟು ಕತ್ತಲಿನ ಕಡೆಗೆ ಓಡಿ

ಮುಖ ಮರೆಸಿಕೊಳ್ಳಲು ಯತ್ನಿಸಿದ. ಆದರೆ ಕೊನೆಗೊಮ್ಮೆ ಬೆಳಕಿಗೆ ಬಂದ.

"ಅಬ್ಬಾ ! ಯಾರು ! —ಎನ್ನುತ್ತ ನೋಡಿದರು ಇಬ್ಬರೂ.

ಆಶ್ಚರ್ಯ ತಿರಸ್ಕಾರ, ದುಃಖದ ಧ್ವನಿಯಲ್ಲಿ ಎರಡು ಕಂಠಗಳೂ ಕೂಗಿದುವು ಒಂದೇ ಉಸಿರಿನಲ್ಲಿ —'ಲಿಂಗಣ್ಣಾ'—ಎಂದು 'ಉಹು' ಎನ್ನುತ್ತ ಚಂದ್ರ ಈಚೆಗೆ ಬಂದ. ಅವನ ಹಿಂದೆ ಲಿಂಗಣ್ಣ ಓಡಿಬಂದು ತನ್ನ ಕೋಣೆಗೆ ತೂರಿಕೊಂಡ. ಮುಖ ತೋರಿಸಲಾರದೆ;

ಕೋಣೆಯ ಕದ ಲಟಾರನೆ ಮುಚ್ಚಿಕೊಂಡಿತು.

# ಬಾಡಿದ ಹೂ !

ಗಡಿಯಾರ ಎರಡು ಘಂಟೆ ತೋರಿಸುತ್ತಿತ್ತು. ಅಂದು ಭಾನುವಾರ ಎರಡು ದಿನಗಳು ಒಟ್ಟಿಗೆ ಕೆಲಸದ ನೊಗ ಇಳಿಸಿದ್ದರಿಂದಾಗಿ ಬಹಳ ಬೇಸರಹುಟ್ಟಿತು. ಚಂದ್ರನ ಕೊಠಡಿಗೆ ಹೋಗಿ ಅವನನ್ನೂ ಎಳೆದುಕೊಂಡು ಸಿನಿಮಾಕ್ಕಾದರೂ ಹೋಗೋಣ ಎಂದು ಹೊರಟೆ........ಬೀದಿಯ ಮಹಡಿಯ ಹಿಂಭಾಗದಲ್ಲಿ ಅವನ ಕೊಠಡಿ. ಪ್ರತ್ಯೇಕವಾಗಿ ಗಲಾಟೆಯಿಲ್ಲದೆ ಇದೆ. ನಾನು ಹೋದಾಗ ಹಾಯಾಗಿ ಮಲಗಿ ನಿದ್ರಿಸುತ್ತಿದ್ದ ಚಂದ್ರ.

'ಚಂದ್ರಾ....ಲೋ ಚಂದ್ರಾ ,'— ಎಂದು ಕೂಗುತ್ತಾ ಅವನ ತಲೆಯ ಬಳಿ ಕುಳಿತು ಕಿವಿಗೆ ಕಾಗದದ ಕಡ್ಡಿ ಇಟ್ಟು ಮುಲುಗುಟ್ಟಿಸಿದೆ. 'ಥೂತ್':- ಎಂದು ತಲೆ ಕೊಡವಿಕೊಂಡು ರೇಗಿಕೊಂಡು ಎದ್ದು ಹಾಸಿಗೆ ಮೇಲೆ ಕುಳಿತ. ಕಣ್ಣುಗಳಿನ್ನೂ ನಿದ್ರೆಗೆ ಎಳೆಯುತ್ತಿದ್ದವು.

ತೆಳ್ಳನೆಯ ಬೊಂಬಾಯಿ ಹಾಸಿಗೆ. ಅದರಡಿ ಬಣ್ಣದ ಪಟ್ಟಿ ಜಮಖಾನ. ಮೇಲೆ ಅಗಸನಿಂದ ಬಂದ ಬಿಳಿಯ ಮಗ್ಗುಲು ಹೊದಿಕೆ. ಸುಕ್ಕಿಲ್ಲದೆ ಹಾಸಿದೆ. ಇದ್ದ ಎರಡು ತಲೆದಿಂಬಿಗೂ ಬಿಳಿಯ ಮೇಲುದ. ಅವಕ್ಕೆ ಹೂವಿನ ಅಂಚಿನಲ್ಲಿ 'ಗುಡ್ ಲಕ್' ಅಂತಲೂ, 'ಸ್ವೀಟ್ ಡ್ರೀಮ್ಸ್' ಎಂತಲೂ ಕಸೂತಿ ಹಾಕಿದೆ. "ಯಾವ ಸ್ವೀಟ್ ಡ್ರೀಮ್ಸ್' ಅನುಭವಿಸುತ್ತಿದ್ದೀಯೋ" ಅನ್ನುತ್ತಾ ತಲೆದಿಂಬಿನ 'ಸ್ವೀಟ್ ಡ್ರೀಮ್ಸ್' ಮೇಲೆ ಕೈಯ್ಯಾಡಿಸುತ್ತಾ ಕೇಳಿದೆ. ದಿಂಬನ್ನು ಎತ್ತಿದೆ, ದಿಂಬಿನ ಕೆಳಗೆ ಏನೋ ಸಿಕ್ಕಿತು. ತೆಗೆದುಕೊಂಡು ನೋಡಿದೆ. ಗೇಣುದ್ದದ ದುಂಡು ಮಲ್ಲಿಗೆ ದಂಡೆ! ಬಾಡಿದೆ. ಒಣಗಿದೆ. ಅದರಿಂದಲೇ ಕಳಚಿಬಿದ್ದ ಬಿಡಿ ಹೂ ದಳಗಳು!

ಬೆಳಗಿನಲ್ಲಿ ಅರೆಬಿರಿದು, ಗಾಳಿಗೆ ವೈಯ್ಯಾಡ್ಡಿ ನಗುತ್ತಾ ದುಂಬಿಗೆ ಸ್ವಾಗತವೀಯುವ ಮಲ್ಲಿಗೆ ಎಲ್ಲಿ?-ಬಾಗಿ, ಒಣಗಿ, ಮುದುಡಿಕೊಂಡಿರುವ ಈ ಮಲ್ಲಿಗೆ ಎಲ್ಲಿ?- ಎಷ್ಟು ಅಂತರ!

'ಲೋ ಬ್ರಹ್ಮಚಾರಿ, ನಿನ್ನೆ ಯಾವ ಹಕ್ಕಿಯೊಂದಿಗೆ ನಿನ್ನ ಶಯನೋತ್ಸವ '! ಎಂದೆ.

ನಿದ್ರೆಗಣ್ಣುಗಳನ್ನು ತಿಕ್ಕುತ್ತಲೇ 'ಏನೋ' ಎಂದು ರಾಗ ಎಳೆದ ಚಂದ್ರ.

'ಈ ಹೂವಿನ ಹುಡುಗಿ ಯಾರೋ ?'

ಚಂದ್ರ ಆ ಕಡೆ ತಿರುಗಿ ನೋಡಿದ. ಕಣ್ಣುಗಳಲ್ಲಿ ಫಕ್ಕನೆ ಸಂಶಯ ತುಂಬಿಕೊಂಡಿತು.

'ಸತ್ಯವಾಗಿಯೂ ಇಲ್ಲಪ್ಪಾ....ನಾನಲ್ಲಪ್ಪಾ' ಎಂದ.

'ಬುರುಡೆ ಬಿಡಬೇಡ. ನನ್ನ ಹತ್ತಿರ ಅದೆಲ್ಲಾ ನಡೆಯೊಲ್ಲ! ನಿನ್ನ ಹಾಸಿಗೆಯಲ್ಲಿ ಈ ಹೂ ಹೇಗೆ ಬಂತೋ'?

'ಹೇಗೆ ಬಂತು'?-ಅದೇ ಪ್ರಶ್ನೆಯನ್ನು ಚಂದ್ರನೂ ಕೇಳಿಕೊಂಡ. ನನ್ನ ಹಾಸುಗೆಯಲ್ಲಿ ಹೇಗೆ ಬಂತು? ಯಾವಾಗ ಬಂತು? ಎಲ್ಲವೂ ಆಶ್ಚರ್ಯ! ಯೋಚಿಸಿ ಯೋಚಿಸಿ ಕೊನೆಗೆ ಸಕ್ಕರೆ ತಿಂದವನಂತೆ ಬಾಯಿಂದ ಉಸಿರೆಳೆದ.

'ನಿನ್ನೆ ಒಂದು ವಿಚಿತ್ರ ನಡೆಯಿತಮ್ಮ! ಎಂದೂ ನೋಡಿರಲಿಲ್ಲ ಆ ದೃಶ್ಯ'!

'ಅದನ್ನೇ ನಾನೂ ಕೇಳುತ್ತಿರುವುದು. ಹಕ್ಕಿ ಯಾವುದೂ ಅಂತ?'

'ಹೇಳೋವರೆಗೂ ಬಾಯಿಮುಚ್ಚಿಕೊಂಡು ಕೇಳು. ನನ್ನ ಕೊಟಡಿಯ ಜೊತೆಗಾರ ಲಿಂಗಣ್ಣನ ಕೆಲಸ ಅದು!'

'ಹಾಂ! ಹಾಗಾದರೆ ಲಿಂಗಣ್ಣ ತಲೆ....ಕನೆ?'

'ಸುಮ್ಮನೆ ಕೇಳ್ತಿಯೋ ಒದೀಲೋ ?'

''ಹೇಳಪ್ಪ. ಅರ್ಜುನ ಸನ್ಯಾಸಿ'

ಚಂದ್ರ ಹೇಳಲು ಮೊದಲು ಮಾಡಿದ—

''ನಿನ್ನೆ ಆಫೀಸಿಗೆ ರಜೆಯಿತ್ತು. ಮಧ್ಯಾಹ್ನ ಸಿನಿಮಾಕ್ಕೆ ಹೋಗುವುದು ಎಂದು ಲಿಂಗಣ್ಣನೂ ನಾನೂ ಬೆಳಗ್ಗೆ ಶೇವ್ ಮಾಡಿಕೊಳ್ಳುವಾಗಲೇ ತೀರ್ಮಾನಿಸಿದ್ದೆವು. ಬಂದ ಚಿತ್ರಗಳೊಂದನ್ನೂ ಬಿಡಬಾರದೆಂದು ನಮ್ಮ

ಹಟ; ಚಟವೂ ಹೌದು! ಸದ್ಯ ನೋಡದಿದ್ದ ಚಿತ್ರವೊಂದಿತ್ತು-ಕ್ರಾಂತಿ ಥೇಟರ್ಸ್‌ನವರ ' ಜೊತೆಗಾತಿ '! ಸ್ವತಂತ್ರ ಟಾಕೀಸಿನಲ್ಲಿ ಅದರ ಪ್ರಾರಂಭೋತ್ಸವ. ಆದರೆ?— ಸುಮಾರು ಹತ್ತು ಹತ್ತೂವರೆ ಘಂಟೆ ಹೊತ್ತಿಗೆ ಪೇಟೆಗೆ ಹೋಗಿದ್ದ ಲಿಂಗಣ್ಣ ಬಂದವನೇ 'ನಾನು ಚಿತ್ರಕ್ಕೆ ಬರುವುದಕ್ಕಾಗುವುದಿಲ್ಲ' ಎಂದ.''

''ಯಾಕೋ' ಎಂದೆ''

'' ನನ್ನ ತಂಗಿಯೊಬ್ಬಳು ಊರಿನಿಂದ ಬರ್‍ತ್ತಾಳೆ. ಅವಳನ್ನು ಕರೆದುಕೊಂಡು ಬರಬೇಕು. ಅವಳೊಂದಿಗೆ ಇರಬೇಕು. ಕೆಲಸವಿದೆ' ಎಂದ ''

''ಲೋ ಜಿಪುಣ, ಸುಮ್ಮನೆ ನೆಪ ಹೇಳಬೇಡವೋ ! ನಾನೇ ದುಡ್ಡು ಕೊಡ್ತೀನಿ ಬಾರೋ. ಹಿಂದಿನ ವಾರ ದಬಾಯ್ಸಿದ್ದೆ ಅಂತ ಹೆದರಬೇಡ'! ಎಂದೆ''

'' ಇಲ್ಲವೋ ನಿಜವಾಗಿಯೂ ಬರುತ್ತಾಳೆ' ಎಂದು ಗೋಗರೆದ. ಅವನ ಮುಖವನ್ನು ನೋಡಿ ಇದ್ದರೂ ಇರಬಹುದು ಅನ್ನಿಸಿತು ನನಗೆ ''

''—'ನಿನ್ನ ಇಷ್ಟ'— ಎಂದು ಸುಮ್ಮನಾದೆ. ಆತ :ಟ್ರಂಕಿನಲ್ಲಿದ್ದ ಬಟ್ಟೆಗಳನ್ನೆಲ್ಲಾ ತೆಗೆದು 'ಯಾವುದು ತೊಡಲಿ ಯಾವುದು ಚೆನ್ನಾಗಿದೆ.' ಎಂದು ಗೊಣಗುತ್ತಿದ್ದ.''

'' ಏನೋ ತಂಗಿ ಬರುವಳೆಂದರೇನೇ ಇಷ್ಟು ಸಿಸ್ತಾಗೋನು...ಇನ್ನು ಹೆಂಡತಿ ಬರುವಳೆಂದರೆ?'— ಅವನಂತೂ ನನ್ನ ಮಾತಿಗೆ ಗಮನ ಕೊಡುತ್ತಿಲ್ಲವೆಂದು ಗೊತ್ತಾಯಿತು. ಮೌನವಾಗಿದ್ದ. ಮಧ್ಯಾಹ್ನ ಒಂದು ಗಂಟೆಯೊಳಗಾಗಿ ನಾಲ್ಕು ಬಾರಿ ಮುಖ ತೊಳೆದ ಸೋಪು ಹಚ್ಚಿ. ಟವಲಿನಿಂದ ಮುಖವನ್ನು ಕೆಂಪಾಗಿ ಚರ್ಮಕಿತ್ತುಬರುವವರೆಗೂ ಉಜ್ಜಿದ! ಯಾವತ್ತೂ ಹೀಗೇ ಅವನವೈಖರಿ! ವಾರಕ್ಕೆರಡು ಬಾರಿ ಮೈತೊಳೆಯುತ್ತಿದ್ದರೂ ಮುಖ ಮಾತ್ರ ದಿನಕ್ಕೆ ನಾಲ್ಕು ಬಾರಿ ತೊಳೆಯುತ್ತಾನೆ! ಆರಡಿ ಎತ್ತರದ ತೆಳ್ಳನೆಯ ಆಳು. ಸುಮಾರು ಇಪ್ಪತ್ತೆಂಟು ವರ್ಷ ವಯಸ್ಸು. ಚಿಬ್ಬಿಲಿನಂತೆ ಬಾಗಿದ ಕೆಂಪು ಮುಖ ಸಿಡುಬಿನಿಂದಾಗಿ ಹುಳುಕಾಗಿದೆ. ಮುಖವನ್ನೆಲ್ಲ ಆವರಿಸಿದಂತಿರುವ ದಪ್ಪ ಮೂಗು! ಹಣೆಯಲ್ಲಿ ಹುಬ್ಬಿನ ನಡುವೆ ಸಣ್ಣ

ಕೆಂಪು ಚಿಕ್ಕೆ! ಗುಬ್ಬಚ್ಚಿಯಂತೆ ಪುಟ್ಟ ಪುಟ್ಟ ಕಣ್ಣುಗಳು! ಕೆಳದುಟಿಗಿಂತ ಮೇಲುದುಟಿ ಚಿಕ್ಕದು. ಅದರಿಂದಾಗಿ ಉಬ್ಬುಹಲ್ಲುಗಳು ಸ್ಪಷ್ಟವಾಗಿ ಕಂಡು ಮುಖಕ್ಕೆ ಇನ್ನೂ ವಿಕಾರ ತಂದಿವೆ. ಅವನು ಪಂಚೆ ಉಡುವುದಿಲ್ಲ. ಯಾವತ್ತೂ ಷರಾಯಿ! ತಲೆ ಬಾಚಲು ಕನ್ನಡಿಯ ಮುಂದೆ ನಿಂತರಂತೂ ತೀರಿತು. ಬಾಚಿಬಾಚಿ ಮಡಗುತ್ತಾನೆ. ಸ್ನೋ ಪೌಡರು ಹಾಕಿಕೊಳ್ಳದೆ ಹೊರಕ್ಕೆ ಹೊರಡುವುದೇ ಇಲ್ಲ!

ಮಧ್ಯಾಹ್ನ ಎರಡೂವರೆ ಗಂಟೆಯಾಗಿದ್ದೀತು. ತಂಗಿಯನ್ನು ಹಿಂದಿಟ್ಟುಕೊಂಡು ಬಂದ ಲಿಂಗಣ್ಣ. ಇಲ್ಲದ ಬೆವರು ಹನಿಗಳನ್ನು ಚೌಕದಿಂದ ಒರೆಸಿಕೊಳ್ಳುತ್ತಾ ಎದುರಿಗಿದ್ದ ಚಾಪೆಯ ಮೇಲೆ ಕುಳಿತುಕೊಂಡ. ಅವನ ಪಕ್ಕದಲ್ಲಿ ಅವಳು ಲಜ್ಜೆಯಿಂದ ಮುದುಡಿಕೊಂಡು ಕುಳಿತಳು. ಅಷ್ಟೇನು ಬಿಳುಪಲ್ಲದ ಮುಖ. ಆದರೂ ಮೈಗೂಡಿದ್ದ ತಾರುಣ್ಯ! ಒಡ ಮೂಡಿದ್ದ ಸೌಂದರ್ಯ; ಅಡಿಕೆಲೆಗಳಿಂದ ರಂಗೇರಿದ ತುಟಿಗಳಿಂದಾದ ಕಿರುಗಣಿವೆ! ಮೂಗು ಬಾಯಿಗಳನ್ನು ಮುತ್ತಾಡುತ್ತಿದ್ದ ನಾಲ್ಕೈದು ಮುಂಗುರುಳುಗಳು. ಮೈಯನ್ನು ಕಂಡೂ ಕಾಣದಂತೆ ಮುಚ್ಚಿದ ಸಿಲ್ಕಿನ ಸೀರೆ! ಅರೆಜಾರಿದ್ದ ಸೆರಗಿನೊಳಗಿನಿಂದ ಇಣಿಕಿಹಾಕುತ್ತಿದ್ದ ತುಂಬು ಎದೆ. ಅವಳು ಕೋಣೆಯೊಳಗೆ ಕಾಲಿಡುತ್ತಲೂ ಕೋಣೆಯೇ ಘಮಾಯಿಸಿತು. ಹಿಂದುಗಡೆ ಮಲ್ಲಿಗೆ, ಮುಂದುಗಡೆ ಸ್ನೋ ಪೌಡರುಗಳ ವಾಸನೆ! ಕೈಲಿದ್ದ ಸಿಲ್ಕಿನ ಚೌಕವೂ ಪರಿಮಳ ಕಾರುತ್ತಿತ್ತು.''

''ಮೂರು ಘಂಟೆಯಾಗುತ್ತಲೂ ನಾನು ಎದ್ದೆ. ಅವನನ್ನೂ ಕರೆದೆ 'ಬರ್ತೀಯೇನಯ್ಯಾ ಸಿನಿಮಾಕ್ಕೆ ಅಂತ''

''ಇಲ್ಲಾ. ನೀನು ಹೋಗಿಬಾ. ನಾನು ಇಲ್ಲೆ ಇರಬೇಕು,-ಎಂದ''

''ಎಲ್ಲರೂ ಕೂಡಿ ಹೋಗೋಣ. ಬಾ ಎಂದೆ''

''ಇಲ್ಲಪ್ಪಾ ಕೆಲಸವಿದೆ'— ಎಂದ. ಹೆಚ್ಚು ಸೆಣಸಬಾರದೆಂದು ಒಬ್ಬನೇ ಹೊರಟೆ. ಬಿಸಿಲಿನ ಝಳ ತಾಳಲಾರದೆ ಒಂದು ಲೋಟ ತಂಪಾದ ಪಾನೀಯ ತೆಗೆದುಕೊಂಡು ಥಿಯೇಟರಿನ ದಾರಿ ಹಿಡಿದೆ. ಚಿತ್ರಗೃಹ ತಲುಪುತ್ತಲೂ 'ಹೌಸ್ ಫುಲ್' ಎಂದು ಬೋರ್ಡು

ಹಾಕಿದ್ದನ್ನು ನೋಡಿ ನಿರಾಶನಾದೆ. ಕೆಲಕಾರು ಸಾಬರು ಅಂಗಿ ತೆಗೆದು ಲಂಗೋಟಿಯಲ್ಲೇ ಜನಗಳ ತಲೆಯಮೇಲೆ ನಡೆದುಕೊಂಡು ಹೋಗಿ ಕಾಲುಕೆಳಗೆ ತೂರಿಕೊಂಡು ತಂದ ಬ್ಲಾಕ್ ಮಾರ್ಕೆಟ್ ಟಿಕೆಟ್ಟುಗಳೂ ಸಿಕ್ಕಲಿಲ್ಲ ನನ್ನ ಅದೃಷ್ಟಕ್ಕೆ! ಏನು ಮಾಡುವುದು?— ಎಂದು ಯೋಚಿಸುತ್ತಿರುವಾಗಲೇ 'ಕಮಿಂಗ್' ಗಳನ್ನು ನೋಡಿ ಮುಗಿಸಿದೆ. ಚಿತ್ರ ಆರಂಭವಾಗುತ್ತಲೂ ಇದ್ದ ಕೆಲವಾರು ಜನರೂ ಮಾಯವಾಗಿದ್ದರು. ಗೇಟ್ ಕೀಪರುಗಳು ಮಾತ್ರ ನಿಂತಿದ್ದರು ಬಾಗಿಲುಗಳಲ್ಲಿ. ನಾನೊಬ್ಬನೇ ಅಲ್ಲಿನಿಂತು ಏನು ಮಾಡುವುದು? ವಾಕ್ ಹೋಗಲಿಕ್ಕೆ ಇನ್ನೂ ಉರಿ ಬಿಸಿಲು! ಕೋಣೆಗೆ ಹೋಗದೆ ಉಪಾಯವಿಲ್ಲ ಎಂದು ಕೊಟಡಿಯ ಕಡೆ ಕಾಲುತಿರುವಿದೆ. ಲಿಂಗಣ್ಣನ ತಂಗಿ ಕೋಣೆಯಲ್ಲಿದ್ದಾಳೆ ಎಂದು ಜ್ಞಾಪಕದಲ್ಲಿದ್ದರೆ ನಾನಂತೂ ಕೋಣೆಗೆ ಬರುವ ಸಾಹಸ ಮಾಡುತ್ತಲೇ ಇರಲಿಲ್ಲ. ಬೇರೆಲ್ಲಾದರೂ ಹೋಗಿ ಕಾಲ ಕಳೆಯುತ್ತಿದ್ದೆ! ಆದರೆ ಅದನ್ನು ಸಂಪೂರ್ಣ ಮರೆತಿದ್ದೆ!"

"ಕೋಣೆಗೆ ಬಂದು ನೋಡುವಲ್ಲಿ ಕಿಟಕಿ ಮುಚ್ಚಿತ್ತು. ಬಾಗಿಲು ಒಳಗಿನಿಂದ ಅಗುಳಿ ಹಾಕಲ್ಪಟ್ಟಿತ್ತು. ಏನು ಈ ಬೇಸಿಗೆಯಲ್ಲೂ ಕಿಟಕಿ ಬಾಗಿಲು ಹಾಕಿಕೊಂಡು ಮಲಗಿದ್ದಾನೆ! ಒಳ್ಳೆಯ ವಿಚಿತ್ರ ಪುರುಷ'— ಎಂದುಕೊಂಡು ಕಿಟಕಿಯ ಸಂದಿನಿಂದ ನೋಡಿದೆ. ಅಬ್ಬಾ ಆದೃಶ್ಯ— ನನ್ನ ಜೀವನದಲ್ಲಿ ಮೊದಲನೆಯ ಬಾರಿ ನೋಡಿದ್ದು ಆ ದೃಶ್ಯ! ಅವಳ ಕತ್ತಿನ ಮೇಲೆ ಕೈಹಾಕಿ ಗಟ್ಟಿಯಾಗಿ ಎದೆಗೊತ್ತಿಕೊಂಡಿದ್ದ ಲಿಂಗಣ್ಣ. ತನ್ನ ತರಕಲುಗೆನ್ನೆಗಳನ್ನು ಅವಳ ಹಾಲುಗೆನ್ನೆಗಳಿಗೆ ಒತ್ತಿ ಉಜ್ಜುತ್ತಿದ್ದ. ಅವಳೂ ಕನ್ನಗಳ್ಳನಂತೆ—ನಿಧಾನವಾಗಿ ಅವನನ್ನು ತೋಳಿನಿಂದ ಬಿಗಿಯುತ್ತಿದ್ದಳು. ಕಿಸಕಿಸ ನಗುತ್ತಿದ್ದಳು. ಮುಖದಲ್ಲಿ ತೃಪ್ತಿಯಿತ್ತು. ಆತುರ ಇತ್ತು!

"ಮುಂದಿನ ಗಳಿಗೆಯಲ್ಲಿ!

ಅವಳು ಹಾಸಿಗೆಯಲ್ಲಿ ಉರುಳಿಕೊಂಡಳು........

—"ಹೆಣ್ಣಿನ ತಲೆ ಕೆದರಿತ್ತು. ಮುಡಿದ ಹೂ ಹಿಸುಕಿ ಹೋಗಿತ್ತು.

ಕುಂಕುಮ ಅಳಿಸಿಹೋಗಿತ್ತು. ಬ್ಲೌಜಿನ ಗುಂಡಿ ಕಳಚಿಹೋಗಿ ಮೈ ಕಾಣುತ್ತಿತ್ತು.

"ಏಕೆ ನೋಡಿದೆನೋ ಎಂದುಕೊಂಡೆ. ಮತ್ತೊಮ್ಮೆ ನನ್ನ ಜೀವಮಾನದಲ್ಲಿ ಈ ರೀತಿ ನೋಡಬಾರದು ಎಂದು ತೀರ್ಮಾನಿಸಿದೆ.

"ಇದೇ ಏನು ಇವನು ತಂಗಿಯೊಂದಿಗೆ ಬಾಗಿಲು ಮುಚ್ಚಿಕೊಂಡು ಮಾಡುವುದು?—ನನ್ನ ಕೋಣೆಯಲ್ಲಿ ಇಂಥಾ ಕೆಲಸವಾಗುವುದೇ?-ಸಾವಿರ ಯೋಚನೆಗಳು ಮೆದುಳನ್ನು ಕಾಡಿದುವು."

"ಬಾಗಿಲು ತಟ್ಟಲಿಲ್ಲ. ಸುಮ್ಮನೆ ಹೋಗಿ ಹೊರಗಡೆ ನಿಂತು ಕಾಯುತ್ತಿದ್ದೆ. ಸುಮಾರು ಐದು ನಿಮಿಷಗಳ ವರೆಗೆ ನಿಂತಿರ ಬಹುದು. ಅನಂತರ ಮೆಲ್ಲನೆ ಕಿಟಕಿ ತೆರೆಯಿತು. ಬಾಗಿಲು ತೆರೆಯಿತು. ಒಳಕ್ಕೆಹೋದೆ. ಅವನು ಷರಾಯಿ ತೆಗೆದಿಟ್ಟು ಬರೀ ನಿಕ್ಕರಿನಲ್ಲಿದ್ದ. 'ಅಬ್ಬಾ! ಏನು ಸೆಕೆ? ಬಿಸಿಲು'! ಎಂದು ಕೈಯ್ಯಿಂದ ಗಾಳಿ ಹಾಕಿಕೊಳ್ಳು ತ್ತಿದ್ದ. ಅವಳು ತುಟಿಯಲ್ಲೇ ನಗುತ್ತಿದ್ದಳು ಆ ಮಾತು ಕೇಳಿ.

"ಅವನು ಹಸೆಗಿಡುತ್ತಿದ್ದ ಕೆಂಪಿನ ಡಬ್ಬಿ ಅವಳ ಕೈಲಿತ್ತು. ಅದರಿಂದ ಕುಂಕುಮ ಇಟ್ಟುಕೊಳ್ಳಲು ತೊಡಗಿದ್ದಳು. ನನ್ನ ಆರಕ್ತ ಮುಖ ನೋಡಿ ಇಬ್ಬರ ಮುಖವೂ ಸ್ವಲ್ಪ ಕಪ್ಪಿಟ್ಟುಕೊಂಡವು. ತಮ್ಮ ತಂತ್ರ! ಮೋಸ! — ಎಲ್ಲವೂ ರಟ್ಟಾಯಿತೇನೋ ಎಂದು. ಲಿಂಗಣ್ಣ ಅವಳಿಗೆ ನನ್ನ ಹಾಸಿಗೆಯನ್ನು ಹಾಸಿದ್ದ. ಅವಸರದಲ್ಲಿ ಅವಳು ಅದನ್ನು ಬರಬರ ಸುತ್ತಿಬಿಟ್ಟಿದ್ದಳು. ಪುನಃ ನಾನು ನೋಡಿಕೊಳ್ಳಲಿಲ್ಲ. ಅವಳದೇ ಈ ಬಾಡಿದ ಹೂ!" ಎಂದುಹೇಳಿದ ಚಂದ್ರು.

'ಲಿಂಗಣ್ಣನಿಗೆ ಮದುವೆಯಾಗಿಲ್ಲವೇನೋ?'—ಎಂದು ಕುತೂಹಲ ದಿಂದ ಕೇಳಿದೆ.

'ಆ ಕಾಮಣ್ಣನಿಗೆ ಹೆಣ್ಣು ಕೊಡುವವರಾರೋ........ಅನೇಕ ಹೆಣ್ಣು ಗಳು ಇವನ ಮುಖ ನೋಡಿ ಆಗೋದಿಲ್ಲ. ಎಂದು ಹಟಹಿಡಿದವಂತೆ.

" ನಿನ್ನೆ ರಾತ್ರಿ ವಿಶ್ವಪ್ರಯತ್ನಪಟ್ಟು ಇದರ ಪೂರ್ವ ಕಥೆಯನ್ನು ಕೇಳಿದೆ. ಅದರ ಸಾರಾಂಶವಿಷ್ಟು—

" ಇವಳ ತಂದೆ ತಾಯಿಗಳು ಇವಳನ್ನು ಸಾಹುಕಾರ ಮುದಿಗೂಬೆಯೊಂದಕ್ಕೆ ದುಡ್ಡಿಗಾಗಿ ಮದುವೆ ಮಾಡಿದ್ದಾರೆ. ಗಾಂಧಿನಗರದಲ್ಲಿ ಒಳ್ಳೆಯ ಮಹಲಿನಲ್ಲಿ ಇವಳೊಂದಿಗೆ ಇದ್ದಾನೆ ಆತ. ಕುಡಿವ ನೀರು ಅಲ್ಲಾಡದಷ್ಟು ಸುಖ ಅವಳಿಗೆ. ಪಾಪ! ಮುದುಕ ತಡಿಯಬಲ್ಲನೆ ಇವಳನ್ನು ! ಅಡಗಿಸಿ ತಣಿಸಬಲ್ಲನೆ ಇವಳ ಕಾಮ ಚೇಷ್ಟೆಯನ್ನು— ಅವನಿಂದಾಗಲಿಲ್ಲ. ಯೌವನ ತಡೆಯಲಾಗಲಿಲ್ಲ ಇವಳಿಗೆ. ಅಲ್ಲಿ ಇಲ್ಲಿ ಹುಡುಕತೊಡಗಿದಳು. ಲಿಂಗಣ್ಣನೂ ಯುವಕ! ಮದುವೆ ಇಲ್ಲ. ಏನೇನೋ ಕಮಾಲು ಮಾಡಿ ಹಕ್ಕಿಯನ್ನು ಬಲೆಗೆ ಹಾಕಿಕೊಂಡ. ಅವಳಿಗೂ ಇಂಥವರು ಬೇಕಿತ್ತು. ಅವನಿಗೂ...."

'ಅದಿರಲಿ. ಮುದುಕನಿಗೆ ಸಂಶಯ ಬರಲಿಲ್ಲವೇ?'

"— ಇವಳ ಮನೆಯಲ್ಲಿ ಮನೆಗೆಲಸಕ್ಕೆ ಒಬ್ಬ ಮುದುಕಿ ಇದ್ದಾಳೆ. ಎಲ್ಲಿ ಹೋಗಲಿ ಎಲ್ಲಿ ಬರಲಿ, ಆ ಮುದುಕಿಯನ್ನು ಕರೆತರುತ್ತಾಳೆ ಮುದುಕನ ಸಂಶಯ ನಿವಾರಣೆಗಾಗಿ. ಮುದುಕಿಯೇ ಲಿಂಗಣ್ಣನಿಗೂ ಇವಳಿಗೂ ಗಂಟುಹಾಕಿ ಎರಡೂ ಕಡೆ ಕಮಿಷನ್ ತಿನ್ನುತ್ತಿರುವಳು. ಇವಳಿಗೆ ಅನುಕೂಲವಾದ ದಿನ ಮುದುಕಿಯೊಂದಿಗೆ ಲಿಂಗಣ್ಣನಿಗೆ ಹೇಳಿಕಳುಹಿಸುತ್ತಾಳೆ. ಮುದುಕಿ ಅವಳನ್ನು ಕರೆದುಕೊಂಡು ಬಂದು ಬಿಟ್ಟು ತಾನು ಚಿಕ್ಕಲಾಲ್ ಬಾಗಿನಲ್ಲಿ ಮರದ ಕೆಳಗೆ ಮಲಗುತ್ತಾಳೆ. ಈಕೆ ತನ್ನ ಚಟ ಚೈನಿ ತೀರಿಸಿಕೊಂಡಾದ ಮೇಲೆ ಚಿಕ್ಕಲಾಲ್‌ಬಾಗಿಗೆ ಹೋಗಿ ಮುದುಕಿಯೊಂದಿಗೆ ಮನೆ ಸೇರುತ್ತಾಳೆ. : ಈಗ ಗೊತ್ತಾಯಿತು. ಲಿಂಗಣ್ಣ ಆಗಾಗ್ಗೆ ತಲೆನೋವು ಅಂತ ರಜಾಕ್ಕೆ ಬರೆದು ಕೋಣೆಯಲ್ಲಿ ಉಳಿದುಕೊಳ್ಳುತ್ತಿದ್ದುದು ಏಕೆ ಅಂತ!'

ಹೇಳಿ ಮುಗಿಸಿದ ಚಂದ್ರ. ನನಗೆ ಆಶ್ಚರ್ಯವಾಯಿತು. ದುಃಖವಾಯಿತು.

'ಅಲ್ಲಾ ಪ್ರಪಂಚದಲ್ಲಿ ಹೀಗೂ ಉಂಟೇ ?' ಎಂದೆ.

‘ಏಳೋ ಕಪಿ, ಮೂರು ಗಂಟೆಯಾಯಿತು ನಿನ್ನೆಯಂತೆ ವಾಪಸು ಬರಬೇಕಾಗಿತ್ತು [illegible]

“ನಿನ್ನೆಯ ದೃಶ್ಯ ಇವತ್ತೂ ಇರುವಂತಿದ್ದರೆ ಬರಬಹುದಾಗಿತ್ತು”

‘ಏಳೋ ಪೋಕರಿ!’ ಎಂದು ಚಂದ್ರ ಎದ್ದುಹೊರಟ. ನಾನೂ ಅವನನ್ನು ಹಿಂಬಾಲಿಸಿದೆ.

—:o:—

ಮುದ್ರಣಕಾರರು;—ಶ್ರೀ ರಾಧಾಕೃಷ್ಣ ಪ್ರಿಂಟಿಂಗ್ ವರ್ಕ್ಸ್
ಬೆಂಗಳೂರು ನಗರ.